# ದೇವರ ಪ್ರಸನ್ನತೆ




ಆಶೀಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಫೆಬ್ರವರಿ 2013

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಟ್‌ಫೈರ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - The Presence of God)

# ದೇವರ ಪ್ರಸನ್ನತೆ

ದೇವರ ಪ್ರಸನ್ನತೆ

# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | ದೇವರು ಹೆಚ್ಚಾಗಿ ಬೇಕೆಂಬ ಹಂಬಲ | 2 |
| 2. | ಆತನ ಪ್ರಸನ್ನತೆಯಲ್ಲಿ | 22 |
| 3. | ಆತನ ಪ್ರಸನ್ನತೆಯ ಸ್ಪಷ್ಟ ತೋರ್ಪಡಿಸುವಿಕೆ | 35 |
| 4. | ಆತನ ಪ್ರಸನ್ನತೆಯ ಬೆಂಕಿ | 45 |
| 5. | ಆತನ ಪ್ರಸನ್ನತೆಯ ಬೆಳಕು | 53 |
| 6. | ಆತನ ಪ್ರಸನ್ನತೆಯ ಮಳೆ | 59 |
| 7. | ಆತನ ಪ್ರಸನ್ನತೆಯ ಮಹಿಮೆ | 62 |
| 8. | ಆತನ ಪ್ರಸನ್ನತೆಯ ಬಲ | 71 |
| 9. | ದೇವರ ಪ್ರಸನ್ನತೆಯನ್ನು ಸಾಂಘಿಕವಾಗಿ ಸ್ವಾಗತಿಸುವುದು | 75 |

# ಪೀಠಿಕೆ

ಈ ಪುಸ್ತಕವು ಮುಖ್ಯವಾಗಿ ದೇವರ ವಾಕ್ಯದಿಂದ ದೇವರ ಮಹಿಮೆಯುಳ್ಳ ಪ್ರಸನ್ನತೆಯ ಕುರಿತ ಅಧ್ಯಯನವಾಗಿದೆ. ಪರಿಶುದ್ಧ ಗ್ರಂಥಗಳು ದೇವರ ಪ್ರಸನ್ನತೆಯ ಕುರಿತು ಪ್ರಕಟಿಸುವುದೇನು ಎಂಬುದನ್ನು ವ್ಯಾಖ್ಯಾನಿಸುವುದು ಧ್ಯೇಯವಾಗಿದ್ದು, ಅದರಿಂದ ವಿಶ್ವಾಸಿಗಳು ದೇವರನ್ನು ಹುಡುಕಲು ಪ್ರೇರಿತರಾಗುವರು ಮತ್ತು ಪ್ರಚೋದನೆ ಹೊಂದುವರು ಮತ್ತು ಆತನ ಪ್ರಸನ್ನತೆಗೆ ಅಧಿಕವಾಗಿ ದಾಹಗೊಳ್ಳುವರು.

ಈ ಪುಸ್ತಕವು ಅಧಿಕವಾಗಿ ವೈಯುಕ್ತಿಕ ಯೋಚನೆಗಳ ಅಥವಾ ವಿವರಣೆಗಳನ್ನು ಒಳಗೊಂಡಿಲ್ಲ. ಇಲ್ಲಿನ ಪುಟಗಳಲ್ಲಿ ಸಂಗ್ರಹವಾಗಿರುವ ದೇವರ ವಾಕ್ಯಗಳನ್ನು ಧ್ಯಾನಿಸಲು, ಓದುಗರನ್ನು ನಾನು ಆಹ್ವಾನಿಸುತ್ತೇನೆ. ಆತನ ಪ್ರಸನ್ನತೆಯ ಕುರಿತು ದೇವರ ವಾಕ್ಯದಲ್ಲಿ ನೆನೆಯಿರಿ. ನಿಮ್ಮ ಜೀವಿತಗಳಿಗೆ ಆತನ ಪ್ರಸನ್ನತೆಯನ್ನು ಅನುಭವಿಸುವುದನ್ನು ನಿರೀಕ್ಷಿಸಿರಿ. ಆತನ ಪ್ರಸನ್ನತೆಗೆ ಹೆಚ್ಚಾಗಿ ಹಸಿವು ಮತ್ತು ದಾಹವುಳ್ಳವರಾಗಿರಿ.

ಹಳೆ ಮತ್ತು ಹೊಸ ಒಡಂಬಡಿಕೆಗಳಲ್ಲಿ ಕರ್ತನ 'ಪ್ರಸನ್ನತೆ'ಯು ವಾಸ್ತವವಾಗಿ ಕರ್ತನ 'ಮುಖ' ಎಂಬ ಅರ್ಥ ಹೊಂದಿದೆ. ಆತನ ಪ್ರಸನ್ನತೆಯಲ್ಲಿರುವುದೆಂದರೆ, ಸಾಮಾನ್ಯವಾಗಿ ಆತನ ಮುಖವನ್ನು ಹುಡುಕುವ ಸ್ಥಳದಲ್ಲಿರುವುದೆಂಬುದಾಗಿ ಅರ್ಥ. ನೀವು ಆತನ ಮುಖವನ್ನು ದಿಟ್ಟಿಸಿ ನೋಡುವವರಾಗಿರುತ್ತೀರಿ. ನೀವು ಕರ್ತನ ಸೌಂದರ್ಯವನ್ನು ನೋಡುವವರಾಗಿರುತ್ತೀರಿ. ನೀವು ದೇವರೊಂದಿಗೆ ಮುಖಾಮುಖಿಯಾಗಿರುತ್ತೀರಿ. ನೀವು ಇವುಗಳನ್ನು ಮಾಡುವಾಗ, ನೀವು ಕರ್ತನ ಪ್ರಸನ್ನತೆಯಲ್ಲಿರುವಿರಿ.

ಇತರ ವಿಶ್ವಾಸಿಗಳ ಜೊತೆಗೂಡಿ ಕರ್ತನನ್ನೂ, ಆತನ ಪ್ರಸನ್ನತೆಯನ್ನು ಒಟ್ಟಾಗಿ, ಸಾಂಘಿಕವಾಗಿ ಹುಡುಕಿರಿ.

ಆತನೊಂದಿಗಿರುವುದು ಮತ್ತು ಆತನ ಪ್ರಸನ್ನತೆ ಅನುಭವಿಸುವದಕ್ಕೆ ಭೂಮಿಯ ಮೇಲಿರುವ ಯಾವುದನ್ನೂ ಹೋಲಿಸಲಾಗುವುದಿಲ್ಲ. ದೇವರು ಹೆಚ್ಚಾಗಿ ಬೇಕೆಂದು ಅತ್ಯಾಸೆ ಹೊಂದಿದವರಾಗಿರಿ!

ಆಶೀರ್ವಾದದೊಂದಿಗೆ!

ಆಶಿಷ್ ರಾಯ್‌ಚೂರ್

# 1

# ದೇವರು ಹೆಚ್ಚಾಗಿ ಬೇಕೆಂಬ ಹಂಬಲ

ಮೋಶೆಯು ದೇವರನ್ನು ಅಧಿಕವಾಗಿ ಅನುಭವಿಸಿದ ಮನುಷ್ಯನಾಗಿದ್ದಾನೆ. ಮೋಶೆಯು ದೇವರನ್ನು ಉರಿಯುವ ಮುಳ್ಳಿನ ಪೊದೆಯೊಳಗೆ ಸಂಧಿಸಿದನು (ವಿಮೋಚನ ಕಾಂಡ 3:1-5). ಅವನು ಕಿವಿಗೆ ಕೇಳಿಸುವಂತ ದೇವರ ಸ್ವರವನ್ನು ಕೇಳಿಸಿಕೊಂಡವನು. ಅವನು ದೇವರ ಕೋಲನ್ನು ಹಿಡಿದು ಸಾಗಿದನು ಮತ್ತು ಐಗುಪ್ತ್ಯದಲ್ಲಿ ದೇವರ ಮಹತ್ವ, ಅದ್ಭುತ ಕಾರ್ಯಗಳನ್ನು ನೋಡಿದನು. ಕಾರ್ಮುಗಿಲು ಮತ್ತು ಬೆಂಕಿಯ ಸ್ತಂಭಗಳಲ್ಲಿ ಮೋಶೆಯು ದೇವರ ಪ್ರಸನ್ನತೆಯ ತೋರ್ಪಡಿಸುವಿಕೆಯನ್ನು ನೋಡಿದನು. ಅವನು ದೇವ ಜನರನ್ನು ವಾಗ್ದಾನದ ಪ್ರದೇಶದೆಡೆಗೆ ನಡೆಸುವಾಗ, ಪ್ರಯಾಣದಲ್ಲಿ ಮಹತ್ತಾದ ಅದ್ಭುತ ಕಾರ್ಯಗಳನ್ನು ನೋಡಿದನು. ಮೋಶೆಯು ದೇವರನ್ನು ಮುಖಾಮುಖಿ ಸಂಧಿಸಿದನು (ವಿಮೋಚನ ಕಾಂಡ 19:9, 16-20, 33:9-11) ಮತ್ತು ಎರಡು ಸಂದರ್ಭಗಳಲ್ಲಿ ಆಹಾರವಿಲ್ಲದೆ, ದೇವರ ಮಹಿಮೆಯಿಂದ ಸಂರಕ್ಷಣೆ ಹೊಂದಿ ನಾಲ್ವತ್ತು ದಿವಸಗಳ ದೇವರ ಪ್ರಸನ್ನತೆಯ ತೋರ್ಪಡಿಸುವಿಕೆಯಲ್ಲಿದ್ದನು (ವಿಮೋಚನ ಕಾಂಡ 24:12-18; 34:28-30). ದೇವರು, ಮೋಶೆಗೆ, ಆತನ ಪ್ರಸನ್ನತೆಯ ದೇವದೂತರು ಆತನ ಜನರೊಡನೆ ಹೋಗುವರೆಂದು ದೃಢಪಡಿಸಿದ್ದನು (ವಿಮೋಚನಕಾಂಡ 23:20-23; 32:34; 33:2, ಯೆಶಾಯ 63:9) ಮತ್ತು ಮೋಶೆಗೆ ಆತನ ಪ್ರಸನ್ನತೆಯ ವಾಗ್ದಾನವನ್ನು ಕೂಡ ನೀಡಿದ್ದನು (ವಿಮೋಚನಕಾಂಡ 33:14).

ಇಂತಹ ಎಲ್ಲಾ ಮಹಿಮೆಯುಳ್ಳ ಸಂದರ್ಶನಗಳು ಮತ್ತು ಬಲಯುತ ಅನುಭವಗಳನ್ನು ಪಡೆದ ಮೇಲೂ ಮೋಶೆಯು ''ಕರ್ತನೇ, ನಿನ್ನ ಮಹಿಮೆಯನ್ನು ನನಗೆ ತೋರಿಸು! ಎಂಬುದಾಗಿ ಪ್ರಾರ್ಥಿಸಿದನು (ವಿಮೋಚನಕಾಂಡ 33:18). ವಾವ್! ಇದು ದೇವರು ಹೆಚ್ಚಾಗಿ ಬೇಕೆಂಬ ಅವನ ಹಸಿವನ್ನು ತೋರಿಸುತ್ತದೆ.

ನಮ್ಮ ಜೀವಿತಗಳಲ್ಲಿ ದೇವರನ್ನು ಎಷ್ಟು ಅನುಭವಿಸಬೇಕೆಂಬುದಾಗಿ ಇತಿಮಿತಿಯಿಲ್ಲ. ಇದು ಸಂಪೂರ್ಣವಾಗಿ ದೇವರು ಹೆಚ್ಚಾಗಿ ಬೇಕೆಂಬ ನಮ್ಮ ಹಂಬಲ ಮತ್ತು ಆತನ ಪ್ರಸನ್ನತೆಯ ಹಸಿವು ಮತ್ತು ದಾಹದ ಮೇಲೆ ಆಧಾರಿತಗೊಂಡಿದೆ. ಆತನು ಅಪರಿಮಿತವಾದವನು. ಆತನಿಗೆ ಯಾವುದೇ ಇತಿಮಿತಿಗಳಿಲ್ಲ. ನಾವು ಇಷ್ಟಪಡುವಷ್ಟು ಆತನನ್ನು ಹೆಚ್ಚು ಹೆಚ್ಚಾಗಿ ''ಅನುಭವ ಸವಿದು ನೋಡಬಹುದು'' ಅಥವಾ ''ರುಚಿಸಿ ನೋಡಬಹುದು!''

**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ. ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು** (ಕೀರ್ತನೆಗಳು 34:8).

ನಾವು ದೇವರನ್ನು ಅನುಭವಿಸಿರುವುದು ಆತನು ಏನಾಗಿದ್ದಾನೆ ಅನ್ನುವುದರಲ್ಲಿ ಬರೀ ಸ್ವಲ್ಪವಾದುದಾಗಿದೆ. ಇನ್ನೂ ಸಹ ನಾವು ದೇವರನ್ನು ಅನುಭವದಿಂದ ತಿಳಿದುಕೊಳ್ಳಬೇಕಾದದು ಬಹಳ ಅಧಿಕವಾಗಿದೆ.

**ಯೆಹೋವನು ಮಹೋನ್ನತನೂ, ಮಹಾ ಸ್ತುತಿ ಪಾತ್ರನೂ ಆಗಿದ್ದಾನೆ** (ಕೀರ್ತನೆಗಳು 145:3)

ಈ ಅಧ್ಯಯನವು ನಿಮ್ಮನ್ನು ದೇವರು ಹೆಚ್ಚಾಗಿ ಬೇಕೆಂಬ ಹಂಬಲಕ್ಕೆ ಪ್ರೇರಿಸಲು ಅವಶ್ಯಕವಾದ ಪರಿಶುದ್ಧ ಗ್ರಂಥದ ಸಂಗ್ರಹಣೆಯಾಗಿದೆ.

## ದೇವರು ಹೆಚ್ಚಾಗಿ ಬೇಕೆಂದು ಹಸಿವುಗೊಳ್ಳುವುದು

ದೇವರು ಹೆಚ್ಚಾಗಿ ಬೇಕೆಂಬುವ ಹಸಿವೆಯನ್ನು - ಆತನ ಪ್ರಸನ್ನತೆಯಲ್ಲಿ ಆತನೊಡನೆ ಇರಬೇಕೆಂಬ ಬಯಕೆಯನ್ನು ತೋರಿಸುವಂತಹ ವಾಕ್ಯಗಳನ್ನು ಅವಲೋಕಿಸಿರಿ.

**ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನ ಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ! ಎದುರು ನೋಡುತ್ತಿರುವೆನು. ನನ್ನ ಸಾನಿಧ್ಯಕ್ಕೆ ಬಾ ಎಂಬ ನಿನ್ನ ಮಾತಿಗೆ ನಾನು ಯೆಹೋವನೇ, ನಿನ್ನ ಸಾನಿಧ್ಯಕ್ಕೆ ಬಂದೇ ಬರುವೆನು ಎಂದು ಉತ್ತರ ಕೊಟ್ಟೆನು** (ಕೀರ್ತನೆಗಳು 27:4, 8).

ನಾವು ಆತನ ಪ್ರಸನ್ನತೆಯಲ್ಲಿ ಆತನೊಡನೆ ಇರಲು ಹಂಬಲಿಸುವ ''ಒಂದೇ ವಿಷಯ'' ಇರುವ ಸ್ಥಳಕ್ಕೆ ಬರಬಹುದೋ? ಆತನ ಸೌಂದರ್ಯವನ್ನು ದಿಟ್ಟಿಸಿ ನೋಡುವುದು ಎಂದರೆ ಆತನು ಏನಾಗಿದ್ದಾನೋ ಆ ಭವ್ಯತೆ, ಆತನ ಘನತೆ (ಪ್ರಭಾವ) ಆತನ ಮಹೋನ್ನತೆ, ಆತನ ಅಪರಿಮಿತ ಕರುಣೆ, ಒಳ್ಳೆಯತನ ಮತ್ತು ಸೌಜನ್ಯದಿಂದ ಮುಗ್ಧರಾಗುವುದು ಮತ್ತು ಮೋಹಗೊಳ್ಳುವುದಾಗಿದೆ.

ದೇವರು, ಆತನ ಮುಖವನ್ನು ಹುಡುಕಲು ನಮ್ಮನ್ನು ಆಹ್ವಾನಿಸುತ್ತಾನೆ. ಆತನು ನಮಗೆ ''ನನ್ನ ಮುಖವನ್ನು ಹುಡುಕಿರಿ'' ಎಂಬುದಾಗಿ ಹೇಳುತ್ತಾನೆ. ಆತನ ಮುಖವನ್ನು ಹುಡುಕುವುದು ಎಂದರೆ ಆತನನ್ನು ಹೆಚ್ಚಾಗಿ ತಿಳಿಯಬೇಕೆಂಬ ಹಂಬಲದೊಡನೆ ಕರ್ತನ ಸೌಂದರ್ಯದ ಮೇಲೆ ನಮ್ಮ ದೃಷ್ಟಿಯನ್ನು

ನೆಲೆಗೊಳಿಸುವುದಾಗಿದೆ. ಆತನು ಏನಾಗಿದ್ದಾನೆ ಎಂಬುದರಲ್ಲಿ ನಾವು ಚಿತ್ತಾಕರ್ಷಣೆ ಹೊಂದಿದ್ದೇವೆ. ನಾವು ಆತನಲ್ಲಿ ಪರವಶಗೊಂಡಿದ್ದೇವೆ ಮತ್ತು ನಮ್ಮ ಗಮನದಲ್ಲಿ ಆತನೊಡನೆ ನಿರತರಾಗಿದ್ದೇವೆ. ಆತನ ಮೇಲೆ ಕೇಂದ್ರೀಕೃತರಾಗಿದ್ದೇವೆ. ನಮ್ಮ ಆಲೋಚನೆಗಳು ಆತನ ಮಹಿಮೆಯ ಮೇಲೆ ನುಲಿಯಲ್ಪಟ್ಟಿವೆ. ನಾವು ಪೂರ್ಣವಾಗಿ ಆತನ ಘನತೆಯಿಂದ ಮಗ್ನರಾಗಿದ್ದೇವೆ. ನಾವು ಸಂಪೂರ್ಣವಾಗಿ ಆತನ ಮಹೋನ್ನತ ಭವ್ಯತೆಯಿಂದ ಮೋಹಗೊಂಡಿದ್ದೇವೆ. ನಾವು ಆತನಲ್ಲಿ ಭಯಭಕ್ತಿಯುಳ್ಳವರಾಗಿ ನಿಲ್ಲುತ್ತೇವೆ. ಆತನು ಹೇಳುವುದೇನು ಎಂಬುದನ್ನು ಕೇಳಲು ನಾವು ಕಾತರಿಸುತ್ತೇವೆ. ಆತನು ಇಚ್ಛಿಸಿದಂತೆ ನಮ್ಮ ಮೇಲೆ ಆತನು ಚಲನೆ ಹೊಂದಲು ನಾವು ಕಾಯುತ್ತಿದ್ದೇವೆ. ನಾವು ಆತನ ಮುಖವನ್ನು ಹುಡುಕುವವರಾಗಿದ್ದೇವೆ.

**ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೆ ಬಯಸುವುದೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ. ನನ್ನ ಮನಸ್ಸು ದೇವರಿಗಾಗಿ, ಚೈತನ್ಯ ಸ್ವರೂಪನಾದ ದೇವರಿಗಾಗಿ ಹಾರೈಸುತ್ತದೆ; ನಾನು ಯಾವಾಗ ಹೋಗಿ ದೇವರ ಸನ್ನಧಿಯಲ್ಲಿ ಸೇರುವೆನೋ?** (ಕೀರ್ತನೆಗಳು 42:1,2)

ದೇವರಿಗಾಗಿ ನಮ್ಮ ಹಸಿವು ಎಷ್ಟು ತೀಕ್ಷ್ಣವಾಗಿದೆ? ಬೇಟೆಗಾರನಿಂದ ತಪ್ಪಿಸಿಕೊಂಡು ನೀರಿಗಾಗಿ ಬಾಯಾರಿಕೆಯಿಂದಿರುವ ಜಿಂಕೆಯಂತೆ - ನಮ್ಮ ಆಂತರ್ಯವು ದೇವರಿಗಾಗಿ ಮತ್ತು ಆತನ ಪ್ರಸನ್ನತೆಗಾಗಿ ದಾಹಗೊಂಡಿದೆಯೋ? ನಮಗೆ ಆತನು ಹೆಚ್ಚಾಗಿ ಬೇಕೆಂಬುದಾಗಿ ನಾವು ಅತೀವ ದಾಹಗೊಳ್ಳುವುದು ಅವಶ್ಯ.

**ದೇವರೇ, ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರು ನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ; ಶರೀರವು ಕಂದಿ ಹೋಗುತ್ತದೆ. [2]ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ, ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ. [8]ನನ್ನ ಆತ್ಮವು ನಿನ್ನನ್ನು ಅಂಟಿಕೊಂಡು ಹಿಂಬಾಲಿಸಿರುವದು; ನಿನ್ನ ಬಲಗೈ ನನಗೆ ಆಧಾರವಾಗಿರುವದು** (ಕೀರ್ತನೆಗಳು 63:1, 2,8)

ಹೇಗೆ ನಮ್ಮ ಭೌತಿಕ ದೇಹಗಳು ಬಿಸಿ ಮತ್ತು ಒಣ ಸಮಯಗಳಲ್ಲಿ ನೀರಿಗಾಗಿ ತವಕಿಸುತ್ತದೋ ಅದೇ ರೀತಿಯಾಗಿ ನಮ್ಮ ಆಂತರ್ಯವು ಸಹ ದೇವರಿಗಾಗಿ ದಾಹಗೊಂಡಿರಬೇಕು.

ದೇವರಿಗಾಗಿಯೆ ಇಂತಹ ಇಚ್ಛೆಯ ಪ್ರೇರಣೆಗಳು ದಾವೀದನು ದೇವರನ್ನು ಸೂರ್ಯೋದಯಕ್ಕೆ ಮುಂಚಿತವಾಗಿ, ಅಂದರೆ ಮೊದಲೇ ಎದ್ದು ಕುತೂಹಲದಿಂದ

ಎದುರು ನೋಡುವಂತೆ ಮಾಡಿತು. ನಮ್ಮ ಶರೀರವು ಕೂಡ ದೇವರನ್ನು ಅನುಭವಿಸಲು ಹಂಬಲಿಸುವಂತಹ ದೃಷ್ಟಿಯಲ್ಲೂ ದೇವರಿಗಾಗಿ ಮತ್ತು ಆತನ ಪ್ರಸನ್ನತೆಗಾಗಿ ಇಚ್ಛೆ ಪಡುವುದರಲ್ಲೂ ಯಾವುದೇ ತಪ್ಪಿಲ್ಲ. ದಾವೀದನು, ದೇವರ ಬಲವನ್ನು ಮತ್ತು ಮಹಿಮೆಯನ್ನು ಆತನ ಸನ್ನಿಧಿಯಲ್ಲಿ ಕಾಣಬೇಕೆಂದು ಅಪೇಕ್ಷಿಸುತ್ತಾನೆ. ದೈವಿಕ ಪ್ರಸನ್ನತೆಯ, ನಮ್ಮ ಪ್ರಯತ್ನವು ನಾವೆಲ್ಲರೂ ಒಟ್ಟಾಗಿ ಆತನ ಪವಿತ್ರ ಸ್ಥಳದಲ್ಲಿ ಆತನ ಬಲ ಮತ್ತು ಮಹಿಮೆಯನ್ನು ತೋರ್ಪಡಿಸಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದಾಗಿರಬೇಕು.

**ಪರಲೋಕದಲ್ಲಿ ನನಗೆ ನೀನಲ್ಲದೆ ಮತ್ತಾರು ಅವಶ್ಯ? ಇಹಲೋಕದಲ್ಲಿ ನೀನಲ್ಲದೆ ಇನ್ನ್ಯಾರನ್ನೂ ಬಯಸುವುದಿಲ್ಲ** (ಕೀರ್ತನೆಗಳು 73:25)

ಇಹಲೋಕದಲ್ಲಿ ಕರ್ತನನ್ನು ಹೊರತು ಇನ್ನಾರನ್ನೂ ಬಯಸದ ಸ್ಥಳಕ್ಕೆ ನಾವು ಬರಬಹುದೋ!

**ಸೇನಾಧೀಶ್ವರನಾದ ಯೆಹೋವನೇ, ನಿನ್ನ ನಿವಾಸಗಳು ಎಷ್ಟೋ ರಮ್ಯವಾಗಿವೆ. [2]ಯೆಹೋವನ ಆಲಯದ ಅಂಗಳಗಳಲ್ಲಿ ಸೇರಬೇಕೆಂದು ನನ್ನ ಆತ್ಮವು ಹಂಬಲಿಸುತ್ತಾ ಕುಂದಿ ಹೋಗಿತ್ತು (ಆದರೆ ಈಗ) ಚೈತನ್ಯ ಸ್ವರೂಪನಾದ ದೇವರಿಗೆ ನನ್ನ ತನುಮನಗಳಿಂದ ಹರ್ಷಧ್ವನಿ ಮಾಡುತ್ತೇನೆ. [3]ಅಹಾ, ಸೇನಾಧೀಶ್ವರನಾದ ಯೆಹೋವ ದೇವರೇ; ನನ್ನ ಅರಸನೇ, ನಿನ್ನ ವೇದಗಳ ಸಮೀಪದಲ್ಲಿಯೇ ಗುಬ್ಬಿಗೆ ಮನೆಯೂ ಪಾರಿವಾಳಕ್ಕೆ ಮರಿ ಮಾಡುವ ಗೂಡೂ ದೊರಕಿತಲ್ಲಾ! [4]ನಿನ್ನ ಮಂದಿರದಲ್ಲಿ ವಾಸಿಸುವವರು ಧನ್ಯರು. ಅವರು ನಿತ್ಯವೂ ನಿನ್ನನ್ನು ಕೀರ್ತಿಸುತ್ತಾ ಇರುತ್ತಾರೆ.** ಸೆಲಾ (ಕೀರ್ತನೆಗಳು 84:1-4)

ಕೀರ್ತನೆಗಳು 84ರಲ್ಲಿನ ಈ ವಚನಗಳು ದೇವರಿಗಾಗಿ ತೀಕ್ಷ್ಣತೆಯಿಂದ ಹಸಿವು ಹೊಂದಿರಬೇಕೆಂಬುದಾಗಿ ಮತ್ತೊಮ್ಮೆ ವಿವರಿಸುತ್ತವೆ. ಅವನ ಹೃದಯ ಮತ್ತು ದೇಹವು ''ಮೊರೆಯಿಡುತ್ತದೆ'', ಅಥವಾ ''ಕೂಗಿಕೊಳ್ಳುತ್ತದೆ''. ಅಂದರೆ ಜೀವಿಸುವ ದೇವರಿಗಾಗಿ ''ಸ್ವರವೆತ್ತಿ ಕೂಗುತ್ತದೆ'' ಎಂಬುದಾಗಿ ವಾಸ್ತವದ ಅರ್ಥವಾಗಿದೆ. ಕೀರ್ತನೆಗಾರನು, ದೇವರಿಗಾಗಿ ಕುತೂಹಲದಿಂದ ಎದುರು ನೋಡುವುದರಲ್ಲಿ ದರ್ಶಿಸುವ ಮತ್ತು ಬಹಳ ಗಟ್ಟಿಯಾದ, ಸ್ವರವನ್ನು ಪಡೆಯುವವನಾಗಿದ್ದನು. ಗುಬ್ಬಿಯು ತನ್ನ ಗೂಡನ್ನು ದೊರಕಿಸಿಕೊಂಡಂತೆ, ಕೀರ್ತನೆಗಾರನು ದೇವರ ಪ್ರಸನ್ನತೆಯಲ್ಲಿ ವಿಶ್ರಾಂತಿಯನ್ನು ಮತ್ತು ಆಶ್ರಯದ ಸ್ಥಳವನ್ನು ಕಂಡುಕೊಂಡಿದ್ದಾನೆ. ಇದು ಅವನು ''ನೆಲೆಸಲು'' ಹೋಗುತ್ತಿರುವ ಸ್ಥಳವಾಗಿದೆ.

**ರಾತ್ರಿಯಲ್ಲಿ ನಿನ್ನನ್ನು ಮನಃಪೂರ್ವಕವಾಗಿ ಹಾರೈಸಿದ್ದೇವೆ, ಹೌದು, ನಮ್ಮ ಆತ್ಮದಲ್ಲಿ ನಿನ್ನನ್ನು ತವಕದಿಂದ ಹುಡುಕಿದ್ದೇವೆ. ನೀನು ಲೋಕದಲ್ಲಿ ನ್ಯಾಯಕಾರ್ಯಗಳನ್ನು ನಡಿಸುವಾಗ ಭೂ ನಿವಾಸಿಗಳು ಧರ್ಮಜ್ಞಾನವನ್ನು ಪಡೆದುಕೊಳ್ಳುವರು** (ಯೆಶಾಯ 26:9).

ದೇವರ ಮೇಲಿನ ನಮ್ಮ ಹಸಿವು, ನಮ್ಮ ದಿನಚರಿಯ ಮೇಲೆ ಪ್ರಭಾವ ಬೀರುತ್ತದೆ. ಆತನಿಗಾಗಿ ಇಚ್ಛೆಪಡುವಾಗ ಅದು ರಾತ್ರಿಯ ವೇಳೆಯಲ್ಲೂ ಇರಿಸುತ್ತದೆ. ಆತನಿಗಾಗಿ ಇರುವ ನಮ್ಮ ಇಚ್ಛೆಯು ರಾತ್ರಿ ವೇಳೆಯಲ್ಲೂ ಸಹ ಇಡುವಂತೆ ಮಾಡಿದ ಸಮಯಗಳು ಉಂಟು ಮತ್ತು ಮುಂಜಾನೆ ಆತನನ್ನು ಹುಡುಕಲು ನಾವು ಬೇಗನೆ ಎದ್ದ ಸಮಯಗಳು ಉಂಟು. ದೇವರ ಮೇಲಿನ ನಿಮ್ಮ ಹಸಿವು ನಿಮ್ಮ ದಿನಚರಿಗೆ ಧಕ್ಕೆಯನ್ನುಂಟು ಮಾಡುತ್ತಿದೆಯೇ? ಆತನು ಹೆಚ್ಚಾಗಿ ಬೇಕೆಂಬ ಹಂಬಲದ ಭಾವೋದ್ರೇಕದಿಂದ ನೀವು ಸುಡುತ್ತಿದ್ದಿರೋ?

## ಆತನಿಗಾಗಿ ಹಸಿವು ಹೊಂದಿದವರಿಗೆ ದೇವರು ಪ್ರತಿಕ್ರಿಯೆ ತೋರಿಸುತ್ತಾನೆ

ಆತನಿಗಾಗಿರುವ ನಮ್ಮ ಬಯಕೆಗೆ ದೇವರು ಪ್ರತಿಕ್ರಿಯಿಸುತ್ತಾನೆ ಎಂಬುದನ್ನು ತಿಳಿಯುವುದು ಅದ್ಭುತವೇ ಸರಿ.

**[3]ಬತ್ತಿದ ಭೂಮಿಯಲ್ಲಿ ಮಳೆಗರೆದು ಒಣನೆಲದಲ್ಲಿ ಕಾಲುವೆಗಳನ್ನು ಹರಿಸುವೆನು; ನಿನ್ನ ಸಂತಾನದವರಲ್ಲಿ ನನ್ನ ಆತ್ಮವನ್ನು, ನಿನ್ನ ಸಂತತಿಯವರ ಮೇಲೆ ನನ್ನ ಆಶೀರ್ವಾದವನ್ನು, ಸುರಿಸುವೆನು. [4]ನೀರಿನ ಕಾಲುವೆಗಳ ಬಳಿಯಲ್ಲಿ ಹಸುರು ಹುಲ್ಲಿನ ನಡುವೆ ಬೆಳೆಯುವ ನೀರವಂಜಿಗಳಂತೆ ವೃದ್ಧಿಯಾಗುವರು** (ಯೆಶಾಯ 44:3,4).

ಆತನಿಗಾಗಿ ದಾಹಗೊಂಡವರ ಮೇಲೆ ಮತ್ತು ಒಂದು ತೊಟ್ಟು ನೀರು ಬಿದ್ದರೂ ಅದನ್ನು ಸೋಸುವ (ಹೀರುವ) ಒಣ ನೆಲದಂತಿರುವವರ ಮೇಲೆ ದೇವರು ತನ್ನ ಆತ್ಮನನ್ನು ನೀರಿನಂತೆ ಮತ್ತು ಪ್ರವಾಹದಂತೆ ಸುರಿಸುತ್ತಾನೆ. ‘‘ದಾಹಗೊಂಡವನ ಮೇಲೆ ನಾನು ನೀರನ್ನು ಸುರಿಸುವೆನು’’ ಎಂಬ ದೇವರ ವಾಗ್ದಾನವನ್ನು ನಾವು ಹೊಂದಿದ್ದೇವೆ. ನಮಗಾಗಿ ಆತನ ಸುರಿಸುವಿಕೆಯನ್ನು ಎದುರು ನೋಡುತ್ತಿದೆ. ನಾವು ಆತನಿಗಾಗಿ ದಾಹಗೊಳ್ಳೋಣವೋ?

**ನೀವು ನನ್ನನ್ನು ಹುಡುಕುವಿರಿ, ಮನಃಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ** (ಯೆರೆಮೀಯ 29:13)

ನಮ್ಮ ಹೃದಯಪೂರ್ವಕವಾಗಿ ನಾವು ಆತನನ್ನು ಹುಡುಕಿದರೆ ನಾವು ಆತನನ್ನು ಕಂಡುಕೊಳ್ಳುತ್ತೇವೆ ಎಂಬ ನಿಶ್ಚಿತ ಭರವಸೆ ನಮಗೆ ಕೊಡಲ್ಪಟ್ಟಿದೆ. ಆತನಿಗಾಗಿ ಹುಡುಕುವುದು ಎಂದಿಗೂ ವ್ಯರ್ಥವಾಗುವುದಿಲ್ಲ. ನಾವು ಆತನನ್ನು ಹುಡುಕುವಾಗ, ನಾವು ''ಆತನನ್ನು ಕಂಡುಕೊಳ್ಳುವೆವೆಂದು'' ಎದುರು ನೋಡಬೇಕು, ಅಂದರೆ ಹಿಂದಿಲ್ಲದ ರೀತಿಯಲ್ಲಿ ಬಲಯುತ ಮಾರ್ಗದಲ್ಲಿ ಆತನನ್ನು ಸಂಧಿಸಬೇಕು.

**''ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು''** (ಮತ್ತಾಯ 5:6)

ದೇವರ ರಾಜ್ಯದಲ್ಲಿ ಆಶೀರ್ವಾದಗಳ ಬೀಗ ತೆಗೆಯುವ ಕೀಲಿಕೈಗಳಿವೆ. ''ಬಯಕೆ (ಹಸಿವು) ಮತ್ತು ದಾಹ'' - ಆತ್ಮನ ವಿಷಯಗಳಿಗೆ, ಎಡೆಬಿಡದ, ತೃಪ್ತಿಪಡಿಸಲಾಗದ, ಆಳವಾದ ಮತ್ತು ಪ್ರಬಲ ಹತಾಶೆಯ ಇಚ್ಛೆಗಳನ್ನು ಹೊಂದಿದ್ದರೆ ಅದು ''ತುಂಬಿರುವ'' ಆಶೀರ್ವಾದಗಳನ್ನು ಯಾವಾಗಲೂ ತೆರೆಯುತ್ತದೆ. ನಾವು ತುಂಬಲ್ಪಟ್ಟಿರುವ ಅದಾಗ್ಯೂ ಆತನು ಇನ್ನೂ ಹೆಚ್ಚಾಗಿ ಬೇಕೆಂಬ ಅತ್ಯಾಶೆ ಹೊಂದಿರುವಂತಹ ಆತ್ಮಿಕ ಸ್ಥಿತಿಯಲ್ಲಿ ನಾವಿರುವುದು ಅಗತ್ಯ. ಇದು ತರ್ಕ ಶಾಸ್ತ್ರದಂತೆ ಕಾಣಿಸುವುದಿಲ್ಲ. ಆದರೆ ಆತನಲ್ಲಿ ಪೂರ್ಣವಾಗಿ ನಾವು ಆತ್ಮನಲ್ಲಿರುವ ಮಾರ್ಗವೇ ಅದಾಗಿದೆ. ಆತನಿಂದ ತುಂಬಿದ್ದೇವೆ. ಅದಾಗ್ಯೂ ಆತನು ಹೆಚ್ಚಾಗಿ ಬೇಕೆಂಬ ಬಯಕೆ (ಹಸಿವು) ಮತ್ತು ದಾಹವು ಪ್ರಬಲವಾಗಿರಬೇಕು.

**ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ''** (ಇಬ್ರಿಯರಿಗೆ 11:6).

ನಾವು ದೇವರ ಬಳಿಗೆ ಬರುವಾಗ, ಎರಡು ವಿಷಯಗಳ ಕುರಿತು ನಂಬಿಕೆ ಇರಬೇಕು. ಮೊದಲನೆಯದು ದೇವರು ಇದ್ದಾನೆ ಮತ್ತು ಎರಡನೆಯದು ತನ್ನನ್ನು ಅತ್ಯಾಸಕ್ತಿಯಿಂದ ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂಬುವುದು. ಆತನನ್ನು ಪರಿಶ್ರಮದಿಂದ ಹುಡುಕುವವರಿಗೆ ಆತನು ಕೊಡುವ ಸ್ಪಷ್ಟವಾದ ಬಹುಮಾನ ''ಆತನೇ'' ಆಗಿದ್ದಾನೆ. ಇದಕ್ಕಿಂತಲೂ ಮಹತ್ವದ ಬಹುಮಾನ ಯಾವುದೂ ಇಲ್ಲ! ಕೀಲಿಕೈಯು ಆತನನ್ನು ಪರಿಶ್ರಮದಿಂದ ಹುಡುಕುವುದಾಗಿದೆ. ''ಪರಿಶ್ರಮದಿಂದ'' ಎಂಬ ಪದವು ಗ್ರೀಕ್ ಪದದೊಂದಿಗೆ ಸಂಬಂಧಿಸಿದ ಮುಂದಿನ ಅರ್ಥ ಹೊಂದಿದೆ; ಹುಡುಕು, ಶೋಧಿಸು, ಬೇಡಿಕೊಳ್ಳು, ಬೇಡಿಕೆ, ಆರಾಧಿಸು, ವಿಚಾರಿಸು, ಜಾಗರೂಕತೆಯಿಂದ ಹುಡುಕು. ನಾವು

ಆತನನ್ನು ಪರಿಶ್ರಮದಿಂದ ಹುಡುಕೋಣ. ಯಾಕೆಂದರೆ, ಆತನು ತನ್ನನ್ನೇ ನಮಗೆ ಬಹುಮಾನ ಕೊಡುವನು!

**ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು** (ಯಾಕೋಬನು 4:8ಅ)

ನಾವು ದೇವರ ಸಮೀಪಕ್ಕೆ ಬರುವಾಗ, ಆತನು ನಮ್ಮ ಸಮೀಪಕ್ಕೆ ಬರುವಂತಹ ಆಶ್ಚರ್ಯಕರ ಭರವಸೆ ನಮಗಿದೆ. ದೇವರನ್ನು ಹುಡುಕಲು ಕಳೆದ ಸಮಯವು ನಿರರ್ಥಕವಾದ ಸಮಯವಲ್ಲ. ದೇವರು ಹೆಜ್ಜೆಯಿಡುವಾಗ, ನಮಗೆ ನಮ್ಮ ಪ್ರಪಂಚದಲ್ಲಿ ಮತ್ತು ನಮ್ಮಲ್ಲಿ, ನಮ್ಮೊಳಗೆ ವಿಸ್ಮಯಕರ ವಿಷಯಗಳು ಜರುಗುತ್ತವೆ.

ನಾವು ದೇವರು ಹೆಚ್ಚಾಗಿ ಬೇಕೆಂಬ ಹಂಬಲದ ಹಸಿವುಳ್ಳವರಾಗಿರುವುದು ಅವಶ್ಯ.

## ಆತನ ಪ್ರಸನ್ನತೆಗೆ ನಾನು ಹೇಗೆ ಪ್ರವೇಶಿಸಬಹುದು?

ಹಳೇ ಒಡಂಬಡಿಕೆಯಲ್ಲಿ ಮೋಶೆಯು ಮರುಭೂಮಿಯಲ್ಲಿ ಕಟ್ಟಿದ ದೇವ ದರ್ಶನದ ಗುಡಾರವು, ಪರಲೋಕದ ನಿಜ ದೇವದರ್ಶನದ ಗುಡಾರದ ಮತ್ತು ಪರಲೋಕದಲ್ಲಿನ ಪವಿತ್ರ ಸ್ಥಳದ 'ಛಾಯೆ ಮತ್ತು ಪ್ರತಿ'ಯಾಗಿದೆ.

**[1]ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನೆಂದರೆ – ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ. [2]ಈತನು ಪವಿತ್ರ ಸ್ಥಾನದಲ್ಲಿ ಅಂದರೆ ಮನುಷ್ಯನು ಹಾಕದೆ ಕರ್ತನೇ ಹಾಕಿದ ನಿಜವಾದ ದೇವದರ್ಶನ ಗುಡಾರದಲ್ಲಿ ಯಾಜಕೋದ್ಯೋಗ ನಡಿಸುವವನಾಗಿದ್ದಾನೆ. [5]ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು ನಡಿಸುವವರು. ಮೋಶೆಯು ದೇವದರ್ಶನ ಗುಡಾರವನ್ನು ಮಾಡುವದಕ್ಕಿದ್ದಾಗ ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನು ಮಾಡಿಸಬೇಕು ಎಂಬ ದೈವೋಕ್ತಿಯು ಅವನಿಗೆ ಉಂಟಾಯಿತಲ್ಲಾ.** (ಇಬ್ರಿಯರಿಗೆ 8:1,2,5)

**ಆಗ ಪರಲೋಕದಲ್ಲಿರುವ ದೇವಾಲಯವು ತೆರೆಯಿತು; ಆತನ ಆಲಯದಲ್ಲಿ ಆತನ ಒಡಂಬಡಿಕೆಯ ಮಂಜೂಷವು ಕಾಣಿಸಿತು** (ಪ್ರಕಟಣೆ 11:19ಅ)

ಆದುದರಿಂದ ಭೂಲೋಕದಲ್ಲಿನ ದೇವದರ್ಶನ ಗುಡಾರವು ಪರಲೋಕದಲ್ಲಿನ ನಿಜವಾದ ದೇವದರ್ಶನ ಗುಡಾರದ ಕುರಿತು ನಮಗೆ ಬೋಧಿಸುತ್ತದೆ.

## ಮೋಶೆಯ ದೇವದರ್ಶನ ಗುಡಾರ

ವಿಮೋಚನ ಕಾಂಡ 25-27ನೇ ಅಧ್ಯಾಯಗಳು ಮತ್ತು 40ನೇ ಅಧ್ಯಾಯಗಳಲ್ಲಿ ಮೋಶೆಯು ಕಟ್ಟಿದ ದೇವ ದರ್ಶನದ ಗುಡಾರದ ಬಗ್ಗೆ ವರ್ಣನೆಯನ್ನು ನಾವು ಹೊಂದಿದ್ದೇವೆ. ದೇವದರ್ಶನ ಗುಡಾರದಲ್ಲಿ ಮುಖ್ಯವಾಗಿ ಮೂರು ಅಂಕಣಗಳಿವೆ. ಹೊರಗಿನ ಅಂಗಳ, ಒಳಗಿನ ಅಂಗಳ (ಪವಿತ್ರ ಸ್ಥಳವೆಂದು ಕರೆಯಲ್ಪಡುತ್ತದೆ) ಮತ್ತು ಮಹಾಪವಿತ್ರ ಸ್ಥಳ (ಅಥವಾ ಪವಿತ್ರತೆಯ ಪವಿತ್ರ ಸ್ಥಳ).

## ಹೊರಗಿನ ಅಂಗಳ

ಹೊರಗಿನ ಅಂಗಳವು ಯಜ್ಞವೇದಿಯನ್ನು ಮತ್ತು ತೊಳೆದುಕೊಳ್ಳಲು ತಾಮ್ರದ ಗಂಗಾಳವನ್ನು ಒಳಗೊಂಡಿರುತ್ತದೆ.

### *ಯಜ್ಞವೇದಿ*

**ಯಜ್ಞವೇದಿಯನ್ನು ಜಾಲೀ ಮರದಿಂದ ಐದು ಮೊಳ ಉದ್ದವಾಗಿಯೂ, ಐದು ಮೊಳ ಅಗಲವಾಗಿಯೂ ಚಚ್ಚೌಗವಾಗಿ ಮಾಡಿಸಬೇಕು. [2]ಅದರ ಎತ್ತರ ಮೂರು ಮೊಳವಿರಬೇಕು. ಅದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಕೊಂಬುಗಳನ್ನು ಮಾಡಿಸಬೇಕು. ಅವು ಯಜ್ಞವೇದಿಗೆ ಏಕವಾಗಿರಬೇಕು. ಆ ವೇದಿಗೆ ತಾಮ್ರದ ತಗಡುಗಳನ್ನು ಹೊದಿಸಬೇಕು** (ವಿಮೋಚನ ಕಾಂಡ 27:1,2).

### *ತೊಳೆದುಕೊಳ್ಳುವ ತಾಮ್ರದ ಗಂಗಾಳ*

**ಯೆಹೋವನು ಮೋಶೆಗೆ ಮತ್ತೂ ಹೇಳಿದ್ದೇನೆಂದರೆ - ಸ್ನಾನಕ್ಕೋಸ್ಕರ ಒಂದು ತಾಮ್ರದ ಗಂಗಾಳವನ್ನೂ, ಅದಕ್ಕೆ ತಾಮ್ರದ ಪೀಠವನ್ನೂ ಮಾಡಿಸಿ ದೇವದರ್ಶನದ ಗುಡಾರಕ್ಕೂ, ಯಜ್ಞವೇದಿಗೂ ನಡುವೆ ಇಟ್ಟು ಅದರಲ್ಲಿ ನೀರನ್ನು ತುಂಬಿಸಬೇಕು. ಆರೋನನೂ, ಅವನ ಮಕ್ಕಳೂ ಅದರಿಂದ ಕೈಕಾಲುಗಳನ್ನು ತೊಳೆದುಕೊಳ್ಳಬೇಕು. ಅವರು ದೇವ ದರ್ಶನದ ಗುಡಾರದೊಳಗೆ ಹೋಗುವಾಗೆಲ್ಲಾ ಆ ನೀರಿನಿಂದ ಕೈಕಾಲುಗಳನ್ನು ತೊಳೆದುಕೊಂಡು ಹೋಗಬೇಕು. ತೊಳೆಯದೆ ಹೋದರೆ ಸತ್ತಾರು. ಹಾಗೆಯೇ ಅವರು ದೇವರ ಸೇವೆಯನ್ನು ನಡಿಸುವವರಾಗಿ ಯೆಹೋವನಿಗೆ ಹೋಮ ಸಮರ್ಪಣೆಗಾಗಿ ಯಜ್ಞ ವೇದಿಯ ಬಳಿಗೆ ಬರುವಾಗಲೂ ಕೈಕಾಲುಗಳನ್ನು ತೊಳೆದುಕೊಂಡು ಬರಬೇಕು; ತೊಳೆದುಕೊಳ್ಳದೆ ಬಂದರೆ ಸತ್ತಾರು. ಇದು ಅವನಿಗೂ, ಅವನ ಸಂಸತಿಯವರಿಗೂ ಶಾಶ್ವತ ನಿಯಮ** (ವಿಮೋಚನಕಾಂಡ 30:17-21).

ಒಳಗಿನ ಅಂಕಣವನ್ನು, ಹೊರಗಿನ ಅಂಕಣದಿಂದ ಬೇರ್ಪಡಿಸುವ ಒಂದು ಪರದೆಯಿರುತ್ತದೆ.

## ಒಳಗಿನ ಅಂಕಣ (ಪವಿತ್ರ ಸ್ಥಳ)

ಒಳಗಿನ ಅಂಕಣವು ರೊಟ್ಟಿಯನ್ನಿಡುವ ಮೇಜನ್ನು ಮತ್ತು ದೀಪಸ್ತಂಭವನ್ನು ಮತ್ತು ಸುಗಂಧದ್ರವ್ಯದ ಧೂಪವೇದಿಯನ್ನು ಒಳಗೊಂಡಿರುತ್ತದೆ.

### *ದೀಪಸ್ತಂಭಗಳು ಮತ್ತು ರೊಟ್ಟಿ ಇಡುವ ಮೇಜು*

**ನಾನು ಬೆಟ್ಟದಲ್ಲಿ ನಿನಗೆ ತೋರಿಸಿಕೊಟ್ಟ ರೀತಿಯಲ್ಲೇ ಗುಡಾರವನ್ನು ನಿಲ್ಲಿಸಬೇಕು. [35]ತೆರೆಯ ಹೊರಗಡೆಯಲ್ಲಿ ಮೇಜನ್ನೂ, ಮೇಜಿನ ಎದುರಾಗಿ ಗುಡಾರದ ದಕ್ಷಿಣ ದಿಕ್ಕಿನಲ್ಲಿ ದೀಪಸ್ತಂಭವನ್ನೂ ಇಡಬೇಕು. ಮೇಜು ಉತ್ತರ ಕಡೆಯಲ್ಲಿರಬೇಕು. [36]ಡೇರೆಯ ಬಾಗಲಿಗೆ ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತ ವರ್ಣಗಳುಳ್ಳ ದಾರದಿಂದ ವಿಚಿತ್ರವಾಗಿ ಕಸೂತಿ ಹಾಕಿ ಪರದೆಯನ್ನು ಮಾಡಿಸಬೇಕು. [37]ಆ ಪರದೆ ತೂಗಿಸುವುದಕ್ಕಾಗಿ ಜಾಲೀ ಮರದಿಂದ ಐದು ಕಂಬಗಳನ್ನು ಮಾಡಿಸಿ ಚಿನ್ನದ ತಗಡುಗಳನ್ನು ಹೊದಿಸಬೇಕು. ಅವುಗಳ ಕೊಂಡಿಗಳನ್ನು ಚಿನ್ನದಿಂದ ಮಾಡಿಸಿ ಅವುಗಳಿಗೋಸ್ಕರ ಐದು ತಾಮ್ರದ ಗದ್ದಿಗೇ ಕಲ್ಲುಗಳನ್ನು ಎರಕ ಹೊಯಿಸಬೇಕು** (ವಿಮೋಚನ ಕಾಂಡ 26:30, 35-37).

**ದೀಪವು ಯಾವಾಗಲೂ ಉರಿಯುವಂತೆ ಇಸ್ರಾಯೇಲರು ಎಣ್ಣೇ ಮರದ ಕಾಯಿಗಳನ್ನು ಕುಟ್ಟಿ ನಿರ್ಮಲವಾದ ಎಣ್ಣೆಯನ್ನು ತೆಗೆದುಕೊಡಬೇಕೆಂದು ಅವರಿಗೆ ಅಪ್ಪಣೆಯನ್ನು ಮಾಡು** (ವಿಮೋಚನ ಕಾಂಡ 27:20).

### *ಸುಗಂಧದ್ರವ್ಯದ ಧೂಪವೇದಿ*

**ಸುಗಂಧ ದ್ರವ್ಯಗಳಿಂದ ಧೂಪ ಹಾಕುವುದಕ್ಕೆ ಜಾಲೀ ಮರದ ಧೂಪವೇದಿಯನ್ನು ಮಾಡಿಸಬೇಕು. ಅದು ಒಂದು ಮೊಳ ಉದ್ದವಾಗಿಯೂ, ಒಂದು ಮೊಳ ಅಗಲವಾಗಿಯೂ ಚಚ್ಚೌಕವಾಗಿರಬೇಕು. ಅದರ ಎತ್ತರವು ಎರಡು ಮೊಳವಾಗಿರಬೇಕು. ಅದರ ಕೊಂಬುಗಳು ಅದರೊಂದಿಗೆ ಏಕವಾಗಿಕಬೇಕು. ಅದರ ಮೇಲ್ಭಾಗಕ್ಕೂ ನಾಲ್ಕು ಪಕ್ಕಗಳಿಗೂ ಕೊಂಬುಗಳಿಗೂ ಚೊಕ್ಕ ಬಂಗಾರದ ತಗಡುಗಳನ್ನು ಹೊದಿಸಬೇಕು. ಸುತ್ತಲೂ ಚಿನ್ನದ ಗೋಟು ಕಟ್ಟಿಸಬೇಕು. ಅದರ ಕೆಳಗೆ ವೇದಿಯ ಎರಡು ಪಾರ್ಶ್ವಗಳಲ್ಲಿ ಎರಡೆರಡು ಚಿನ್ನದ ಬಳೆಗಳನ್ನು ಮೂಲೆಗಳಲ್ಲಿಯೇ ಹಾಕಿಸಬೇಕು. ವೇದಿಯನ್ನು ಹೊರುವುದಕ್ಕೆ ಕೋಲುಗಳನ್ನು ಅವುಗಳಲ್ಲಿ ಸೇರಿಸಬೇಕು. ಆ ಕೋಲುಗಳನ್ನು ಜಾಲೀ ಮರದಿಂದ ಮಾಡಿಸಿ ಅವುಗಳಿಗೆ ಚಿನ್ನದ ತಗಡುಗಳನ್ನು ಹೊದಿಸಬೇಕು. ಆಜ್ಞಾಶಾಸನಗಳ ಮಂಜೂಷದ ಮುಂದಣ ತೆರೆಗೆ ಎದುರಾಗಿ ಅಂದರೆ, ಆಜ್ಞಾಶಾಸನಗಳ ಮೇಲಿರುವಂಥ ಮತ್ತು ನಾನು ನಿನಗೆ ದರ್ಶನ ಕೊಡುವಂಥ ಕೃಪಾಸನದ ಮುಂದೆ ಅದನ್ನು ಇರಿಸಬೇಕು. ಆರೋನನು ಪ್ರತಿನಿತ್ಯವೂ ಹೊತ್ತಾರೆಯಲ್ಲಿ ದೀಪಗಳನ್ನು ಸರಿಪಡಿಸುವಾಗಲೂ, ಸಾಯಂಕಾಲದಲ್ಲಿ ದೀಪಗಳನ್ನು ಹೊತ್ತಿಸುವಾಗಲೂ ಅದರ ಮೇಲೆ ಸುಗಂಧ ದ್ರವ್ಯಗಳಿಂದ ಧೂಪವನ್ನು ಹಾಕಬೇಕು. ಹೀಗೆ ನಿಮ್ಮಿಂದಲೂ ನಿಮ್ಮ ಸಂತತಿಯವರಿಂದಲೂ ಯೆಹೋವನ ಸನ್ನಿಧಿಯಲ್ಲಿ ನಿತ್ಯವಾದ ಧೂಪ ಸಮರ್ಪಣೆಯು ಇರಬೇಕು. ಆ ವೇದಿಯ ಮೇಲೆ ಬೇರೆ ಯಾವ ಧೂಪವನ್ನು ಹಾಕಕೂಡದು; ಅದರ ಮೇಲೆ ಹೋಮವನ್ನಾಗಲಿ, ಧಾನ್ಯ-ದ್ರವ್ಯವನ್ನಾಗಲಿ ಪಾನದ್ರವ್ಯವನ್ನಾಗಲಿ ಸಮರ್ಪಿಸಿಕೂಡದು** (ವಿಮೋಚನಕಾಂಡ 30:1-9).

## ಮಹಾ ಪವಿತ್ರ ಸ್ಥಾನ

ಪವಿತ್ರ ಸ್ಥಾನವೆಂಬುದನ್ನೂ ಮಹಾ ಪವಿತ್ರ ಸ್ಥಾನವೆಂಬುದನ್ನೂ ಪ್ರತ್ಯೇಕಿಸುವ ತೆರೆಯಿದೆ. ಮಹಾ ಪವಿತ್ರ ಸ್ಥಳವು ಕೃಪಾಸನ ಮತ್ತು ಆಜ್ಞಾಶಾಸನಗಳ ಮಂಜೂಷವನ್ನು ಒಳಗೊಂಡಿರುತ್ತದೆ.

**ನಾನು ಬೆಟ್ಟದಲ್ಲಿ ನಿನಗೆ ತೋರಿಸಿಕೊಟ್ಟ ರೀತಿಯಲ್ಲೇ ಗುಡಾರವನ್ನು ನಿಲ್ಲಿಸಬೇಕು. ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತ ವರ್ಣಗಳುಳ್ಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿ ಹಾಕಿ ಒಂದು ತೆರೆಯನ್ನು ಮಾಡಿಸಬೇಕು. ಜಾಲೀ ಮರದಿಂದ ನಾಲ್ಕು ಕಂಬಗಳನ್ನು ಮಾಡಿಸಿ ಚಿನ್ನದ ತಗಡುಗಳನ್ನು ಹೊದಿಸಿ ನಾಲ್ಕು ಬೆಳ್ಳಿಯ ಗದ್ದಿಗೇ ಕಲ್ಲುಗಳ ಮೇಲೆ ನಿಲ್ಲಿಸಿ ಚಿನ್ನದ ಕೊಂಡಿಗಳಿಂದ ಆ ತೆರೆಯನ್ನು ಆ ನಾಲ್ಕು ಕಂಬಗಳಿಗೆ ಸಿಕ್ಕಿಸಬೇಕು. ಆ ತೆರೆಯನ್ನು ಕೊಂಡಿಗಳಿಗೆ ಸಿಕ್ಕಿಸಿದಾಗ ಅದರೊಳಗೆ ಆಜ್ಞಾಶಾಸನಗಳ ಮಂಜೂಷವನ್ನು ತರಿಸಿಡಬೇಕು, ಆ ತೆರೆಯು ಪವಿತ್ರ ಸ್ಥಾನವೆಂಬುದನ್ನೂ ಮಹಾ ಪವಿತ್ರಸ್ಥಾನವೆಂಬುದನ್ನೂ ಬೇರೆ ಬೇರೆ ಮಾಡುವದು. ಮಹಾ ಪವಿತ್ರ ಸ್ಥಾನದಲ್ಲಿ ಆಜ್ಞಾಶಾಸನಗಳ ಮಂಜೂಷದ ಮೇಲೆ ಕೃಪಾಸನವನ್ನು ತಂದಿಡಬೇಕು** (ವಿಮೋಚನಕಾಂಡ 26:30-34).

**ಆ ಕೃಪಾಸನವನ್ನು ಮಂಜೂಷದ ಮೇಲಿಡಬೇಕು. ನಾನು ನಿನಗೆ ಕೊಡುವ ಆಜ್ಞಾಶಾಸನಗಳನ್ನು ಆ ಮಂಜೂಷದೊಳಗೆ ಇಡಬೇಕು. ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು. ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೊಬಿಗಳ ನಡುವೆಯೇ ನಾನು ಇದ್ದು ನಿನ್ನ ಸಂಗಡ ಮಾತಾಡಿ ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸಬೇಕಾಗಿರುವ ಎಲ್ಲಾ ಸಂಗತಿಗಳನ್ನು ತಿಳಿಸುವೆನು** (ವಿಮೋಚನ ಕಾಂಡ 25:21,22).

ಮಹಾಪವಿತ್ರ ಸ್ಥಳದಲ್ಲಿ ದೇವರು ಮಹಾಯಾಜಕನನ್ನು ಸಂಧಿಸಿ ಅವನೊಂದಿಗೆ ಮಾತಾಡುತ್ತೇನೆ ಎಂಬುದಾಗಿ ಹೇಳಿದ್ದಾನೆ. ಒಬ್ಬನು ದೇವರನ್ನು ಸಂಧಿಸುವ ಮತ್ತು ಅನುಭವಿಸುವ ಸ್ಥಳ ಇದಾಗಿದೆ. ಹಾಗಿದ್ದರೂ, ಮೋಶೆಯ ಸಮಯದಲ್ಲಿ ವರ್ಷಕ್ಕೆ ಒಂದು ಬಾರಿ ಮಾತ್ರ ಮಹಾಯಾಜಕನು ಮಹಾ ಪವಿತ್ರ ಸ್ಥಳಕ್ಕೆ ಹೋಗಬೇಕಾಗಿತ್ತು (ಯಾಜಕಕಾಂಡ 16). ಇಂತಹ ಮಹಾ ಅತಿ ಪವಿತ್ರ ಸ್ಥಳಕ್ಕೆ ಬಹು ಮಿತವಾದ ಪ್ರವೇಶಾಧಿಕಾರವಿರುತ್ತದೆ!

## ನಮ್ಮ ಆತ್ಮಿಕ ಅನುಭವಗಳು: ನಿಜವಾದ ದೇವ ದರ್ಶನದ ಗುಡಾರವನ್ನು ಪ್ರವೇಶಿಸುವುದು:

ನಾವು ಮೊದಲು ಹೇಳಿದಂತೆ, ಸ್ವಾಭಾವಿಕ ದೇವದರ್ಶನ ಗುಡಾರವು ಆತ್ಮಿಕ ವಾಸ್ತವಿಕತೆಗಳ (ಸತ್ಯಸ್ಥಿತಿಗಳ) ಕುರಿತು ಬೋಧಿಸುತ್ತದೆ. ಪರಲೋಕದ ದೇವರ

ನಿಜವಾದ ಪವಿತ್ರ ಸ್ಥಳವನ್ನು ನಾವು ಆತ್ಮನಲ್ಲಿ ಪ್ರವೇಶಿಸುವಾಗ, ಅದು ನಾವು ಹಾದುಹೋಗುವ ಸ್ಥಿತಿಗಳ ಬಗ್ಗೆ ಪರಿಜ್ಞಾನವನ್ನು ಕೊಡುತ್ತದೆ.

**ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ. ಆದಕಾರಣ, ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ** (ಇಬ್ರಿಯರಿಗೆ 10:19-22).

ಯೇಸುವಿನ ರಕ್ತದ ಮೂಲಕವಾಗಿ ಮತ್ತು ಶಿಲುಬೆಯ ಮೇಲೆ ಮಾಡಿ ಮುಗಿಸಿದ ಕ್ರಿಸ್ತನ ಕಾರ್ಯಗಳಿಂದ ನಾವು ಈಗ ಪವಿತ್ರತೆಯಲ್ಲಿನ ಪವಿತ್ರ ಸ್ಥಳಕ್ಕೆ ಪ್ರವೇಶಿಸಬಹುದು! ನಮಗೆ ಎಲ್ಲಾ ಸಮಯದಲ್ಲೂ 24×7 ಸಮಯ ಹೊಂದಿದ್ದೇವೆ. ಯಾವುದೇ ಸಮಯದಲ್ಲೂ ನಾವು ದೇವರನ್ನು ಸಂಧಿಸುವ ಮತ್ತು ಆತನು ಮಾತಾಡುವದನ್ನು ಕೇಳಿಸಿಕೊಳ್ಳುವ ಪ್ರಭಾವಿತ ಸ್ಥಳವಾದ ಒಳಗಿನ ಮಹಾ ಪವಿತ್ರ ಸ್ಥಳಕ್ಕೆ ಪ್ರವೇಶಿಸಬಹುದು!

ಹಾಗಿದ್ದರೂ, ''ನಾವು ಸಮೀಪಕ್ಕೆ ಬರೋಣ'' ಎಂಬ ಸಂದೇಶವನ್ನು ಸತ್ಯವೇದದ ವಚನಗಳು ನಮಗೆ ನೀಡುತ್ತವೆ. ದೇವರ ಸಮೀಪಕ್ಕೆ ಬರುವಂತಹದ್ದು ನಮ್ಮ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ನಾವು ''ಹೊರಗಿನ ಅಂಗಳದ ವಿಶ್ವಾಸಿಗಳಾಗಿರಬಹುದು'' ಅಥವಾ ಇನ್ನೂ ಮುಂದುವರೆದು ''ಒಳಗಿನ ಅಂಗಳದ ವಿಶ್ವಾಸಿಗಳಾಗಿರಬಹುದು'' ಅಥವಾ ದೇವರಿಗೆ ''ಸಮೀಪ'' ಬರುವವರಾಗಿರಬಹುದು. ಇದು ಸಂಪೂರ್ಣವಾಗಿ ನಮಗೆ ಬಿಟ್ಟದ್ದಾಗಿದೆ!

**ಈ ಆಧಾರಗಳನ್ನು ಕೊಟ್ಟದ್ದರಲ್ಲಿ ದೇವರು ಸುಳ್ಳಾಡಿರಲಾರನು. ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸೆಗೆ ಯೋಗ್ಯವಾದದ್ದೂ, ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಣ ದೇವ ಸಾನಿಧ್ಯವನ್ನು ಪ್ರವೇಶಿಸುವಂಥದು. ಯೇಸು ಸದಾಕಾಲವೂ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದು ನಮಗೋಸ್ಕರ ಮುಂದಾಗಿ ಹೋಗಿ ಆ ಸಾನಿಧ್ಯವನ್ನು ಪ್ರವೇಶಿಸಿದ್ದಾನೆ** (ಇಬ್ರಿಯರಿಗೆ 6:19,20).

ನಾವು ಹೊಂದಿರುವ ''ನಿರೀಕ್ಷೆಯು'' ಪ್ರತ್ಯಕ್ಷವಾಗಿ ಯೇಸುವು ನಮಗೋಸ್ಕರ ಪ್ರವೇಶಿಸಿದ ಪವಿತ್ರತೆಯಲ್ಲಿನ ಪವಿತ್ರವಾದ ಸ್ಥಳ ಅಂದರೆ ದೇವರ ಪ್ರಸನ್ನತೆಯ ''ತೆರೆಯ ಹಿಂಭಾಗದ ಸ್ಥಳಕ್ಕೆ'' ಹೋಗುತ್ತದೆ. ಇದರ ಅರ್ಥವೇನೆಂದರೆ ನಮ್ಮ ಆತ್ಮಿಕ ನಿರೀಕ್ಷೆಯ ಅಭಿವ್ಯಕ್ತತೆಗಳಾದ, ನಂಬಿಕೆ, ಪ್ರೀತಿ, ಆರಾಧನೆ, ಬಯಕೆ (ಹಸಿವು), ಕರುಣೆ (ವೈರಾಗ್ಯ) ಮುಂತಾದವುಗಳನ್ನು ನಾವು ಭೂಮಿಯ ಮೇಲೆ ಹೊಂದಿರುವಾಗ, ಅವುಗಳು ಯೇಸುಕ್ರಿಸ್ತನು ನಮಗಾಗಿ ಪ್ರವೇಶಿಸಿದ ಪರಲೋಕದ ಸನ್ನಿಧಿಯಲ್ಲಿನ ದೇವರ ಪ್ರಸನ್ನತೆ, 'ಪರದೆಯ ಹಿಂದೆ' ಇರುವಂತೆ ಅನ್ನಿಸುವುದಾಗಿದೆ! ಇದು ಭಾವೋದ್ರೇಕಗೊಳಿಸುವಂತದ್ದು!

ಈಗ ಪರದೆಯ ಹಿಂದಿನ ದೇವರ ಪ್ರಸನ್ನತೆಗೆ ಹೇಗೆ ಚಲನೆ ಹೊಂದಬಹುದು ಎಂಬುದನ್ನು ನಾವು ನೋಡೋಣ.

## ಹೊರಗಿನ ಅಂಗಳ

ದೇವರ ಪ್ರಸನ್ನತೆಯೆಡೆಗಿನ ನಮ್ಮ ಪ್ರಯಾಣವು ಹೊರಗಿನ ಅಂಗಳದಿಂದ ಪ್ರಾರಂಭವಾಗುತ್ತದೆ. ಈ ಹೊರಗಿನ ಅಂಗಳವು ನಾವು ದೇವರ ಪ್ರಸನ್ನತೆಗೆ ಚಲಿಸಲು ತೀರ್ಮಾನಗಳನ್ನು ಮಾಡುವಂತಹ ಮತ್ತು ದೇವರನ್ನು ಸಂಧಿಸಲು ನಾವು ಸಿದ್ಧಗೊಳ್ಳುವ ಕಾರ್ಯ ವಿಧಾನವಾಗಿದೆ.

ಹೊರಗಿನ ಅಂಗಳದಲ್ಲಿ ಯಜ್ಞವೇದಿ, ಸಮರ್ಪಣೆಯ ಸ್ಥಳ ಮತ್ತು ಆತ್ಮಿಕ ಯಜ್ಞ ಸಮರ್ಪಣೆಗಳ ಕಾಣಿಕೆಯರ್ಪಣೆಯ ಸ್ಥಳವನ್ನು ಹೊಂದಿದ್ದೇವೆ. ನಾವು ನಮ್ಮ ದಾಹಗಳನ್ನು ಸಜೀವ ಯಜ್ಞವಾಗಿ ಸಮರ್ಪಿಸುತ್ತೇವೆ. ನಾವು ಆತ್ಮೀಕ ಯಜ್ಞವಾಗಿ ಸ್ತೋತ್ರ ಮತ್ತು ಆರಾಧನೆಯನ್ನು ತರುತ್ತೇವೆ. ನಾವು ಒಳ್ಳೆಯ ಕ್ರಿಯೆಗಳನ್ನು ಮಾಡುವುದು, ಹಂಚಿಕೊಳ್ಳುವುದು, ಕೊಡುವುದು ಮುಂತಾದವುಗಳನ್ನು ಹೊರಗಿನ ಅಂಗಳದಲ್ಲಿ ಯಜ್ಞ ಸಮರ್ಪಣೆಯ ಭಾಗವಾಗಿ ಸಮರ್ಪಿಸುತ್ತೇವೆ.

**ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು** (ರೋಮಾಪುರದವರಿಗೆ 12:1).

**ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ. ಇದಲ್ಲದೆ ಪರೋಪಕಾರವನ್ನೂ, ಧರ್ಮ ಮಾಡುವದನ್ನೂ ಮರೆಯಬೇಡಿರಿ; ಇದೇ ದೇವರಿಗೆ ಸಮರ್ಪಕವಾದ ಯಜ್ಞಗಳು** (ಇಬ್ರಿಯರಿಗೆ 13:15, 16).

**ಬನ್ನಿರಿ ಯೆಹೋವನಿಗೆ ಉತ್ಸಾಹ ಧ್ವನಿಗೈಯುವಾ; ನಮ್ಮ ರಕ್ಷಕನಾದ ಶರಣನಿಗೆ ಜಯಘೋಷ ಮಾಡೋಣ. ಕೃತಜ್ಞತಾಸ್ತುತಿಯೊಡನೆ ಆತನ ಸನ್ನಿಧಿಗೆ ಸೇರೋಣ; ಕೀರ್ತನೆಗಳಿಂದ ಆತನಿಗೆ ಜಯಘೋಷ ಮಾಡೋಣ** (ಕೀರ್ತನೆಗಳು 95:1,2).

**ಸಮಸ್ತ ಭೂನಿವಾಸಿಗಳೇ, ಯೆಹೋವನಿಗೆ ಜಯಘೋಷ ಮಾಡಿರಿ. ಯೆಹೋವನನ್ನು ಸಂತೋಷದಿಂದ ಸೇವಿಸಿರಿ; ಉತ್ಸಾಹಧ್ವನಿ ಮಾಡುತ್ತಾ ಆತನ ಸನ್ನಿಧಿಗೆ ಬನ್ನಿರಿ. ಯೆಹೋವನೇ ದೇವರೆಂದು ತಿಳಿದುಕೊಳ್ಳಿರಿ. ನಮ್ಮನ್ನು ಉಂಟು ಮಾಡಿದವನು ಆತನೇ; ನಾವು ಆತನವರು. ಆತನ ಪ್ರಜೆಯೂ, ಆತನ ಪಾಲಿಸುವ ಹಿಂಡೋ ಆಗಿದ್ದೇವೆ. ಕೃತಜ್ಞತಾಸ್ತುತಿಯೊಡನೆ ಆತನ ಮಂದಿರದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ. ಯೆಹೋವನು ಒಳ್ಳೆಯವನು; ಆತನ ಕೃಪೆಯು ಯುಗಯುಗಕ್ಕೂ ಆತನ ಸತ್ಯತೆಯ ತಲತಲಾಂತರಕ್ಕೂ ಇರುವವು** (ಕೀರ್ತನೆಗಳು 100:1-5).

ನಾವು ಸಹ ತಾಮ್ರದ ಗಂಗಾಳ, ತೊಳೆಯುವ ಮತ್ತು ಶುದ್ಧೀಕರಿಸುವಿಕೆಯ ಸ್ಥಳ ಹೊಂದಿದ್ದೇವೆ. ನಾವು ದೇವರ ವಾಕ್ಯದೊಡನೆ ಮತ್ತು ಆತನ ಕೆಲಸದೊಡನೆ (ತೀತನು 3:5), ಜೀವಿತಗಳಲ್ಲಿನ ಅಶುಚಿಯನ್ನು ದಿನದ ಅಶುಚಿಯನ್ನು ತೊಳೆದುಕೊಳ್ಳುತ್ತೇವೆ (ಯೋಹಾನ 15:3; ಎಫೆಸದವರಿಗೆ 5:26). ನಮ್ಮ ಹೃದಯಗಳನ್ನು ಯೇಸುಕ್ರಿಸ್ತನ ರಕ್ತದಿಂದ ಕೆಟ್ಟ ಮನಸ್ಸಾಕ್ಷಿಯನ್ನು ತೊಳೆದುಕೊಳ್ಳುತ್ತೇವೆ (ಇಬ್ರಿಯರಿಗೆ 10:22). ನಾವು ಅಶುಚಿತ್ವ, ಅಪರಾಧ, ನೋವುಗಳು, ಹೊಟ್ಟೆಕಿಚ್ಚು, ಕೋಪ, ಕಹಿಭಾವನೆಗಳನ್ನು ತೊಲಗಿಸಿಬಿಡುತ್ತೇವೆ - ಶುದ್ಧೀಕರಣವು ಉಂಟಾಗುತ್ತದೆ.

ಹೀಗಿದ್ದರೂ ಹೊರಗಿನ ಅಂಗಳದಲ್ಲಿ ನಾವು ನೆಲೆಯೂರಲು ಸಾಧ್ಯವಿಲ್ಲ. ನಮ್ಮಲ್ಲಿ ಹಲವರು ಬರೀ ತೊಳೆದುಕೊಳ್ಳುವಿಕೆ ಕಾರ್ಯ ಮತ್ತು ಆತ್ಮಿಕ ಸಮರ್ಪಣ ಕಾಣಿಕೆಯ ಯಜ್ಞವನ್ನು ಸಮರ್ಪಿಸಿ ಆಮೇಲೆ ಅದನ್ನು ಬಿಟ್ಟುಬಿಡುವ ತಪ್ಪನ್ನು ಮಾಡುತ್ತೇವೆ. ನಾವು ''ಹೊರಗಿನ ಅಂಗಳದ ವಿಶ್ವಾಸಿಗಳಾಗಿ'' ಉಳಿದುಕೊಳ್ಳುತ್ತೇವೆ. ನಾವು ಹೊರಗಿನ ಅಂಗಳದಲ್ಲಿ ಹಿಂದೆ ಮಾಡಿದವುಗಳಿಗೆ ಹೋಗುವುದಿಲ್ಲ. ನೀವು ಹೊರಗಿನ ಅಂಗಳದಿಂದ ಒಳಗಿನ ಅಂಗಳಕ್ಕೆ ಹೋಗಬೇಕೆಂಬುದಾಗಿ ನಾನು ಆಹ್ವಾನಿಸಲು ಅಪೇಕ್ಷಿಸುತ್ತೇನೆ.

## ಒಳಗಿನ ಅಂಗಳ (ಪವಿತ್ರ ಸ್ಥಳ)

ಒಳಗಿನ ಅಂಗಳವು ದೀಪಸ್ತಂಭ, ರೊಟ್ಟಿಯನ್ನಿಡುವ ಮೇಜು ಮತ್ತು ಸುಗಂಧದ್ರವ್ಯದ ಧೂಪವೇದಿಯನ್ನು ಹೊಂದಿದೆ.

ದೀಪದ ಮೇಲೆ ಎಣ್ಣೇ ಇರುತ್ತದೆ ಮತ್ತು ಬೆಳಕನ್ನು ಉತ್ಪಾದಿಸುವ ಬೆಂಕಿ ಇರುತ್ತದೆ. ಇದು ಪ್ರಕಾಶವನ್ನು ಮತ್ತು ಪ್ರಕಟಣೆಯನ್ನು ಪ್ರತಿಬಿಂಬಿಸುತ್ತದೆ. ಇದು ನಮ್ಮ ಜೀವಿತಗಳಿಗೆ ಪವಿತ್ರಾತ್ಮನು (ಎಫೆಸದವರಿಗೆ 1:17) ನೇರವಾಗಿಯೂ ಮತ್ತು ಸತ್ಯವೇದದ ವಾಕ್ಯಗಳ ಮೂಲಕವಾಗಿಯೂ (ಕೀರ್ತನೆಗಳು 119:130) ತರುವ ಬೆಳಕು ಮತ್ತು ಪ್ರಕಟಣೆಯಾಗಿದೆ.

ನಿವಾಳಿಸುವ ರೊಟ್ಟಿಯು ನಮ್ಮ ''ದಿನನಿತ್ಯದ ರೊಟ್ಟಿ''ಯನ್ನು ಪ್ರತಿಬಿಂಬಿಸುತ್ತದೆ (ಮತ್ತಾಯ 6:11). ದೇವರ ವಾಕ್ಯದ ಮೂಲಕವಾಗಿ ನಮ್ಮ ಆತ್ಮಿಕ ಅಗತ್ಯತೆಗಳನ್ನು ಪೂರೈಸುವುದು ಇದಾಗಿದೆ (ಮತ್ತಾಯ 4:4). ಇದು ನಮ್ಮ ಸ್ವಾಭಾವಿಕ ಅಗತ್ಯತೆ ಪೂರೈಸುವ (ಫಿಲಿಪ್ಪಿಯವರಿಗೆ 4:19). ಸ್ವಸ್ಥಪಡಿಸುವ ಮತ್ತು ಬಿಡುಗಡೆಗೊಳಿಸುವಂತಹ (ಮತ್ತಾಯ 15:25-28) ದೈವಿಕ ಆಹಾರವಾಗಿದೆ.

ಸುಗಂಧ ದ್ರವ್ಯದ ಧೂಪವೇಧಿಯು ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯ ಸ್ಥಳವಾಗಿರುತ್ತದೆ (ಕೀರ್ತನೆಗಳು 141:2; ಪ್ರಕಟಣೆ 8:3,4). ಒಳಗಿನ ಅಂಗಳವು ಪ್ರಾರ್ಥನೆ, ವಿಜ್ಞಾಪನೆ, ಬಿನ್ನಹ ಮತ್ತು ಮಧ್ಯಸ್ಥಿಕೆಯ ಸ್ಥಳವಾಗಿದೆ. ಇದು ಯುದ್ಧದ ಸ್ಥಳವಾಗಿದೆ.

ಹೊರ ಮತ್ತು ಒಳ ಅಂಗಳಗಳು ಮಧ್ಯಸ್ಥಿಕೆಯ ಸ್ಥಳದಲ್ಲಿದ್ದು ದೇವರನ್ನು ''ನಮ್ಮ ಅನುದಿನದ ಆಹಾರ ದಯಪಾಲಿಸು'' ಎಂಬುದಾಗಿ ಕೇಳುವ, ನಮಗೆ ಅಗತ್ಯತೆ ಇರುವವುಗಳ ವಿಷಯಗಳ ಕುರಿತು ಪ್ರಾರ್ಥಿಸುವ, ಮತ್ತು ನಾವು ಸಮರ್ಪಿಸಲು ಕರೆಯಲ್ಪಟ್ಟ ಆತ್ಮಿಕ ಯಜ್ಞ ಸಮರ್ಪಣೆಗಳ ಕುರಿತು ಪ್ರಾರ್ಥನೆಯಲ್ಲಿ ಮಾತಾಡುವ ಸ್ಥಳಗಳಾಗಿವೆ. ಇದು ವಿಶ್ವಾಸಿಗಳಾಗಿ ನಮ್ಮ ಜವಾಬ್ದಾರಿಗಳು ಮತ್ತು ಶಿಸ್ತು ಪಾಲನೆಗೆ ಬಹಳವಾಗಿ ಒಳಗಾಗಿದೆ.

ನಮ್ಮಲ್ಲಿ ಅನೇಕರು ಹೊರಗಿನ ಅಂಗಳದಲ್ಲಿ ಇಲ್ಲವೆ ಒಳಗಿನ ಅಂಗಳದಲ್ಲಿ ಇರುತ್ತೇವೆ. ನಾವು ಯಜ್ಞ ಸಮರ್ಪಣೆ, ಕೊಡುವಿಕೆ, ಸ್ತೋತ್ರ, ಪ್ರಾರ್ಥನಾ ಮನವಿ,

ಮಧ್ಯಸ್ಥಿಕೆ, ಆರಾಧನೆ ಮುಂತಾದ ಸ್ಥಳಗಳಲ್ಲಿ ಇರುತ್ತೇವೆ. ನಾವು ಆತ್ಮನ ಕೆಲಸದ ಒಂದು ಅಂಶವನ್ನು ಅನುಭವಿಸುತ್ತೇವೆ (ದೀಪಸ್ತಂಭದಲ್ಲಿನ ಎಣ್ಣೆ). ನಮಗೆ ಅಗತ್ಯವಿರುವ ವಿಷಯಗಳ ಬಗ್ಗೆ ದೇವರೊಂದಿಗೆ ಮಾತಾಡುತ್ತೇವೆ. ನಮ್ಮ ಬಗೆಗಿನ ಚಿಂತೆಗಳನ್ನು ಆತನಿಗೆ ಕೊಡುತ್ತೇವೆ, ಮಾರ್ಗದರ್ಶನ ನೋಡುತ್ತೇವೆ, ಉಪವಾಸ ಮಾಡುತ್ತೇವೆ ಮತ್ತು ಉತ್ತಮ ಕ್ರಿಸ್ತೀಯ ಶಿಸ್ತು ಪಾಲನೆಯಿರುವ ವಿಷಯಗಳನ್ನು ಮಾಡುತ್ತೇವೆ. ಹಾಗಿದ್ದರೂ, ಇವೆಲ್ಲವೂ ಹೊರಗಿನ ಅಂಗಳದಲ್ಲಿನ ಮತ್ತು ಒಳಗಿನ ಅಂಗಳದ ಅನುಭವಗಳಾಗಿವೆ. ನಾವು ಪ್ರವೇಶಿಸಲು ಆಹ್ವಾನ ಹೊಂದಿದ ಮತ್ತು ಅಲ್ಲಿ ವಾಸಿಸಬಹುದಾದ ಮಹಾ ಪವಿತ್ರ ಸ್ಥಳವು ನಿಶ್ಚಲವಾಗಿ ಇದೆ.

## ಮಹಾ ಪವಿತ್ರ ಸ್ಥಳ (ಅತ್ಯಂತ ಪವಿತ್ರ ಸ್ಥಳ)

ಮಹಾ ಪವಿತ್ರ ಸ್ಥಳದಲ್ಲಿ ದೇವರೊಬ್ಬನಿಂದಲೇ ಬಂದಂತಹ ಕರುಣೆ ಮತ್ತು ಒಡಂಬಡಿಕೆ(ಒಪ್ಪಂದ)ಯಿರುತ್ತದೆ. ಅಲ್ಲಿ ನಾವು ಮಾಡಬೇಕಾಗಿರುವುದು ಏನೂ ಇಲ್ಲ, ಅಲ್ಲಿ ಯಾವುದೇ ಯಜ್ಞ-ಸಮರ್ಪಣೆಗಳಿಲ್ಲ, ಸುಗಂಧ ದ್ರವ್ಯಗಳಿಲ್ಲ, ಮಧ್ಯಸ್ಥಿಕೆಯಿಲ್ಲ, ಯುದ್ಧ ಸ್ಥಿತಿಯಿಲ್ಲ, ಮಾಡಬೇಕಾದುದು ಏನೂ ಇಲ್ಲ. ನಾವು ಮಹಾ ಪವಿತ್ರ ಸ್ಥಳದಲ್ಲಿರುತ್ತೇವೆ. ಮಹಾ ಪವಿತ್ರ ಸ್ಥಳವು ದೇವರ ಮಹಿಮೆಯು ವಾಸಿಸುವ ಸ್ಥಳವಾಗಿದೆ. ಇದು ಪವಿತ್ರ ಸ್ಥಳ. ಮಹಾ ಪವಿತ್ರ ಸ್ಥಳದಲ್ಲಿ ದೇವರ ಪ್ರಸನ್ನತೆಯ ಹೊಸ ತೀಕ್ಷ್ಣತೆಯ ಮಟ್ಟವಿರುತ್ತದೆ. ನಾವು ಆತನ ಸೌಂದರ್ಯವನ್ನು ದಿಟ್ಟಿಸಿ ನೋಡುತ್ತೇವೆ. ನಾವು ಶಾರೀರಿಕವಾಗಿರುತ್ತೇವೆ. ನಾವು ಪೂಜ್ಯತೆ, ಪವಿತ್ರ ಭಯ, ಭಯಭೀತಿಗಳಿಂದ ತುಂಬಿದವರಾಗಿರುತ್ತೇವೆ. ನಾವು ಆತನ ಮಹಿಮೆಯಿಂದ ಆವರಿಸಿರುತ್ತೇವೆ ಮತ್ತು ಆತನ ನಿಶ್ಚಿತ ಸಾರ್ವಭೌಮತ್ವದಿಂದ (ಭವ್ಯತೆ) ಸೆಳೆಯಲ್ಪಡುತ್ತೇವೆ. ನಾವು ಆತನ ಪ್ರಸನ್ನತೆಯಲ್ಲಿ ಮುಳುಗಿ ಹೋಗುತ್ತೇವೆ. ನಾವು ''ಶಾಂತವಾಗಿ ಮತ್ತು ತಿಳಿದವರಾಗಿ'' ಇರುವೆವು (ಕೀರ್ತನೆಗಳು 46:10). ಅಲ್ಲಿ ಮಾಡಬೇಕಾದುದು ಏನೂ ಇಲ್ಲ, ಆದರೆ ಆತನ ಮಹಿಮೆಯನ್ನು ನೋಡುತ್ತಿರಬೇಕು, ಆತನ ಸೌಂದರ್ಯ ದಿಟ್ಟಿಸಿ ನೋಡಬೇಕು. ನಾವು ಆತನ ಮಹಿಮೆಯನ್ನು ನೋಡುವಾಗ ದೇವರು ನಮ್ಮನ್ನು ಆತನ ಸ್ವರೂಪಕ್ಕೆ ಮಾರ್ಪಡಿಸಲು ಆಸ್ಪದ ಕೊಡಲು ''ಇರ''ಬೇಕಾದ ಸ್ಥಳ ಇದಾಗಿದೆ.

**ಬನ್ನಿರಿ; ನಮ್ಮ ನಿರ್ಮಾಣಿಕನಾದ ಯೆಹೋವನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ** (ಕೀರ್ತನೆ 95:6).

**ಯೆಹೋವನೋ ತನ್ನ ಪರಿಶುದ್ಧ ಮಂದಿರದಲ್ಲಿದ್ದಾನೆ; ಭೂಲೋಕವೆಲ್ಲಾ ಆತನ ಮುಂದೆ ಮೌನವಾಗಿರಲಿ** (ಹಬಕ್ಕೂಕ 2:20)

**ಬಿಡಿರಿ, ನಾನೇ ದೇವರು; ಲೋಕದ ಸಮಸ್ತ ಜನಗಳಿಗೂ ಸರ್ವಾಧಿಪತಿಯು ನಾನೇ ಎಂದು ತಿಳಿದುಕೊಳ್ಳಿರಿ** (ಕೀರ್ತನೆಗಳು 46:10).

ಕೀರ್ತನೆ 46:10ರ ಶಾಂತ (ಮೌನ) ಎಂಬ ಪದದ ಅರ್ಥವು ಕೆಲಸವಿಲ್ಲದ, ಸುಮ್ಮನಿರುವ (ವಿಶ್ರಾಂತಿ) ಮತ್ತು ಏಕಾಂಗಿ ಎಂಬುದಾಗಿದೆ. ''ತಿಳಿಯುವುದು'' ಅಥವಾ ''ತಿಳಿದುಕೊಳ್ಳಿರಿ'' ಎಂಬುದು ಅನುಭವದಿಂದ ತಿಳಿಯುವುದಾಗಿದೆ, ಅವಲೋಕಿಸು, ನೋಡು, ಕಂಡುಹಿಡಿ ಎಂಬುದಾಗಿದೆ.

ಇದು ದೇವರೊಂದಿಗಿನ ಸಂಪರ್ಕ ಅಥವಾ ದೇವರೊಂದಿಗೆ ಇರುವುದಾಗಿದೆ. ಸಂಪರ್ಕವು ದೇವರ ಮನೆಯಲ್ಲಿ ವಾಸಿಸುತ್ತಾ ಆತನ ಸೌಂದರ್ಯವನ್ನು ನೋಡುವುದಾಗಿದೆ. ಇದು ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತು ದೇವರ ಸ್ವರವನ್ನು ಕೇಳಿಸಿಕೊಳ್ಳುತ್ತಿದ್ದ ರೀತಿಯಲ್ಲಿ ತೋರುತ್ತದೆ. ಇದು ''ಒಂದೇ ವಿಷಯವನ್ನು ಆರಿಸಿಕೊಳ್ಳುವುದಾಗಿದೆ. ಅಂದರೆ ಆ ಉತ್ತಮಭಾಗ ಮತ್ತು ತೆಗೆಯಲ್ಪಡದೆ ಇರುವ ಭಾಗವಾಗಿರುತ್ತದೆ (ಲೂಕ 10:42). ಸಂಪರ್ಕವು ದೇವರ ಪ್ರಸನ್ನತೆಯಲ್ಲಿ ನೆನೆ(ತೋಯಿಸು)ಯುವುದಾಗಿದೆ. ಇದು ದೇವರ ಪ್ರಸನ್ನನೆಯಲ್ಲಿ ಪಾನ ಮಾಡಿರುವುದಾಗಿದೆ. ದೇವರ ಮೇಲಿರುವ ನಮ್ಮ ಹಸಿವು(ಬಯಕೆ) ಮತ್ತು ದಾಹವು ತೃಪ್ತಿಗೊಳ್ಳುವುದಾಗಿದೆ. ನಾವು ತುಂಬಿಸಲ್ಪಟ್ಟವವರಾಗುತ್ತೇವೆ ಮತ್ತು ಅಧಿಕವಾಗಿ ಬೇಕೆಂಬ ಹಸಿವು (ಬಯಕೆ) ಹೊಂದಿರುತ್ತೇವೆ!

ಮಹಾ ಪವಿತ್ರ ಸ್ಥಳದಲ್ಲಿ ನಾವು ವಾಸಿಸೋಣ. ಇದು ದೇವರೊಂದಿಗೆ ಆತ್ಮೀಯತೆ ಅಥವಾ ಅನ್ಯೋನ್ಯತೆಯ ಸ್ಥಳವಾಗಿದೆ. ಇದು ದೇವರ ಪ್ರಸನ್ನತೆಯ ತೀಕ್ಷ್ಣತೆಯ ಸ್ಥಳವಾಗಿದೆ. ಇದು ಮಹೋನ್ನತನ ರಹಸ್ಯ ಸ್ಥಳವಾಗಿದೆ.

## ಮಹೋನ್ನತನಾದವನೊಂದಿಗೆ ಅನ್ಯೋನ್ಯತೆ (ಆತ್ಮೀಯತೆ)

ದೇವರೊಂದಿಗಿನ ಸಂಪರ್ಕದ ಸ್ಥಳದಲ್ಲಿ ವಾಸಿಸುವುದು ಬಹಳ ಪ್ರಾಮುಖ್ಯವಾದುದು? ದೇವರ ಮಹಿಮೆ ಮತ್ತು ಪ್ರಸನ್ನತೆಯನ್ನು ಅನುಭವಿಸಲು ನಾವು ಏನು ಬೆಲೆಯನ್ನು ಕೊಡುವೆವು?

## ಅದು ನಾನು ಆತನನ್ನು ತಿಳಿಯುವಂತೆ

**ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ. [8]ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. [9]ಇದರಲ್ಲಿ ನನ್ನ ಉದ್ದೇಶವೇನೆಂದರೆ – ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮ ನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬುದೇ. [10]ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ, ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸ್ವರೂಪನಾಗಬೇಕೆಂಬುದೇ ನನ್ನ ಕುತೂಹಲವಾಗಿವೆ. [11]ಹೀಗಾದರೆ ಸತ್ತವರಲ್ಲಿ ಕೆಲವರಿಗೆ ಆಗುವ ಪುನರುತ್ಥಾನವು ನನಗೆ ಒದಗಿ ಬಂದೀತು** (ಫಿಲಿಪ್ಪಿಯವರಿಗೆ 3:7-11).

**ನನಗಂತೂ ಬದುಕುವುದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ** (ಫಿಲಿಪ್ಪಿಯವರಿಗೆ 1:21).

ಅಪೊಸ್ತಲನಾದ ಪೌಲನು ''ಕ್ರಿಸ್ತನನ್ನು ತಿಳಿಯುವುದು'' ಆತನ ಪ್ರಾಥಮಿಕ ಅಭಿಲಾಷೆಯಾಗಿ ಮಾಡಿಕೊಂಡನು. ಅವನು ಎಲ್ಲವನ್ನು ಕಡೆಗಣಿಸಿದ್ದನು, ಆದ್ದರಿಂದ ಅವನು ಆತನನ್ನು ತಿಳಿಯಲು, ಆತನ ಪುನರುತ್ಥಾನದ ಬಲವನ್ನು ಮತ್ತು ಆತನಿಗಾಗಿ ಹಿಂಸೆಯನ್ನು ಸಹ ತಾಳಿಕೊಳ್ಳುವ/ಹಂಚಿಕೊಳ್ಳುವುದಕ್ಕಾಗಿಯೇ ಆಗಿತ್ತು. ಪೌಲನಿಗೆ ಯೇಸುವಿನ ಕುರಿತಾದುದು ಭೂಮಿಯ ಮೇಲಿನ ಜೀವಿತವಾಗಿತ್ತು!

ಕ್ರಿಸ್ತನನ್ನು ತಿಳಿಯಲು ನಾವು ಹೇಗೆ ಅತ್ಯಾಸಕ್ತಿಯಿಂದ ಅಪೇಕ್ಷಿಸುತ್ತೇವೆ? ಆತನನ್ನು ತಿಳಿಯುವುದರ ಬಗ್ಗೆ ಮತ್ತು ಆತನೊಂದಿಗೆ ನಮ್ಮ ವೈಯಕ್ತಿಕ (ಅನ್ಯೋನ್ಯ)ದಲ್ಲಿ ನಮ್ಮ ಕರ್ತನ ಕುರಿತು ಅತ್ಯಾಸಕ್ತಿ ಸಹೃದಯಿಗಳಾಗಿ ಕಂಡು ಬರುತ್ತೇವೋ? ಆತನ ಪ್ರಸನ್ನತೆಗಾಗಿ ಅತ್ಯಾಸಕ್ತರಾಗಿರುವ ಜನರ ಹಾಗೆ ನಾವು ಆಗಬಹುದೋ?

## ಆತ್ಮೀಯತೆಯು(ಅನ್ಯೋನ್ಯ) ಫಲವತ್ತತೆಯನ್ನು ಉತ್ಪಾದಿಸುತ್ತದೆ

**ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲ ಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲ ಕೊಡಲಾರಿರಿ. [5]ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ** (ಯೋಹಾನ 15:4,5).

ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು ಎಂಬುದಾಗಿ ಯೇಸುವು ಹೇಳಿದ್ದಾನೆ. ಇದು ಜೀವಿತದಲ್ಲಿ ಮತ್ತು ಸೇವೆಯಲ್ಲಿ ಫಲದ ರಹಸ್ಯವಾಗಿರುತ್ತದೆ. ಯೇಸುವು ಮುಖ್ಯವಾದ ದ್ರಾಕ್ಷೇ ಬಳ್ಳಿ ಮತ್ತು ಕೊಂಬೆಗಳ ನಡುವೆ ಏನು ಜರುಗುತ್ತದೆ ಎಂಬುದನ್ನು ನಿರೂಪಿಸಲು ''ನೆಲೆಗೊಂಡಿರು'' ಎಂಬ ಪದವನ್ನು ಉಪಯೋಗಿಸಿದ್ದಾನೆ. ಅವುಗಳು ಅಂಟಿಕೊಂಡಿರುತ್ತವೆ. ಅವುಗಳು ಸಂಪರ್ಕ ಹೊಂದಿರುತ್ತವೆ. ಎರಡು ಕಡೆಗಳಲ್ಲೂ ತೊಡಗುವಿಕೆ ಇರುತ್ತದೆ. ಇದು ಒಂದು ಕೇವಲ ಬಾಹ್ಯ ರೂಪದ ಸಂಪರ್ಕವಲ್ಲ. ಅಲ್ಲಿ ಏನಾದರೊಂದು ''ಆಳವಾಗಿ'' ಜರುಗುತ್ತದೆ. ಪ್ರಾಯಶಃ ಇದು ಉತ್ತಮ ಪದವಿಗಳಾದ ಅನ್ಯೋನ್ಯತೆ, ಆತ್ಮೀಯತೆ ಅಥವಾ ಸಂಪರ್ಕ ಎಂಬುದಾಗಿ ಉಲ್ಲೇಖಿತವಾಗಿದೆ, ಮತ್ತು ಕರ್ತನೊಡನೆ ವಿಶ್ವಾಸಿಗಳು ಹೊಂದಿರಬೇಕಾದ ಆಳವಾದ ಸಂಪರ್ಕದ ವಿವರವಾಗಿದೆ. ದೇವರೊಂದಿಗಿನ ಅನ್ಯೋನ್ಯತೆಯ ಸೇವೆಯಲ್ಲಿ ಅಂತಹ ಫಲವನ್ನು ತರುತ್ತದೆ. ಫಲವತ್ತತೆಯು ಕೇವಲ ವರಗಳೊಡನೆ ಮತ್ತು ಅನುಭವಗಳೊಡನೆ ಉತ್ಪತ್ತಿಯಾಗಲಾರದು.

ಸೇವೆಯು, ಆತ್ಮಿಕ ವರಗಳು, ಸ್ವಾಭಾವಿಕ ತಲಾಂತುಗಳು, ಉತ್ತಮ ಸೇವಾ ಸಂಸ್ಥೆ, ಉನ್ನತ ನಿರ್ವಹಣೆ, ವ್ಯಾಪಾರ ಕೌಶಲ್ಯತೆ ಮುಂತಾದವುಗಳ ಮೇಲೆ ಆಧಾರಿತಗೊಂಡಿರುವಂತೆ ಗೋಚರಿಸುತ್ತದೆ. ಆದರೆ ಇದು ದೇವರು ವೈಯುಕ್ತಿಕವಾಗಿ ಒಂದು ಗುಂಪಿನ ಜನರ ಜೀವನವನ್ನು ದೇವರು ಆಕ್ರಮಿಸುವಂತೆ ಅಥವಾ ಕೊಡಲ್ಪಟ್ಟ ಯಾವುದೇ ಸಮಯದಲ್ಲಿ ಒಬ್ಬ ವ್ಯಕ್ತಿಯ ಜೀವಿತವನ್ನು ಪೂರ್ಣವಾಗಿ ನೆಲೆಸುವುದರಲ್ಲಿರುವಂತೆ ಇರುವುದಿಲ್ಲ. ದೇವರೊಂದಿಗಿನ ನಿಕಟ ಸಂಬಂಧದಿಂದ ಜನಿಸಿದ ಸೇವೆಯಿಂದ ಬರುವ ಫಲಿತಾಂಶ ಮತ್ತು ಕೊನೆಯಲ್ಲಿ ಸ್ಥಿರ ಫಲದಾಯಕತೆಯು ಇರುತ್ತದೆ ಮತ್ತು ಅದಕ್ಕಿಂತಲೂ ಅತ್ಯಧಿಕವಾದುದು ಇರುತ್ತದೆ. ಮನುಷ್ಯ ವಾಕ್ಚಾತುರ್ಯ ಮನಸ್ಸನ್ನು ಉದ್ರೇಕಿಸಬಹುದು ಮತ್ತು ನಿಶ್ಚಯಿಸಬಹುದು. ಆದರೆ ದೇವರ ಪ್ರಸತನ್ನತೆಯು ವ್ಯಕ್ತಿಯ ಆಂತರ್ಯವನ್ನು ರೂಪಾಂತರಿಸುತ್ತದೆ. ಶಾಶ್ವತ ಬದಲಾವಣೆಯನ್ನು ತರುತ್ತದೆ. ನಾವು ದೇವರೊಂದಿಗಿನ ಆಳವಾದ ನಿಕಟ ಸಂಬಂದದಲ್ಲಿ ಒತ್ತಿಕೊಂಡಂತಿರೋಣ, ಇದರಿಂದ ಆತನು ನಮ್ಮ ಮೂಲಕ ಅಧಿಕವಾದ, ಉಳಿಯುವಂತಹ ಫಲಗಳನ್ನು ಬಿಡುಗಡೆ ಮಾಡುತ್ತಾನೆ.

ವರಗಳು ಮತ್ತು ಅಭಿಷೇಕವು ಕೊಡಲ್ಪಡಬಹುದು ಅಥವಾ ತಿಳಿಸಲ್ಪಡಬಹುದು. ಆದರೆ ದೇವರೊಂದಿಗಿನ ಆತ್ಮೀಯತೆಯು (ನಿಕಟ ಸಂಬಂಧವು) ದೇವರೊಡನೆ ನಿಮ್ಮ ವೈಯುಕ್ತಿಕ ಸಮಯದ ಮೂಲಕ ನೀವು ಅಭಿವೃದ್ಧಿಪಡಿಸಿಕೊಳ್ಳುವುದಾಗಿದೆ.

## ರಹಸ್ಯ ಸ್ಥಳ

**''ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು, ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು''** (ಮತ್ತಾಯ 6:6)

ಕರ್ತನಾದ ಯೇಸುವು ನಾವು ತಂದೆಯೊಡನೆ ನಮ್ಮ ರಹಸ್ಯ ಸ್ಥಳದಲ್ಲಿರಬೇಕೆಂದು - ಅಂದರೆ ನಾವು ಏಕಾಂಗಿಯಾಗಿ ತಂದೆಯೊಡನೆ ಇರುವ ನಮ್ಮ ಪ್ರಾರ್ಥನಾ ಸ್ಥಳದಲ್ಲಿರಬೇಕೆಂದು ಪ್ರೋತ್ಸಾಹಪಡಿಸುತ್ತಾನೆ. ನಾವು ಇದನ್ನು ಮಾಡಿ, ಬಳಿಕ ಪ್ರಪಂಚದೊಳಗೆ ನಾವು ಹೋದಾಗ ವಿಷಯಗಳು ಜರುಗುತ್ತವೆ ಎಂಬುದಾಗಿ ಆತನು ಭರವಸೆ ಕೊಡುತ್ತಾನೆ. ಹೊರಗಡೆ ನಮ್ಮ ಪರವಾಗಿ ದೇವರು ಚಲಿಸುತ್ತಾನೆ.

ಏಕಾಂತದಲ್ಲಿ ಏನು ಜರುಗುತ್ತದೋ, ಅದು ಸಾರ್ವಜನಿಕವಾಗಿ ಏನು ಜರುಗುತ್ತದೆಂಬುದನ್ನು ನಿಶ್ಚಯಿಸುತ್ತದೆ.

ಏಕಾಂತ ಸ್ಥಳವು, ಪೇಟೆ (ವ್ಯಾಪಾರ ಸ್ಥಳ) ಸೇವೆಯ ಸಿದ್ಧತೆಯ ಸ್ಥಳವಾಗಿರುತ್ತದೆ.

**''ನಾನು ಕತ್ತಲಲ್ಲಿ ನಿಮಗೆ ಹೇಳುವುದನ್ನು ನೀವು ಬೆಳಕಿನಲ್ಲಿ ಹೇಳಿರಿ ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ** (ಮತ್ತಾಯ 10:27).

ನೀವು ಸಾರ್ವಜನಿಕವಾಗಿ ಸಾರಬೇಕಾದುದು ನಿಮ್ಮ ಏಕಾಂತ ಸ್ಥಳದಲ್ಲಿ ದೇವರು ನಿಮಗೆ ಹೇಳುವ ಪಿಸುಮಾತುಗಳು!

ಪ್ರತಿಯೊಂದು ದಿನವೂ ದೇವರ ಪ್ರಸನ್ನತೆಯನ್ನು ಅಭ್ಯಸಿಸಿರಿ!

1605ರಿಂದ 1691ರವರೆಗೆ ಕ್ರೈಸ್ತ ಸಂನ್ಯಾಸಿಯಾಗಿ ಜೀವಿಸಿದ ಸಹೋದರ ಲಾರೆನ್ಸ್‌ರವರು, ಮಠದ ಅಡುಗೆ ಮನೆಯ ಸೇವಕನ ಕೆಲಸ ಮಾಡುತ್ತಿದ್ದ ಸಮಯದಲ್ಲಿ ''ದೇವರ ಪ್ರಸನ್ನತೆಯನ್ನು ಅಭ್ಯಸಿಸಿದ'' ಸುಪ್ರಸಿದ್ಧ ಉದಾಹರಣೆಯ ವಿಶ್ವಾಸಿ

ಎಂಬುದಾಗಿ ಗುರ್ತಿಸಲ್ಪಟ್ಟಿದ್ದಾರೆ. ‘‘ನಿವೃತ್ತರಾದ ಬಳಿಕ ದೇವರೊಂದಿಗೆ ಏಕಾಂತ ವೇಳೆಯಲ್ಲಿ ಹೆಚ್ಚು ಅನ್ಯೋನ್ಯವಾಗಿದ್ದುದಕ್ಕಿಂತಲೂ ಅವರ ಬಾಹ್ಯ ಸೇವೆ ಮಾಡುವಾಗ ಅನ್ಯೋನ್ಯವಾಗಿದ್ದರು’’ ಎಂದು ಬರೆಯಲ್ಪಟ್ಟಿದೆ. ಅವನ ಮುಖಭಾವವು ಅಪ್ಪಟ ನೀತಿಬೋಧೆ ಮಾಡುವುದಾಗಿತ್ತು. ಇದರಿಂದ ಸಿಹಿಯಾದ ಮತ್ತು ಶಾಂತವಾದ ದೈವಭಕ್ತಿಯು ಕಾಣಿಸಿತು. ಇದು ಪ್ರೇಕ್ಷಕರ ಮೇಲೆ ಬಹಳ ಪರಿಣಾಮ ಬೀರಿತು. ತನ್ನ ಅಡುಗೆ ಮನೆಯ ಅತ್ಯಂತ ಅವಸರದ ಕರ್ತವ್ಯದಲ್ಲೂ ಅವನು ಪರಲೋಕದ ಮನೋಭಾವ ಮತ್ತು ಅವನ ಅನುಬೋಧೆಗಳನ್ನು (ನೆನಪು) ಸುರಕ್ಷಿತ ಮಾಡಿಕೊಂಡಿದ್ದರು ಎಂದು ಅವಲೋಕಿಸಲ್ಪಟ್ಟಿದೆ. ಅವರು ಅವಸರ ಪಡುತ್ತಿರಲಿಲ್ಲ ಮತ್ತು ಆಲಸ್ಯದಿಂದಿರಲಿಲ್ಲ. ಆದರೆ ಪ್ರತಿಯೊಂದು ವಿಷಯವನ್ನು ಅದರ ಸಮಯಕ್ಕೆ ತಕ್ಕ ಹಾಗೆ ಮಾಡಿದರು. ಅಂದರೆ ಸತತ ಚಿತ್ತಶಾಂತಿ ಮತ್ತು ಆತ್ಮನ ಸಮಚಿತ್ತದೊಡನೆ ಕೆಲಸವನ್ನು ತಕ್ಕ ಸಮಯದಲ್ಲಿ ಮಾಡಿದರು. ‘‘ಕರ್ತವ್ಯದ ಸಮಯದಲ್ಲಿ’’ - ನಾನು ದೇವರೊಂದಿಗಿನ ಪ್ರಾರ್ಥನಾ ಸಮಯದಿಂದ ಭಿನ್ನವಾಗಿರಲಿಲ್ಲ; ಭಿನ್ನ ವಿಷಯಗಳಿಗಾಗಿ ಅನೇಕ ವ್ಯಕ್ತಿಗಳು ನನ್ನನ್ನು ಒಂದೇ ಸಮಯದಲ್ಲಿ ಕರೆಯುವಾಗಲೂ ನನ್ನ ಅಡುಗೆ ಮನೆಯಲ್ಲಿನ ಗಡಿಬಿಡಿ ಮತ್ತು ಶಬ್ದದಲ್ಲೂ ನಾನು ಪೂಜ್ಯ ಸಂಸ್ಕಾರದಲ್ಲಿ ನನ್ನ ಮೊಣಕಾಲಿನ ಮಹಾ ಸ್ಥೈರ್ಯದಿಂದ ದೇವರನ್ನು ನನ್ನ ಒಡೆಯನನ್ನಾಗಿಸಿಕೊಂಡಿದ್ದೇನೆ. ಹಾಗೆ ಶಾಂತವಾಗಿರುತ್ತಿದ್ದೆನು ಎಂದು ಹೇಳಿದ್ದಾರೆ. (ಉಲ್ಲೇಖ; ದೇವರ ಪ್ರಸನ್ನತೆಯ ಅಭ್ಯಾಸದ ಪವಿತ್ರ ಜೀವಿತದ ಉತ್ತಮ ಶಾಸನ, ಪಬ್ಲಿಕ್ ಡೊಮೈನ್ ಎಡಿಷನ್, ಜಾನ್ ಹ್ಯಾರೀಸ್, ಬ್ರಿಸ್ಟಲ್, ಇಂಗ್ಲೆಂಡ್, 1994).

ನಾವು ಯಾವಾಗ ದೇವರಿಗಾಗಿ ತೀವ್ರ ಹಂಬಲಿಸುತ್ತೇವೋ ಆಗ ದೇವರು ಪ್ರಬಲ ಸಂದರ್ಶನದ ಮೂಲಕ ಸಂದರ್ಶನ ಕೊಡುತ್ತಾನೆ.

ನಾವು ಆತನ ಪ್ರಸನ್ನತೆಯನ್ನು ಮತ್ತು ಆತನನ್ನು ಹೆಚ್ಚಾಗಿ ಅನುಭವಿಸಲು ಬೆಲೆಯನ್ನು ಪಾವತಿಸುವೆವೊ?

**ದೇವರು ಹೆಚ್ಚಾಗಿ ಬೇಕೆಂಬುದಾಗಿ ಬಯಕೆವುಳ್ಳವರಾಗಿರಿ!**
**ಆತನಿಗಾಗಿ ಬಯಕೆ (ಹಸಿವು) ಹೊಂದಿರುವವರಿಗೆ**
**ದೇವರು ಪ್ರತಿಕ್ರಿಯೆ ತೋರುತ್ತಾನೆ.**

# 2

# ಆತನ ಪ್ರಸನ್ನತೆಯಲ್ಲಿ

ನಾವು ಆತನ ಪ್ರಸನ್ನತೆಯಲ್ಲಿರುವಾಗ ಏನು ಸಂಭವಿಸುತ್ತದೆ? ನಾವು ಆತನನ್ನು ಹಿಂಬಾಲಿಸಿ ಆತನ ಮುಖವನ್ನು ಹುಡುಕುವಾಗ ಏನು ನಡೆಯುತ್ತದೆ?

## ನಾವು ಬದಲಾವಣೆ ಹೊಂದುತ್ತೇವೆ

''**ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ**'' (2 ಕೊರಿಂಥದವರಿಗೆ 3:18).

ದೇವರೊಡನೆ ಅರ್ಥಪೂರ್ಣ ಸಮಯವನ್ನು ಕಳೆದು ಬದಲಾವಣೆ ಇಲ್ಲದೆ ಹೊರ ಬರುವವರು ಒಬ್ಬರೂ ಇಲ್ಲ. ದೇವರ ಪ್ರಸನ್ನತೆಯು ನಮ್ಮನ್ನು ಬದಲಾಯಿಸುತ್ತದೆ.

ನಾವು ಆತನ ಮಹಿಮೆಯನ್ನು ದೃಷ್ಟಿಸುವಾಗ, ಆತನ ಆತ್ಮನ ಕಾರ್ಯದಿಂದಾಗಿ ನಾವು ಆ ಪ್ರಭಾವದ ಸಾರೂಪ್ಯವುಳ್ಳವರಾಗುತ್ತೇವೆ. ಆತನು ನಮ್ಮನ್ನು ಪ್ರಭಾವ (ಮಹಿಮೆ) ಎಂಬುದು, ಈ ಸನ್ನಿವೇಶದಲ್ಲಿ ದೇವರು ಏನಾಗಿದ್ದಾನೆ ಮತ್ತು ಆತನು ಏನು ಮಾಡುತ್ತಾನೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಆತನು ಯಾರು, ಆತನು ಏನು ಮಾಡುತ್ತಾನೆ ಎಂಬುದನ್ನು ತೋರ್ಪಡಿಸುತ್ತಾ ನಾವು ಒಂದು ಮಟ್ಟದಿಂದ ಮತ್ತೊಂದು ಮಟ್ಟ ತಲುಪುತ್ತೇವೆ. ಆತನ ಪ್ರಸನ್ನತೆಯಲ್ಲಿ ನಾವು ಆತನ ಸಾರೂಪ್ಯಕ್ಕೆ ಬದಲಾವಣೆ ಹೊಂದುತ್ತೇವೆ!

## ಮನವರಿಕೆ (ಅಪರಾಧ ನಿರ್ಣಯ)

''**ತರುವಾಯ ಯೆಹೋವ ದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀ-ಪುರುಷರು ಆತನ ಸಪ್ಪಳವನ್ನು ಕೇಳಿ ಆತನಿಗೆ ಕಾಣಿಸಬಾರದೆಂದು ತೋಟದ ಮರಗಳ ಹಿಂದೆ ಅಡಗಿಕೊಂಡರು**'' (ಆದಿಕಾಂಡ 3:8).

''**ನನ್ನ ದೋಷಕ್ಕೆ ವಿಮುಖನಾಗು; ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು. ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು.**'' ನಿನ್ನ

**ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ. ನಿನ್ನ ರಕ್ಷಣಾನಂದವನ್ನು ನಾನು ತಿರುಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು** (ಕೀರ್ತನೆಗಳು 51:9-12).

ಅನೇಕ ಸಮಯಗಳಲ್ಲಿ ದೇವರ ಪ್ರಸನ್ನತೆಯು ನಮ್ಮ ಜೀವಿತದಲ್ಲಿ ದೇವರು ಮೆಚ್ಚದೆ (ಇಷ್ಟಪಡದೇ) ಇರುವ ಅನೇಕ ವಿಷಯಗಳನ್ನು ಮತ್ತು ತಪ್ಪು ಅಪರಾಧಗಳನ್ನು ಪಾಪದ ಆಳವಾದ ಮನವರಿಕೆಯನ್ನುಂಟು ಮಾಡುತ್ತದೆ. ಆಳವಾದ ಮನವರಿಕೆಯು ವಿವೇಚನೆಯಿರುವಾಗ, ಇದು ದೇವರಿಂದ ನಮ್ಮನ್ನು ದೂರ ತೊಲಗಿಸುವದು ಖಂಡನೆಯ ಅನುಭವವಲ್ಲ. ನಿಜವಾಗಿ ಹೇಳುವುದಾದರೆ ಇದು ನಮ್ಮ ಹೃದಯದ ಪಶ್ಚಾತ್ತಾಪದ ರೋಧನ, ಶುದ್ಧೀಕರಣ ಮತ್ತು ಆತನ ಪ್ರಸನ್ನತೆಯು ಹೆಚ್ಚಾಗಿ ಬೇಕೆಂಬ ಹಂಬಲದ ಫಲಿತಾಂಶವಾಗಿರುತ್ತದೆ. ಯೆಶಾಯನಂತೆ ''ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು, ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಯೆಹೋವನನ್ನು ಕಂಡವು'' (ಯೆಶಾಯ 6:5). ನಾವು ಸಹ ರೋಧಿಸುತ್ತೇವೆ. ನಮ್ಮ ಪಾಪ ಶುದ್ಧ ಮಾಡಲು ಮತ್ತು ತೆಗೆದು ಬಿಡಲು ಶುದ್ಧೀಕರಿಸುವ ಇದ್ದಲುಗಳನ್ನು ಕಳುಹಿಸುವುದರೊಂದಿಗೆ ದೇವರ ಪ್ರತಿಕ್ರಿಯಿಸುತ್ತಾನೆ,.... ತಕ್ಷಣವಾಗಿ ಜೀವಿತ-ಬದಲಾಯಿಸುವ ಸಂದರ್ಶನವು ಜರುಗುತ್ತದೆ. ಮುಂದುವರೆದು ಆಳವಾದ ಮನವರಿಕೆ ಉಂಟಾಗುತ್ತದೆ. ಇಂಥ ಆಳವಾದ ಮನವರಿಕೆಯ ಕ್ಷಣ ಉಂಟಾದ ಬಳಿಕ ಯೆಶಾಯನು ಮತ್ತು ಪೇತ್ರನು ತಕ್ಷಣವಾಗಿ ಅವರ ಜೀವಿತಗಳ ಆದೇಶಾಧಿಕಾರ ಪಡೆದುಕೊಂಡರು. (ಯೆಶಾಯ 6:8:9; ಲೂಕನು 5:8,10)

ಅನೇಕ ಬಾರಿ, ಉಜ್ಜೀವನದ ಸುರಿಸುವಿಕೆಯ ಪ್ರಾರಂಭಿಕ ಅವಧಿಯಲ್ಲಿ ಜನರೊಳಗೆ ಬಹಳ ಗಂಭೀರವಾದ ಬದಲಾವಣೆಗಳು ಉಂಟಾಗುತ್ತವೆ. ದೇವರ ಪ್ರಭಾವಕ್ಕೆ ತಪ್ಪಿ ಹೋಗಿದ್ದೇವೆ ಎಂಬ ಆಳವಾದ ಪಾಪದ ಮನವರಿಕೆಯಾಗುತ್ತದೆ. ಪವಿತ್ರಾತ್ಮನು ನಮ್ಮ ಹೃದಯಗಳ ಕಾಠಿಣ್ಯಗಳನ್ನು ಮುರಿದು ಹಾಕುವುದರಿಂದ, ಅಶುದ್ಧತ್ವವನ್ನು ಸುಟ್ಟು ಹಾಕುವುದರಿಂದ, ಹೊಸ ಬೆಂಕಿಯಿಂದ ತಂಪನ್ನು ಬದಲೀಕರಿಸುವುದರಿಂದ, ನಮ್ಮನ್ನು ನಿರ್ಬಂಧಿಸುವ ಧಾರ್ಮಿಕ ಆಚರಣೆಗಳನ್ನು ಮುರಿದು ಹಾಕುವುದರಿಂದ, ನಮ್ಮ ಗರ್ವವನ್ನು ಭಗ್ನಗೊಳಿಸುವುದರಿಂದ ಮತ್ತು ಇನ್ನು ಅಧಿಕವಾದವುಗಳಿಂದ ನಮ್ಮನ್ನು ರೂಪಾಂತರಿಸುತ್ತಾನೆ. ಆತನು, ದೇವರ ಮೇಲಿನ ಪ್ರೀತಿಯ ಮಟ್ಟವನ್ನು ಹೆಚ್ಚಿಸುತ್ತಾನೆ, ಆತನ ಪ್ರಸನ್ನತೆಯ ದಾಹವನ್ನು, ದೇವರನ್ನು

ಹಿಂಬಾಲಿಸುವ ಕ್ರಮದಲ್ಲಿ ತ್ಯಾಗಗಳನ್ನು ಮಾಡುವ, ಅರ್ಪಿಸುವ ಚಿತ್ತದಲ್ಲಿ ಹೆಚ್ಚಳವನ್ನು ಉಂಟುಮಾಡುತ್ತಾನೆ. ಆತನು ದೇವಜನರ ಮಧ್ಯದಲ್ಲಿ ಐಕ್ಯತೆ ಮತ್ತು ಅನ್ಯೋನ್ಯತೆ, ಒಬ್ಬರಿಗೊಬ್ಬರು ಹೊಸ ಸಮುದಾಯದ ಪ್ರಜ್ಞೆಯಲ್ಲಿ ಜನಿಸುವ ಕಡೆಗೆ ನಮ್ಮ ಹೃದಯಗಳನ್ನು ಬದಲಾಯಿಸುತ್ತಾನೆ. ಆತನ ಪ್ರಸನ್ನತೆಯ ಜನರಾಗುವಂತೆ ದೇವರು ನಮ್ಮನ್ನು ಸಿದ್ಧಗೊಳಿಸುತ್ತಾನೆ. ನಾವು ಉಜ್ಜೀವನದ ಬೆಂಕಿಯನ್ನು ಅನುಭವಿಸಿ ಅದನ್ನು ಇತರರಿಗೂ ಸಾಗಿಸಬಹುದು.

## ಭಗ್ನವಾಗುವಿಕೆ (ಮುರಿಯಲ್ಪಡುವಿಕೆ)

**''ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ''** (1 ಕೊರಿಂಥದವರಿಗೆ 1:29).

ಆತನ ಪ್ರಸನ್ನತೆಯಲ್ಲಿ ನಿಂತುಕೊಳ್ಳಲು ನಮ್ಮನ್ನು ಅರ್ಹರನ್ನಾಗಿ ಮಾಡುವುದರಲ್ಲಿ ದೇವರ ಪ್ರಸನ್ನತೆಯಲ್ಲಿ ನಾವು ಅಂದುಕೊಳ್ಳುವ ಕೆಲವು ಇತರ ಕ್ಷಣಗಳು ಸಹ ಇವೆ. ನಾವು ವಿಫಲರಾಗಿದ್ದೇವೆಂಬುದಾಗಿ ತಿಳಿಯುತ್ತೇವೆ. ನಾವು ಬರೀ ಧೂಳು ಮತ್ತು ಆತನ ಪ್ರಸನ್ನತೆಯಲ್ಲಿ ಹೊಗಳಿಕೊಳ್ಳಲು ನಮ್ಮಲ್ಲಿ ಯಾವುದೂ ಇಲ್ಲವೆಂಬುದಾಗಿ ನಮಗೆ ಗೊತ್ತಾಗುತ್ತಿದೆ. ಆತನಿಂದ ತಪ್ಪಿಸಿಕೊಂಡು ಓಡಿಹೋಗಿ ಅಡಗಿಕೊಳ್ಳಲು ಯಾವುದೇ ಸ್ಥಳವಿಲ್ಲ (ಕೀರ್ತನೆ 139:7). ಇದು ಸಂಪೂರ್ಣ ಸಮರ್ಪಣೆಯ, ಆತನ ಚಿತ್ತಕ್ಕೆ ಒಳಪಡಿಸುವ ಸ್ಥಳಕ್ಕೆ ನಮ್ಮನ್ನು ನಡೆಸುತ್ತದೆ. ಅಲ್ಲಿ ಆತನೊಂದಿಗೆ ನಮ್ಮ ಹೃದಯದ ಉದ್ದೇಶಗಳು ಕನಸುಗಳು ಮತ್ತು ಇಚ್ಛೆಗಳು ಸಮಾನಾಂತರಗೊಳ್ಳುತ್ತವೆ.

## ಸಂತೋಷ

**'ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ** (ಕೀರ್ತನೆಗಳು 16:11).

ಆತನ ಪ್ರಸನ್ನತೆಯಲ್ಲಿ ಬದಲಾವಣೆ ಹೊಂದಿದ ಭಾಗವಾಗಿ ನಾವು ಆತನ ಪ್ರಸನ್ನತೆಯಲ್ಲಿರುವಾಗ ಬರುವ ಸಂಪೂರ್ಣ ಸಂತೋಷದ ಅನುಭವವೂ ಒಳಪಟ್ಟಿರುತ್ತದೆ. ದೇವರು ನಮ್ಮನ್ನು ಪರಮಾನಂದ ತೈಲದಿಂದ ಅಭಿಷೇಕಿಸುತ್ತಾನೆ (ಕೀರ್ತನೆಗಳು 45:7; ಇಬ್ರಿಯರಿಗೆ 1:9). ಸಂತೋಷವು ಸಮೃದ್ಧವಾದದು, ಕೆಲವು ಬಾರಿ ಗಟ್ಟಿಯಾಗಿರುತ್ತದೆ ಮತ್ತು ಕಂಪಿಸುವುದಾಗಿರುತ್ತದೆ. ಜನರು

ಸ್ವಯಂಪ್ರೇರಿತವಾಗಿ, ಕುಣಿಯುವುದು, ಹಾಡುವುದು, ನಗುವುದು, ಓಡುವುದು, ಕೂಗಾಡುವುದು ಅಥವಾ ಅನೇಕ ಇತರ ಮಾರ್ಗಗಳ ಮೂಲಕ ತುಂಬಿ ಹರಿಯುವ ಆನಂದವನ್ನು ತೋರ್ಪಡಿಸುತ್ತಾರೆ. ಇವುಗಳಲ್ಲಿ ಯಾವುದನ್ನೂ ಅಲ್ಲೆಗಳೆಯಲಾಗದು. ಯಾಕೆಂದರೆ, ಇದು ಆತನ ಪ್ರಸನ್ನತೆಯು ನಮ್ಮಲ್ಲಿ ಉತ್ಪತ್ತಿ ಮಾಡುವುದಾಗಿದೆ. ಕೆಲವು ಜನರು ಇಂತಹ ಸಂತೋಷದ ಭಾವಗಳಿಗೆ ಅಸಮ್ಮತಿ ಸೂಚಿಸುವುದನ್ನು ನಾನು ಸ್ಪಷ್ಟವಾಗಿ ಗ್ರಹಿಸಿದ್ದೇನೆ.

ದೇವರ ಪ್ರಸನ್ನತೆಯಲ್ಲಿ ಏನಾದರೂ ಜರುಗಿದರೆ ಅದು ಮೃದು, ಶಾಂತ ಮತ್ತು ಗಂಭೀರವಾಗಿರಬೇಕೆಂಬುದಾಗಿ ಅವರು ಅಭಿಪ್ರಾಯ ಹೊಂದಿರುತ್ತಾರೆ. ಹಾಗಿದ್ದರೂ ಅಂತಹ ಅಭಿಪ್ರಾಯಗಳು ಸತ್ಯವೇದಕ್ಕನುಸಾರವಾದವುಗಳಲ್ಲ; ಕೂಗಾಡುವುದು, ಆಚರಿಸುವುದು, ಗಟ್ಟಿಯಾಗಿರುವುದು ಮತ್ತು ಘೋಷಿಸುವುದು ದೇವರ ಪ್ರಸನ್ನತೆಯಲ್ಲಿ ಮೊಣಕಾಲೂರಿದ ದೇಹಸ್ಥಿತಿ, ಬಾಗುವುದು ಮತ್ತು ಶಾಂತವಾಗಿರುವುದು ಮುಂತಾದವುಗಳು ಅಂಗೀಕೃತವಾಗುವಂತೆ ಇವುಗಳೂ ಸಹ ಅಂಗೀಕರಿಸಲ್ಪಡುತ್ತವೆ. ಸೊಲೋಮೋನನು ಅರಸನಾದಾಗ, ದಾವೀದನೊಡನೆ, ಯಾಜಕನಾದ ಚಾದೋಕ ಮತ್ತು ಪ್ರವಾದಿಯಾದ ನಾತಾನನು ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡು ''ತರುವಾಯ ಅವರೆಲ್ಲರೂ ಅವನನ್ನು ಹಿಂಬಾಲಿಸಿ ಕೊಳಲೂದುತ್ತಾ ಬಹು ಸಂತೋಷದಿಂದ ಆರ್ಭಟಿಸುತ್ತಾ ತಿರಿಗಿ ಬಂದರು. ಅವರ ಕೂಗಿನಿಂದ ಭೂಮಿಯು ಸೀಳಿ ಹೋಗುತ್ತದೋ ಎಂಬಂತೆ ಆಯಿತು'' ಎಂದು ಸತ್ಯವೇದದಲ್ಲಿ (1 ಅರಸುಗಳು 1:40) ವಿಶ್ಲೇಷಿಸಲ್ಪಟ್ಟಿದೆ. ಅದು ಒಂದು ರಮಣೀಯವಾದ ಕೂಗು! ಸಂತೋಷಕ್ಕಾಗಿ ಕೂಗಾಡುವುದು ನಿಶ್ಚಿತವಾಗಿ ಸತ್ಯವೇದಕ್ಕನುಸಾರವಾದದ್ದು. ಸಂತೋಷವು ಕರ್ತನಿಂದ ಬಂದಂತಹ ರಕ್ಷಣೆಯ ಒಂದು ಭಾಗವಾಗಿದೆ. ಕೀರ್ತನೆಗಳ ಪುಸ್ತಕದಲ್ಲಿ ''ಉತ್ಸಾಹ ಧ್ವನಿ'' ಎಂಬ ಪದಪುಂಜವು 37 ಸಾರಿ ಇದೆ. ಕೀರ್ತನೆಗಾರನು ''ಕರ್ತನಿಗೆ ಉತ್ಸಾಹ ಧ್ವನಿ ಮಾಡಿರಿ'' ಎಂಬುದಾಗಿ ಪ್ರೋತ್ಸಾಹಪಡಿಸುವುದರಿಂದ ದೇವರು ಧ್ವನಿಯನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತಾನೆ ಎಂಬುದಾಗಿ ನಾನು ಯೋಚಿಸುವುದಿಲ್ಲ (ಕೀರ್ತನೆಗಳು 95:1; 98:4).

ಸಂತೋಷವು ಬಿಡುಗಡೆ ತರುತ್ತದೆ, ಸಂತೋಷವು ಬಲವನ್ನು ತರುತ್ತದೆ. ಇದು ಪರಿಪೂರ್ಣತೆ ತರುತ್ತದೆ (ಜ್ಞಾನೋಕ್ತಿಗಳ 17:22). ಸಂತೋಷವು ಸ್ವತಂತ್ರಗೊಳಿಸುತ್ತದೆ (ಮುಕ್ತಗೊಳಿಸುತ್ತದೆ).

## ನಮ್ಮ ಬಲದಲ್ಲಿ ನಾವು ನವೀಕೃತಗೊಳ್ಳುತ್ತೇವೆ (ಹೊಸದಾಗುತ್ತೇವೆ)

**ನೀನು ಗ್ರಹಿಸಲಿಲ್ಲವೋ? ಕೇಳಲಿಲ್ಲವೋ? ಯೆಹೋವನು ನಿರಂತರ ದೇವರೂ ಭೂಮಿಯ ಕಟ್ಟಕಡೆಗಳನ್ನು ನಿರ್ಮಿಸಿದವನೂ ಆಗಿದ್ದಾನೆ; ಆತನು ದಣಿದು ಬಳಲುವುದಿಲ್ಲ; ಆತನ ವಿವೇಕವು ಪರಿಶೋಧನೆಗೆ ಅಗಮ್ಯ. [29]ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ ನಿರ್ಬಲನಿಗೆ ಬಹುಬಲವನ್ನು ದಯಪಾಲಿಸುತ್ತಾನೆ. [30]ಯುವಕರೂ ದಣಿದು ಬಳಲುವರು, ತರುಣರೂ ಸೊರಗಿ ಮುಗ್ಗರಿಸುವರು. [31]ಯೆಹೋವನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು (ಏರುವರು); ಓಡಿದಣಿಯರು, ನಡೆದು ಬಳಲರು** (ಯೆಶಾಯ 40:28-31).

ನಾವು ದೇವರ ಪ್ರಸನ್ನತೆಯಲ್ಲಿ ಸಮಯ ಕಳೆಯುವಾಗ ನಮ್ಮ ಬಲವು ಹೊಸದಾಗುತ್ತದೆ. ನಮ್ಮ ಆಂತರ್ಯಕ್ಕೆ ಆತ್ಮಿಕ ಬಲವು ಕೊಡಲ್ಪಡುತ್ತದೆ. ನಮ್ಮ ಕನಸುಗಳ ಪುನರುಜ್ಜೀವಿತದೊಡನೆ, ನಮ್ಮ ಹೃದಯಗಳ ಪ್ರೇರಣೆಗಳೊಡನೆ ಮತ್ತು ನಮ್ಮ ಉತ್ಸಾಹವು ಪುನಃ ಹೊತ್ತಿಸಲ್ಪಡುವುದರೊಡನೆ ನಾವು ಮೇಲಕ್ಕೇರಬಹುದು. ನಾವು ದಣಿವಿಲ್ಲದೆ ಓಡುವಾಗ ಹೊಸ ಮಟ್ಟದ ತಾಳ್ಮೆಯನ್ನು ನಾವು ಗುರ್ತಿಸಬಹುದು. ನಾವು ಆತನ ಪ್ರಸನ್ನತೆಯಲ್ಲಿರುವುದರಿಂದ ದಣಿವಿಲ್ಲದೆ ಅನಾನುಕೂಲ ಪರಿಸ್ಥಿತಿಗಳನ್ನು ನಿಭಾಯಿಸಬಹುದು ಅಥವಾ ಒತ್ತಿ ಹಿಡಿಯಲು ಸಾಧ್ಯವಾಗುತ್ತದೆ.

## ನಾವು ದಣಿವಾರಿಸಲ್ಪಟ್ಟಿದ್ದೇವೆ (ವಿಶ್ರಾಂತಿ ಹೊಂದಿದ್ದೇವೆ)

**ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ.....** (ಅಪೊಸ್ತಲರ ಕೃತ್ಯಗಳು 3:19).

ವಿಶ್ರಾಂತಿ ಕಾಲಗಳು ಅಥವಾ ಚೈತನ್ಯದಾಯಕ ಸಮಯಗಳು ಕರ್ತನ ಪ್ರಸನ್ನತೆಯಿಂದ ಬರುತ್ತವೆ. ''ಕಾಲಗಳು'' ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ ''ಕೈರೋಸ್'' (Kairos) ವಾಸ್ತವವಾಗಿ 'ಕಾಲೋಚಿತ ಸಮಯ ಅಥವಾ ಸಮಯಾನುಕೂಲಕಾಲ', 'ಋತು' ಎಂಬುದಾಗಿ ಅರ್ಥ. 'ದಣಿವಾರಿಸುವುದು' ಅಥವಾ 'ಚೈತನ್ಯದಾಯಕ' ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ ''ಉಸಿರನ್ನು ಸುಧಾರಿಸು'' ''ಒಂದು ಉಜ್ಜೀವನ'', ''ಕರ್ತನ ಸನ್ನಿಧಾನದಿಂದ'' ಮತ್ತು ವಾಸ್ತವವಾಗಿ ಗ್ರೀಕ್ ಭಾಷೆಯಲ್ಲಿ ''ಕರ್ತನ ಮುಖಭಾವದಿಂದ'' ಎಂಬುದಾಗಿ ವ್ಯಾಖ್ಯಾನಿಸಬಹುದು.

ನಾವು ಕರ್ತನೆಡೆಗೆ ದೃಷ್ಟಿಸಿ ಆತನ ಮುಖವನ್ನು ನೋಡಲು, ನಾವು ಉಜ್ಜೀವನದ ಋತುಗಳ ಮತ್ತು ಆತನು ನಮ್ಮ ಮೇಲೆ ಸುರಿಸುವ ಚೈತನ್ಯದಾಯಕ ಅಥವಾ

ತಂಪಾಗಿಸುವ ವೃಷ್ಟಿಯನ್ನು ಪಡೆದುಕೊಳ್ಳುವವರಾಗಿರುತ್ತೇವೆ. ನಾವು ಇದನ್ನು ವೈಯಕ್ತಿಕ ಮಟ್ಟ ಅಥವಾ ಸಾಮೂಹಿಕವಾಗಿ ಒಟ್ಟಾಗಿ ಆತನನ್ನು ಹುಡುಕುವಾಗ ಅನುಭವಿಸಬಹುದು.

## ಅದ್ಭುತಗಳು ಸಂಭವಿಸುತ್ತವೆ

**ಆತನು ನಿಮ್ಮ ಪಿತೃಗಳನ್ನು ಪ್ರೀತಿಸಿ ಅವರ ತರುವಾಯ ಅವರ ಸಂತತಿಯವರಾದ ನಿಮ್ಮನ್ನೂ ಆದುಕೊಂಡು ಈಗ ನಿಮ್ಮ ಅನುಭವಕ್ಕೆ ಬಂದ ಪ್ರಕಾರ ನಿಮಗಿಂತ ಮಹಾ ಬಲಿಷ್ಠವಾದ ಜನಾಂಗಗಳನ್ನು ಹೊರಡಿಸಲೂ ಅವರ ದೇಶದಲ್ಲಿ ನಿಮ್ಮನ್ನು ಸೇರಿಸಿ ಆ ದೇಶವನ್ನು ನಿಮಗೇ ಸ್ವದೇಶವಾಗಿ ಕೊಡಲೂಬೇಕೆಂದು ಸಂಕಲ್ಪಿಸಿ ತಾನೇ ನಿಮ್ಮೊಂದಿಗಿದ್ದು ತನ್ನ ಅಪಾರ ಸಾಮರ್ಥ್ಯದಿಂದ ನಿಮ್ಮನ್ನು ಐಗುಪ್ತದೇಶದೊಳಗಿಂದ ಬರಮಾಡಿದನಲ್ಲಾ** (ಧರ್ಮೋಪದೇಶಕಾಂಡ 4:37).

ದೇವರ ಪ್ರಸನ್ನತೆಯು, ಆತನ ಪ್ರಬಲ ಬಲದ ಸ್ಥಳವೂ ಸಹ ಆಗಿದೆ. ನಾವು ಆತನ ಪ್ರಸನ್ನತೆಯಲ್ಲಿರುವಾಗ, ಆತನ ಬಲಿಷ್ಟ ಬಲದ ಸ್ಥಳದಲ್ಲೂ ಇರುವವರಾಗಿದ್ದೇವೆ. ನಾವು ಆತನ ಪ್ರಸನ್ನತೆಯಲ್ಲಿರುವಾಗ ವಿಮೋಚನೆ, ಅದ್ಭುತಗಳು, ಸೂಚಕಗಳು ಮತ್ತು ಮಹತ್ಕಾರ್ಯಗಳು ಸಂಭವಿಸುವುದನ್ನು ನಿರೀಕ್ಷಿಸಬಹುದು.

## ಶಾಶ್ವತ ಭಾಗ್ಯವಿದೆ

**ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ** (ಕೀರ್ತನೆಗಳು 16:11).

ನಾವು ಆತನ ಮುಖವನ್ನು ಹುಡುಕುವ ಮತ್ತು ಆತನ ಸೌಂದರ್ಯವನ್ನು ದಿಟ್ಟಿಸಿ ನೋಡುವಂತಹ ಸ್ಥಳದಲ್ಲಿ, ಪರಿಪೂರ್ಣ ಸಂತೋಷವಿರುತ್ತದೆ! ಕರ್ತನ ಬಲಗೈ ಗೌರವ ಮತ್ತು ಬಲದ ಸ್ಥಳವಾಗಿರುತ್ತದೆ (ವಿಮೋಚನಕಾಂಡ 15:6; ಧರ್ಮೋಪದೇಶಕಾಂಡ 33:2; ಕೀರ್ತನೆಗಳು 20:6; 110:1; 118:15,16; ಯೆಶಾಯ 62:8; ಮಾರ್ಕ 16:19). ಕರ್ತನ ಬಲಗೈ ಬಿಡುಗಡೆ ತರುತ್ತದೆ, ಮಹೋನ್ನತ ಜಯಗಳನ್ನು ತರುತ್ತದೆ ಮತ್ತು ಮಹಾಬಲವನ್ನು ತೋರುತ್ತದೆ. ದೇವರ ಬಲಗೈಯಲ್ಲಿರುವ ಆನಂದವು (ಶಾಶ್ವತಭಾಗ್ಯವು) ಆತನ ಪ್ರಬಲ ಕಾರ್ಯಗಳು ಮತ್ತು ದೇವರು ತನ್ನ ಜನರಿಗಾಗಿ ಮಾಡುವ ಮತ್ತು ಕೊಡುವ ಸಮೃದ್ಧಿಕರ ಆಶೀರ್ವಾದಗಳಾಗಿವೆ.

**ಆಹಾ, ನೀನು ಆಕಾಶವನ್ನು ಸೀಳಿ ಇಳಿದು ಬರಬಾರದೇ! ನಿನ್ನ ದರ್ಶನವು ಉಂಟಾಗಿ ಪರ್ವತಗಳು ಅಲುಗಿದರೆ ಎಷ್ಟೋ ಒಳ್ಳೇದು! ಒಣಗಿಡಕ್ಕೆ ಹತ್ತುವ ಕಿಚ್ಚಿನ ಪ್ರಕಾರವೂ ನೀರನ್ನು ಕುದಿಸುವ**

**ಊರಿಯೋಪಾದಿಯಲ್ಲಿಯೂ (ನೀನು ಪ್ರತ್ಯಕ್ಷನಾಗಿ) ನಮ್ಮ ನಿರೀಕ್ಷೆಗೆ ಮೀರಿದ ಭಯಂಕರ ಕೃತ್ಯಗಳನ್ನು ನಡಿಸಿ ನಿನ್ನ ನಾಮ ಮಹತ್ತನ್ನು ನಿನ್ನ ಶತ್ರುಗಳಿಗೆ ತಿಳಿಯಪಡಿಸಿ ಜನಾಂಗಗಳನ್ನು ನಿನ್ನ ದರ್ಶನದಿಂದ ನಡುಗಿಸಬಾರದೇ! ಹೌದು, ನೀನು ಇಳಿದು ಬಂದು ಪರ್ವತಗಳು ನಿನ್ನ ದರ್ಶನದಿಂದ ಅಲುಗಿದರೆ ಎಷ್ಟೋ ಲೇಸು! ನಿನ್ನನ್ನು ಬಿಟ್ಟರೆ ನಿರೀಕ್ಷಿಸುವವನಿಗೆ ಕಾರ್ಯಕರ್ತನಾದ ಯಾವ ದೇವರನ್ನೂ ಆದಿಯಿಂದ ಯಾರೂ ಕೇಳಲಿಲ್ಲ, ಯಾರ ಕಿವಿಗೂ ಬೀಳಲಿಲ್ಲ, ಯಾರ ಕಣ್ಣೂ ಕಾಣಲಿಲ್ಲ** (ಯೆಶಾಯ 64:1-4).

ದೇವರು ''ಇಳಿದು ಬಂದಾಗ'' ನಾವು ಎದುರು ನೋಡದಿರುವ ಮತ್ತು ನಿರೀಕ್ಷಿಸದಿರುವ ಭಯಂಕರ ಕೃತ್ಯಗಳನ್ನು ಆತನು ಮಾಡುತ್ತಾನೆ! ಯಾರ ಕಣ್ಣೂ ಕಾಣದಿರುವ, ಯಾರ ಕಿವಿಯೂ ಕೇಳದಿರುವ, ಆದಿಯಲ್ಲಿ ಯಾವ ಮನುಷ್ಯನೂ ವಿವೇಚಿಸಿರದ ಕಾರ್ಯಗಳು ಆತನ ಪ್ರಸನ್ನತೆಯಲ್ಲಿ ಸಂಭವಿಸಲು ಪ್ರಾರಂಭಗೊಳ್ಳುತ್ತವೆ.

## ದುಷ್ಟನನ್ನು ಅಧೀನಪಡಿಸಿಕೊಂಡಿದ್ದಾನೆ

**ಐಗುಪ್ತದ ವಿಷಯವಾದ ದೈವೋಕ್ತಿ. ಇಗೋ ಯೆಹೋವನು ವೇಗಮೇಘವಾಹನನಾಗಿ ಐಗುಪ್ತಕ್ಕೆ ಬರುವನು; ಆತನು ಸಮ್ಮುಖನಾದಾಗ ಐಗುಪ್ತದ ವಿಗ್ರಹಗಳು ನಡುಗುವವು, ಐಗುಪ್ತ್ಯರ ಹೃದಯವು ತಮ್ಮೊಳಗೆ ಕರಗಿ ನೀರಾಗುವುದು** (ಯೆಶಾಯ 19:1).

ಐಗುಪ್ತದ ವಿಗ್ರಹಗಳು ವಾಸ್ತವಿಕವಾಗಿ ಐಗುಪ್ತದ ಮೇಲಿನ ದುರಾತ್ಮಗಳ ಬಲವನ್ನು ಹೇಳುತ್ತವೆ. ಕರ್ತನ ಪ್ರಸನ್ನತೆಯಲ್ಲಿ ಇಂತಹ ಬಲಗಳು ನಿಂತುಕೊಳ್ಳುವುದಿಲ್ಲ. 1 ಸಮುವೇಲನು 5:2-4ರಲ್ಲಿ ದೇವರ ಪ್ರಸನ್ನತೆಯ ಸಂಕೇತವಾದ ದೇವರ ಮಂಜೂಷವನ್ನು ದಾಗೋನನ ವಿಗ್ರಹದ ಬಳಿಯಲ್ಲಿ ಇರಿಸಿದಾಗ ಏನು ಸಂಭವಿಸಿತು ಎಂಬುದು ಅತ್ಯುತ್ತಮವಾಗಿ ವರ್ಣಿಸಲ್ಪಟ್ಟಿದೆ. ದುರಾತ್ಮನ ಬಲಗಳು ದೇವರ ಪ್ರಬಲ ಪ್ರಸನ್ನತೆಯಲ್ಲಿ ಬಿದ್ದುಹೋಗುತ್ತವೆ!

**ನನ್ನ ಹಗೆಗಳು ನಿನ್ನ ಎದುರಿನಿಂದ ಹಿಂದಿರುಗಿ ಎಡವಿಬಿದ್ದು ಹಾಳಾದರಲ್ಲಾ** (ಕೀರ್ತನೆಗಳು 9:3).

**ನಿನ್ನಿಂದ ನನಗೆ ನ್ಯಾಯವಾದ ತೀರ್ಪು ಉಂಟಾಗಲಿ; ನೀನು ನೀತಿಗನುಸಾರವಾಗಿ ನೋಡುವವನಲ್ಲವೇ** (ಕೀರ್ತನೆಗಳು 17:2).

ದೇವರು, ನಮ್ಮ ಜೀವಿತಗಳಲ್ಲಿನ ಪ್ರತಿದಿನದ ಪರಿಸ್ಥಿತಿಗಳಿಗೆ ಹೆಜ್ಜೆಯಿಡಲು ಶಕ್ತನಾಗಿದ್ದಾನೆ ಮತ್ತು ನಮ್ಮನ್ನು ಹಗೆ ಮಾಡುವವರು, ನಮ್ಮ ಎದುರಿನಿಂದ

ಹಿಂದಿರುಗುವಂತೆ ಮಾಡುತ್ತಾನೆ. ಆತನು ನಮ್ಮ ಪರವಾಗಿ ಆತನ ಸಮರ್ಥನೆ (ಸತ್ಯಸ್ಥಾಪನೆ)ಯನ್ನು ಕಳುಹಿಸುತ್ತಾನೆ. ಇದು ಕರ್ತನ ಪ್ರಸನ್ನತೆಯಿಂದ ಬರುತ್ತದೆ. ನೀವು ಕರ್ತನ ಪ್ರಸನ್ನತೆಗೆ ಮುಂದೊತ್ತಿಕೊಂಡಿರುವಾಗ, ಲೆಕ್ಕಿಸುವ ದುಷ್ಟನು, ಹಿಂಸೆ, ದಬ್ಬಾಳಿಕೆ, ಹಾವಳಿ ಮತ್ತು ಅನ್ಯಾಯಗಳು ಹಿಂದಿರುಗಿ ಹೋಗುತ್ತವೆ.

## ನಾವು ಮಹೋನ್ನತನೊಡನೆ (ಪರಾತ್ಪರನೊಡನೆ) ವಾಸಿಸುತ್ತೇವೆ

**ಪರಾತ್ಪರನ ಮೊರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ನಾನು ಯೆಹೋವನಿಗೆ - ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸೆಯಿಟ್ಟಿರುವ ನನ್ನ ದೇವರು ಎಂದು ಹೇಳುವೆನು''** (ಕೀರ್ತನೆಗಳು 91:1,2).

**ಅಪಾಯಕಾಲದಲ್ಲಿ ಆತನು ನನ್ನನ್ನು ಗುಪ್ತ ಸ್ಥಳದಲ್ಲಿ ಅಡಗಿಸುವನು; ತನ್ನ ಗುಡಾರವೆಂಬ ಆಶ್ರಯಸ್ಥಾನದಲ್ಲಿ ನನ್ನನ್ನು ಭದ್ರಪಡಿಸುವನು; ಪರ್ವತಾಗ್ರದಲ್ಲಿ ನನ್ನನ್ನು ಸುರಕ್ಷಿತವಾಗಿ ಇರಿಸುವನು** (ಕೀರ್ತನೆಗಳು 27:5).

**ಮನುಷ್ಯರ ಒಳಸಂಚುಗಳಿಂದ ಹಾನಿ ಉಂಟಾಗದಂತೆ ಅವರನ್ನು ನಿನ್ನ ಸಾನಿಧ್ಯದಲ್ಲಿಯೇ ಮರೆ ಮಾಡುತ್ತೀ. ವಿವಾದಿಸುವ ನಾಲಿಗೆಗಳಿಂದ ಕೇಡಾಗದಂತೆ ಅವರನ್ನು ಗುಪ್ತ ಗೋಪ್ಯ ಸ್ಥಳದಲ್ಲಿ ಅಡಗಿಸುತ್ತೀ** (ಕೀರ್ತನೆಗಳು 31:20).

ಮಹೋನ್ನತನ (ಪರಾತ್ಪರನ) ರಹಸ್ಯ ಸ್ಥಳ ಆತನ ಗುಡಾರವೆಂಬ ಸ್ಥಾನ, ದೇವರ ಪ್ರಸನ್ನತೆಯ ಸ್ಥಾನವಾಗಿದೆ.

ಪರಾತ್ಪರನ ಮೊರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ಆತನ ಡೇರೆಯಲ್ಲಿರುವಂತೆ, ಆತನ ನಿವಾಸದಲ್ಲಿರುವಂತೆ, ನಿಮಗೆ ಯಾವುದೇ ಕೇಡು ಸಂಭವಿಸದೆ ಇರುವ ಬಂಡೆಯ ಮೇಲೆ ಇರುವಂತೆಯೇ. ಇದು ಆತನ ಆಶ್ರಯ ನೀಡುವ ಸಂರಕ್ಷಣೆ!

**9ಯೆಹೋವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ. 10ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು. ''ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು. 12ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು** (ಕೀರ್ತನೆಗಳು 91:9-12).

ನಾವು ರಹಸ್ಯ ಸ್ಥಳದಲ್ಲಿ ವಾಸಿಸುವಾಗ, ಮಹೋನ್ನತನ (ಪರಾತ್ಪರನ) ಸ್ಥಳವನ್ನು ನಾವು ವಾಸಿಸುವ ಸ್ಥಳವನ್ನಾಗಿ ಮಾಡಿಕೊಳ್ಳುತ್ತೇವೆ. ಮಹೋನ್ನತನಾದ (ಪರಾತ್ಪರ) ದೇವರಲ್ಲಿ ನಾವು ಜೀವಿಸುತ್ತೇವೆ. ನಾವು ಮಹೋನ್ನತ ಅಥವಾ ಪರಾತ್ಪರನಲ್ಲಿ ವಾಸಿಸುವಾಗ, ಎಲ್ಲಾ ದುರಾತ್ಮನ ದಬ್ಬಾಳಿಕೆಗಳಿಂದ ಬಹು ದೂರದಲ್ಲಿ, ಎಲ್ಲಾ ಪಿಡುಗುಗಳಿಂದ (ರೋಗ ಮತ್ತು ವ್ಯಾಧಿ) ಬಹು ದೂರದಲ್ಲಿ, ದೆವ್ವದ ಎಲ್ಲಾ ಪೀಡೆಯಿಂದ ಬಹುದೂರದಲ್ಲಿ ಇರುತ್ತೇವೆ. ನಾವು ಆಳ್ವಿಕೆ ಮಾಡುವ ಮತ್ತು ಅಧಿಪತ್ಯದಲ್ಲಿ ಮಹಾ ಅಧಿಕಾರವನ್ನು ಹೊಂದಿರುವ ಸ್ಥಳದಲ್ಲಿ ಇರುತ್ತೇವೆ. ನಾವು ಆತನ ದೇವದೂತರಿಂದ ರಕ್ಷಿಸಲ್ಪಡುತ್ತಿದ್ದೇವೆ. ನಾವು ಕರೆಯುವಾಗ ಆತನು ತಕ್ಷಣವಾಗಿ ಉತ್ತರಿಸುತ್ತಾನೆ (ಕೀರ್ತನೆಗಳು 91:14).

ನಾವು ಯಾವಾಗ ದೇವರ ಪ್ರಸನ್ನತೆಯಲ್ಲಿರುತ್ತೇವೋ, ಆಗ ಮಹೋನ್ನತನ (ಪರಾತ್ಪಾರನು) ನಮ್ಮ ವಾಸ ಸ್ಥಳವಾದ ರಹಸ್ಯ ಸ್ಥಳದಲ್ಲಿ ಇರುತ್ತೇವೆ.

## ನಾವು ಅಧಿಕಾರ ಹೊಂದಿದ್ದೇವೆ.

**[14]ಆತನು ಹನ್ನೆರಡು ಮಂದಿಯನ್ನು ಆರಿಸಿ ಅವರು ತನ್ನ ಸಂಗಡ ಇರಬೇಕೆಂತಲೂ ದೆವ್ವಗಳನ್ನು ಬಿಡಿಸುವ ಅಧಿಕಾರವುಳ್ಳವರಾಗಿ ಸುವಾರ್ತೆಯನ್ನು ಸಾರುವುದಕ್ಕೆ ತಾನು ಅವರನ್ನು ಕಳುಹಿಸುವೆನೆಂತಲೂ ಆ ಹನ್ನೆರಡು ಮಂದಿಯನ್ನು ಆರಿಸಿ ನೇಮಿಸಿದನು** (ಮಾರ್ಕ 3:14,15).

**ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವುದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯ ಪಟ್ಟರು** (ಅಪೊಸ್ತಲರ ಕೃತ್ಯಗಳು 4:13).

ನಾವು ಆತನ ಪ್ರಸನ್ನತೆಯಲ್ಲಿರುವಾಗ ಪೂರ್ಣ ಬದಲಾವಣೆ ಹೊಂದುತ್ತೇವೆ. ನಾವು ಭೂಮಿಯ ಮೇಲೆ ಆತನ ಚಿತ್ತವನ್ನು ಮಾಡಲು ಅಧಿಕಾರ ಹೊಂದುತ್ತೇವೆ. ನಾವು ದುರಾತ್ಮನ ಬಲಗಳ ಎದುರಿಸುವಿಕೆಗೆ ಭಯಪಡುವುದಿಲ್ಲ. ನಾವು ಆತನಲ್ಲಿ ಧೈರ್ಯವುಳ್ಳವರಾಗಿರುತ್ತೇವೆ.

## *ಆತನ ಪ್ರಸನ್ನತೆಯ ಸುರಿಸುವಿಕೆಯನ್ನು ಅಪೇಕ್ಷಿಸುವುದು*

ಆತನ ಪ್ರಸನ್ನತೆಯ ಸುರಿಸುವಿಕೆಗೆ ನೀವು ಹೇಗೆ ನಿಮ್ಮ ಅಪೇಕ್ಷೆಯನ್ನು ತೋರಿಸಬಹುದು?

## ಬಾಯಾರಿರುವುದು ಮತ್ತು ಕುಡಿಯುವುದು

**[37]ಆ ಜಾತ್ರೆಯ ಮಹಾ ದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. [38]ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. [39]ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮರಾದವರನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ** (ಯೋಹಾನ 7:37-39).

ಆತ್ಮನ ಕೆಲಸಗಳ ಮತ್ತು ಜೀವಕರವಾದ ನೀರಿನ ನದಿಗಳ ಹರಿಯುವಿಕೆಯ ಸಂಬಂಧದಲ್ಲಿ ನೀರಡಿಕೆಯಾದವರು ಬನ್ನಿರಿ, ಕುಡಿಯಿರಿ ಎಂಬುದಾಗಿ ಆಹ್ವಾನಿಸುವುದನ್ನು ಯೇಸುವು ಇಲ್ಲಿ ಮೊದಲೇ ಜೋಡಿಸಿದನು. ಆದುದರಿಂದ ಕರ್ತನಿಂದ ನಮ್ಮ ಬಾಯಾರಿಕೆ ಮತ್ತು ಕುಡಿಯುವಿಕೆಗೆ ರುಚಿಕರವಾದ ನೀರಿನ ಹೊಳೆಗಳು ಹರಿಯುವುದನ್ನು ಹೊಂದುವುದರ ನಡುವೆ ಅನುರೂಪತೆಯಿದೆ.

ಬಾಯಾರಿರುವುದರಿಂದ ಮತ್ತು ಕುಡಿಯಲು ಬರುವುದರಿಂದ ಆತನ ಪ್ರಸನ್ನತೆಯ ಸುರಿಸುವಿಕೆಯ ಅಥವಾ ತುಂಬಿ ಹೊರ ಹರಿಯುವಿಕೆಯ ನಮ್ಮ ಅಪೇಕ್ಷೆಯನ್ನು ನಾವು ವ್ಯಕ್ತ ಪಡಿಸುತ್ತೇವೆ. ನಾವು ಆತನು ಮತ್ತು ಆತನ ಆತ್ಮನು ಹೆಚ್ಚಾಗಿ ಬೇಕೆಂಬುದಾಗಿ ದಾಹ ಹೊಂದೋಣ. ನಾವು ಆಳವಾಗಿ ಕುಡಿಯೋಣ. ''ಕುಡಿಯುವುದು'' ಆತನ ಪ್ರಸನ್ನತೆಯನ್ನು ಮತ್ತು ನಮ್ಮ ಜೀವಿತಗಳಿಗೆ ಆತನು ಏನಾಗಿದ್ದೇನೆ ಎಂಬುದನ್ನು ಮತ್ತು ಆತನನ್ನು ಅಧಿಕವಾಗಿ ಪಡೆಯುವುದೇ ಆಗಿದೆ.

## ಕಾಯುವುದು ಮತ್ತು ನೆನೆಯುವುದು (ತೊಯಿಸುವುದು)

ಸತ್ಯವೇದವು ನಮಗೆ ''ಕರ್ತನಿಗಾಗಿ ಕಾದುಕೊಂಡಿರಿ'' ಎಂಬುದಾಗಿ ಹೇಳುತ್ತದೆ. ಸತ್ಯವೇದದ, ಕೀರ್ತನೆಗಳ ಪುಸ್ತಕದಲ್ಲಿ ''ಸೆಲಾ'' ಎಂಬ ಪದವನ್ನು 70 ಸಾರಿ ಉಪಯೋಗಿಸಲಾಗಿದೆ. ಅದರ ಸಾಮಾನ್ಯ ಅರ್ಥ 'ನಿಲ್ಲಿಸು' ಅಥವಾ ವಿರಾಮ ಎಂಬುದಾಗಿದೆ. ಎಲ್ಲಾ ಸಂಗೀತಗಳು ನಿಲ್ಲಿಸಲ್ಪಡುತ್ತವೆ. ಇದು ನಿಲ್ಲಿಸಲು ಸಮಯ, ತಡೆಯುವ ಮತ್ತು ಶಾಂತವಾಗಿರುವ ಮತ್ತು ತಿಳಿಯುವ ಸಮಯವಾಗಿದೆ.

*ಟೋಡ್‌ಬೆಂಟ್ಲೇರವರು ಕರ್ತನ ಪ್ರಸನ್ನತೆಯಲ್ಲಿ ನೆನೆಯುವುದು ಮತ್ತು ಕಾಯುವುದರ ಕುರಿತು ಹಂಚಿಕೊಳ್ಳುವುದು ನನಗೆ ಬಹಳ ಇಷ್ಟವಾಯಿತು.*

*''ಇಂದು ನಮ್ಮ ಸೇವೆ ಏನಿದೆಯೋ, ಅದು ನಾನು ಸರ್ವಶಕ್ತನಾದ ದೇವರ ಪ್ರಸನ್ನತೆಯಲ್ಲಿ ನೆನೆಯುವುದರಲ್ಲಿ ಕಳೆದ ಮೂರು ತಿಂಗಳ ಅವಧಿಗೆ ಸಂಬಂಧಿಸಿದ್ದಾಗಿದೆ. ಇದು ನಾನು ಕರೆಯುವ ಆತನ ಪ್ರಸನ್ನತೆಯ ಮಹಿಮೆಯ ದ್ರವ ಜೇನು. ಮೇಘದಲ್ಲಿ ನಾನು ದೇವರನ್ನು ಸಂಧಿಸಿದಾಗ ಅದು ನಂಬಿಕೆಗೆ ಮೀರಿದ ಸಂದರ್ಶನದ ಸಮಯವಾಗಿತ್ತು. ಸುಮಾರು 3 ತಿಂಗಳು ಪ್ರತಿದಿನ ನಾಲ್ಕರಿಂದ ಹನ್ನೆರಡು ಗಂಟೆಗಳ ನನ್ನ ಪ್ರಾರ್ಥನೆಯ ಜೀವಿತದ ಮೇಲೆ ಕೃಪೆಯಿದ್ದಿತು. ನಾನು ಆತನ ಪ್ರಸನ್ನತೆಯಲ್ಲಿ ಶಾಂತವಾಗಿ, ಒರಗಿಕೊಂಡಿರುವುದನ್ನೇ ಮಾಡುತ್ತಿದ್ದೆನು. ನಾನು ಇದನ್ನು ನೆನೆಯುವುದು, ತೋಯಿಸುವುದು ಎಂಬುದಾಗಿ ಕರೆದೆನು. ನಾನು ಮಾಡುತ್ತಿದ್ದುದೇನೆಂದರೆ, ಪ್ರತಿದಿನದ ಜೀವಿತದ ಗಲಿಬಿಲಿಯಿಂದ ನನ್ನನ್ನು ನಾನೇ ದೂರ ತೊಡಗಿಸಿಕೊಂಡಿದ್ದೆನು ಮತ್ತು ದೇವರನ್ನು ಹುಡುಕುತ್ತಿದ್ದೆನು. ನನಗೆ ಬೇಕಾದದ್ದು ಅದಲ್ಲ ದೇವರ ಬಲವು ನನ್ನಲ್ಲಿ ಉಜ್ಜೀವನವನ್ನು ತರಲಿ ಎಂಬುದನ್ನು ಒತ್ತುಕೊಟ್ಟು, ಹಸಿವೆ (ಬಯಕೆ) ಯಿಂದ ಪ್ರಾರ್ಥಿಸಲು ನಾನು ಪ್ರಾರಂಭಿಸಿದೆನು. ನಾನು ''ಪವಿತ್ರಾತ್ಮನೇ ದಯವಿಟ್ಟು ಬಾ ದೇವರೇ, ನೀನು ಹೇಳಿದ್ದಿ ನೀನು ನನ್ನ ಸಮೀಪಕ್ಕೆ ಬಂದರೆ ನಾನು ನಿನ್ನ ಸಮೀಪಕ್ಕೆ ಬರುತ್ತೇನೆ, ನೀನು ನನ್ನನ್ನು ಪೂರ್ಣ ಹೃದಯದಿಂದ ಹುಡುಕಿದರೆ ನನ್ನನ್ನು ಕಂಡುಕೊಳ್ಳುವಿ ಎಂದು ಹೇಳಿದ್ದಿ. ದೇವರೇ ನಾನು ಜೋರಾಗಿ ಆಕ್ರಮಣದಿಂದ ಒತ್ತಾಯ ಪಡಿಸುತ್ತಿದ್ದೇನೆ. ನೀನು ಹಾಗೇ ಹೋಗಲು ನಾನು ಬಿಡುವುದಿಲ್ಲ'' ಎಂಬುದಾಗಿ ಹೇಳುತ್ತಲೇ ಇದ್ದೆನು. ಇದು ದೇವರ ಪ್ರಸನ್ನತೆಯ ಮೂಲತತ್ವದ ಬೆನ್ನಟ್ಟುವಿಕೆಯು, ಕೂಗಿಕೊಳ್ಳುವಿಕೆಯು, ಹುಡುಕುವುದು ಆಗಿತ್ತು. ನಾನು ಕರ್ತನನ್ನು ತೀವ್ರತೆಯಿಂದ ಹತಾಶೆಯಿಂದ ಹುಡುಕುವವನಾಗಿದ್ದೆನು ಮತ್ತು ಆತನ ಪ್ರಭಾವವನ್ನು ನಾನು ಹಿಂಬಾಲಿಸುತ್ತಿದ್ದೆನು. ಇದು ಒಂದು ಪವಿತ್ರ ಹಸಿವಿನ ಬಯಕೆಯ ಸಮಯವಾಗಿತ್ತು, ತೀವ್ರವಾದ ತವಕದ ಸಮಯವು ಆಗಿತ್ತು ವ್ಯಕ್ತಿಗತವಾಗಿ ನನ್ನದು ಆತನಿಗಾಗಿದ್ದ ಪವಿತ್ರ ತೀವ್ರ ಹತಾಶೆಯಾಗಿತ್ತು ಮತ್ತು ನಾನು ಮೊದಲು ಹೊಂದಿರದಂತಹ ರೀತಿಯಲ್ಲಿ ಆತನ ಮಹಿಮೆಯಲ್ಲಿ ಬಹಳವಾಗಿ ಆಳವಾಗಿರಬೇಕೆಂಬುದಾಗಿ ನಾನು ನಿಶ್ಚಯಿಸಿ ಕೊಂಡೆನು. ನಾನು ತಿಳಿಯದೇ ಇದ್ದಂತಹ ರೀತಿಯಲ್ಲಿ ದೇವರ ಪ್ರಸನ್ನತೆಯನ್ನು ಅನುಭವಿಸಲು ಬಯಸಿದೆನು ಮತ್ತು ನಾನು*

*ಹಿಂದೆ ಹೊಂದಿರದಂತಹ ಬೇರೆ ಯಾವುದೇ ರೀತಿಯಲ್ಲಿ ನಾನು ಆತನೊಡನೆ ಸಂದರ್ಶನ ಹೊಂದಬೇಕೆಂಬುದಾಗಿ ನನ್ನ ಹೃದಯದಲ್ಲಿ ಉದ್ದೇಶ ಹೊಂದಿದ್ದೆನು. ನಾನು ಮಾಡಬೇಕಾದುದೆಲ್ಲವನ್ನು ಮಾಡಿದೆನು ತಾಸುಗಟ್ಟಲೇ ಅನ್ಯಭಾಷೆಯಲ್ಲಿ ಪ್ರಾರ್ಥನೆ ಮಾಡಿದೆನು. ನಾನು ಮನಸ್ಸಿನಲ್ಲಿ ಕಲ್ಪಿಸಿದ್ದನ್ನು ಪ್ರಾರ್ಥನೆಮಾಡಿದೆ! ಸ್ತೋತ್ರದೊಡನೆ, ಆರಾಧನೆ, ಮಧ್ಯಸ್ಥಿಕೆ, ವಿಜ್ಞಾಪನೆಯೊಡನೆ ನನ್ನ ಬಿನ್ನಹಗಳನ್ನು ದೇವರು ತಿಳಿಯುವಂತೆ ಮಾಡಿದೆನು. ನಾನು ಒಂದು ಗಂಟೆ ಪ್ರಾರ್ಥಿಸಬೇಕೆಂಬುದಾಗಿ ತೀರ್ಮಾನಿಸಿಕೊಂಡಾಗ, ಒಂದು ಗಂಟೆ ಪ್ರಾರ್ಥಿಸಿದೆನು ಮತ್ತು ನಾನು ಗಟ್ಟಿಯಾದ ಸ್ವರದಿಂದ ಪ್ರಾರ್ಥಿಸಿದೆನು. ನಾನು ಅದರೊಳಗೆ ಮುಂದೊತ್ತುದ್ದನು ಮತ್ತು ನಾನು ಭೇದಿಸುವುದನ್ನುಅಪೇಕ್ಷಿಸಿದೆನು. ನನಗೆ ದೇವರು ಬೇಕಾಗಿದ್ದನು ಮತ್ತು ಆತನ ಪ್ರಸನ್ನತೆಯನ್ನು ವಿವೇಚಿಸುವುದು ನನಗೆ ಗೊತ್ತಿತ್ತು, ಆದರೆ ನಾನು ಇದ್ದಂತಹದರಲ್ಲಿ ನನಗೆ ತೃಪ್ತಿಯೇ ಇರಲಿಲ್ಲ. ನಾನು ನೋಡಿದ್ದುದರೊಳಗೆ ನಾನು ತೃಪ್ತಿಯಾಗಿರಲಿಲ್ಲ ''ಕರ್ತನೇ, ನನಗೆ ಇನ್ನೂ ಹೆಚ್ಚಾಗಿ ಬೇಕು'' ಎಂಬುದಾಗಿ ನಾನು ಹೇಳಿದೆ ಮತ್ತು ನಾನು ಒತ್ತಾಯಪಡಿಸಿದೆ. ನಾನು ಹೋರಾಡುವ ಸ್ಥಳದ ಸಮೀಪದಲ್ಲಿದ್ದೆನು.*

*ನೆನೆಯುವುದು (ತೊಯಿಸುವುದು) ಮುಖ್ಯವಾಗಿ, ನಿಶ್ಯಬ್ದವಾಗಿರುವುದು ಕೇಳಿಸಿಕೊಳ್ಳುವುದು ಮತ್ತು ಕಾದುಕೊಂಡಿರುವುದು ಆಗಿದೆ*

*ಪವಿತ್ರಾತ್ಮನ ಪ್ರಸನ್ನತೆಯಲ್ಲಿ ನೆನೆಯುವುದು (ತೊಯಿಸುವುದು) ಮತ್ತು ಹೀರುವುದು ಇವುಗಳ ನಡುವೆ ಸಮಾನತೆ ಇದೆ. ಪವಿತ್ರಾತ್ಮನ ಸವಿಯನ್ನು ಹೇಗೆ ಹೀರುವುದು ಎಂಬುದನ್ನು ನಾವು ಕಲಿತುಕೊಳ್ಳೋಣ. ಇದರ ಅರ್ಥ, 'ಸ್ವ' ಬಗ್ಗೆ ಆಲೋಚಿಸದೇ ಆತನ ಪ್ರಸನ್ನತೆಯಲ್ಲಿರುವುದು, ಆತನ ಪ್ರಭಾವದಲ್ಲಿ ವಿಶ್ರಾಂತಿ ಪಡೆಯುತ್ತಿರುವುದು ಮತ್ತು ಆತನನ್ನೇ ಅನುಜ್ಞಾಪಿಸುವುದು! ನಮ್ಮನ್ನು ಉಪ್ಪಿನಕಾಯಿಯಾಗಿಸುವುದು!*

*ದೈವಿಕ ಉಪ್ಪಿನಕಾಯಿಯಾಗಲು ಸಮಯ ತೆಗೆದುಕೊಳ್ಳುತ್ತದೆ, ಪ್ರಾಯಶಃ ವಾರಗಟ್ಟಲೇ ಇರಬಹುದು ನಾವು ನಿಜವಾಗಿ ಮೃದುವಾಗುವ ಮೊದಲು ದೀರ್ಘಕಾಲ ನೆನೆ (ತೊಯ್ದು) ಹಾಕಲ್ಪಡಬೇಕು. (ನೆನೆಯುವುದು ಭಾಗ 1 ಉಜ್ಜೀವನಕಾರ ಟೋಡ್ ಬೆಂಟ್ಲೀ, 2006)*

## ಆತನ ಪ್ರಸನ್ನತೆಯಲ್ಲಿ ಸಮಯ ಕಳೆಯೋಣ!

### ಆತನ ಪ್ರಸನ್ನತೆಯಲ್ಲಿ

* ನಾವು ಬದಲಾವಣೆ ಹೊಂದುತ್ತೇವೆ
* ನಮ್ಮ ಬಲದಲ್ಲಿ ನಾವು ನವಿಕೃತಗೊಳ್ಳುತ್ತೇವೆ
* ನಾವು ವಿಶ್ರಾಂತಿ ಹೊಂದುತ್ತೇವೆ.
* ಅದ್ಭುತಗಳು ಸಂಭವಿಸುತ್ತವೆ
* ಸದಾ ಆನಂದವಿರುತ್ತದೆ
* ದುಷ್ಟನನ್ನು ಅಧೀನ ಪಡಿಸಿಕೊಳ್ಳುತ್ತೇವೆ
* ಪರಾತ್ಪರನೊಡನೆ ನಾವು ವಾಸಿಸುತ್ತೇವೆ.
* ನಾವು ಅಧಿಕಾರ ಹೊಂದುತ್ತೇವೆ.

# 3

# ಆತನ ಪ್ರಸನ್ನತೆಯ ಸ್ಪಷ್ಟದ ತೋರ್ಪಡಿಸುವಿಕೆಗಳು

ದೇವರಿಗಾಗಿ ಹಾತೊರೆಯುವುದು, ದೇವರ ಅತಿ ಪ್ರಸನ್ನತೆಯ ಅನುಭವದಿಂದ ಪ್ರತಿಫಲಿಸಿರುತ್ತದೆ ಮತ್ತು ನಮ್ಮ ಜೀವಿತದಲ್ಲಿ ದೈವಿಕ ಪ್ರಕೃತ್ಯಾತೀತ ಕೆಲಸಗಳು ಜರಗುವ ಆತನೊಂದಿಗಿನ ಸಂದರ್ಶನದ ಫಲಿತಾಂಶದಲ್ಲಿ ಪರಿಣಮಿಸುತ್ತದೆ.

ಯಾವಾಗಲೂ ನಮ್ಮೊಂದಿಗಿರುವ ಅಗೋಚರವಾದ ದೇವರ ಪ್ರಸನ್ನತೆಯಿದೆ. ಆತನು ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಎಂದಿಗೂ ತೊರೆಯುವುದಿಲ್ಲ ಎಂದು ಸ್ವತಃ ಹೇಳಿದ್ದಾನೆ. ಆತನೇ ಎಲ್ಲಿ ಇಬ್ಬರಾಗಲಿ ಮೂವರಾಗಲಿ ನನ್ನ ಹೆಸರಿನಲ್ಲಿ ಸೇರಿ ಬರುತ್ತೀರೊ ಅಲ್ಲಿ ನಾನಿರುತ್ತೇನೆ ಎಂಬುದಾಗಿ ಹೇಳಿದ್ದಾನೆ. ಇದು ಒಂದು ಅಗೋಚರವಾದ ಮುಟ್ಟಲಾಗದ ದೇವರ ಪ್ರಸನ್ನತೆಯಾಗಿದೆ ನಾವು ಆತನ ಪ್ರಸನ್ನತೆಯನ್ನು ನೋಡಲಾಗದಿದ್ದಾಗ್ಯೂ ಆತನು ಅಲ್ಲಿ ಇದ್ದಾನೆ ಎಂಬುದು ನಮಗೆ ಗೊತ್ತಿದೆ.

ಹಾಗಿದ್ದರೂ ಹಲವು ಸಮಯಗಳಲ್ಲಿ ಪ್ರಸನ್ನತೆಯು ನಮ್ಮ ಆತ್ಮಿಕ ಮತ್ತು ಸ್ವಾಭಾವಿಕ ವಿವೇಚನೆಗಳೆರಡರಲ್ಲೂ ಸ್ಪರ್ಶವಾದಂತೆ ಅಥವಾ ಜ್ಞಾನೇಂದ್ರಿಯಗೋಚರವಾದಂತಾಗುತ್ತದೆ. ನಮ್ಮ ಆತ್ಮ, ಪ್ರಾಣ ಶರೀರಗಳನ್ನು ಸೃಷ್ಟಿಸಿದ ದೇವರು, ಆತನ ಪ್ರಸನ್ನತೆಯನ್ನು ನಮ್ಮ ಆತ್ಮದಲ್ಲಿ ಪ್ರಾಣದಲ್ಲಿ ಮತ್ತು ಶರೀರದಲ್ಲಿ ನಾವು ಗುರುತಿಸುವಂತೆ ತಾನೇ ಅನೇಕ ಮಾರ್ಗಗಳಲ್ಲಿ ತಿಳಿಸಲು ಶಕ್ತನಾಗಿದ್ದಾನೆ.

ನಾವು ಆತನ ಪ್ರಸನ್ನತೆಯ ಭಿನ್ನವಾದ ಸ್ಪರ್ಶದ ತೋರ್ಪಡಿಸುವಿಕೆಗಳ ಬಗ್ಗೆ ಜ್ಞಾನವುಳ್ಳವರಾಗಿರಬೇಕು. ಇದರಿಂದ ನಾವು ಅದನ್ನು ಗುರುತಿಸಬಹುದು ಮತ್ತು ವೈಯಕ್ತಿಕವಾಗಿ ಅಥವಾ ಸಾಂಘಿಕವಾಗಿ ನಮ್ಮ ಮೇಲಿನ ಆತನ ಚಲನೆಗೆ ಸರಿಯಾಗಿ ಪ್ರತಿಕ್ರಿಯೆ ತೋರಿಸಬಹುದು.

ದೇವರು ಆತ್ಮಿಕ ಆಧಿಪತ್ಯ (ಸಾಮ್ರಾಜ್ಯ)ದ ಕುರಿತು ನಮಗೆ ಬೋಧಿಸಲು ನಮ್ಮ ಭೌತಿಕ ಆಧಿಪತ್ಯದ ವಿಷಯಗಳನ್ನು ಉಪಯೋಗಿಸುತ್ತಾನೆ. ಆತನು ಪರಲೋಕದ

ಆಧಿಪತ್ಯದ ಕುರಿತು ನಮಗೆ ಬೋಧಿಸಲು ನಮಗೆ ಚಿರಪರಿಚಿತವಿರುವ ವಿಷಯಗಳೊಡನೆ ನಮ್ಮ ಭೂಮಿಯ ಆಧಿಪತ್ಯದಿಂದ ವಿಷಯಗಳನ್ನು ಸೆಳೆಯುತ್ತಾನೆ. (ಯೋಹಾನ 3:11,12).

ಇಲ್ಲಿ ದೇವರ ಪ್ರಸನ್ನತೆಯ ಕೆಲವು ಸ್ಪಷ್ಟವಾದ ತೋರ್ಪಡಿಸುವಿಕೆಯನ್ನು ಪಟ್ಟಿಮಾಡಲಾಗಿದೆ ಮತ್ತು ಇವುಗಳಲ್ಲಿ ಕೆಲವು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ, ಒಡಂಬಡಿಕೆಗಳನ್ನು ದಾಟುವಾಗ ದೇವರು ಬದಲಾಗಲಿಲ್ಲ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಹಳೇ ಒಡಂಬಡಿಕೆಯ ದೇವರೇ ಹೊಸ ಒಡಂಬಡಿಕೆಯ ದೇವರಾಗಿದ್ದಾನೆ. (ಮಲಾಕಿಯ 3:6) ಒಡಂಬಡಿಕೆಗಳು ಬದಲಾಗಿವೆ, ಆದರೆ ದೇವರು ಬದಲಾಗಿಲ್ಲ. ಆತನು ಹಿಂದೆ ಇದ್ದಂತೆ ಈಗ ಇರುವಾತನೂ, ಮತ್ತು ಯಾವಾಗಲೂ ಅದೇ ರೀತಿಯಾಗಿರುವಾತನೂ ಆಗಿದ್ದಾನೆ. ಆತನ ''ಮುಖವು'' ಬದಲಾಗಲಿಲ್ಲ, ಅಂದರೆ ಆತನ ಪ್ರಸನ್ನತೆಯು ಇನ್ನೂ ಅದೇ ರೀತಿಯಲ್ಲಿದೆ! ಹೀಗೆ ನಾವು ಹಳೇ ಮತ್ತು ಹೊಸ ಒಡಂಬಡಿಕೆಗಳಿಂದ ಅನೇಕ ಉಲ್ಲೇಖನಗಳನ್ನು ಪಟ್ಟಿ ಮಾಡುವ ವೇಳೆ ಇವೆಲ್ಲವೂ ನಮ್ಮ ಇಂದಿನ ಮತ್ತು ಈ ಸಮಯಕ್ಕೆ ತುಂಬಾ ಸಾಧ್ಯಕರವಾಗಿವೆ. ಹೀಗಾಗಿ ನಾವೆಲ್ಲರೂ ಮನತೆರೆದವರಾಗಿ, ನಮ್ಮ ಮಧ್ಯದಲ್ಲೂ ಜೀವಿತಗಳಲ್ಲೂ ಆತನ ಪ್ರಸನ್ನತೆಯ ವಿವಿಧ ಸ್ಪರ್ಷ ತೋರ್ಪಡಿಸುವಿಕೆಯನ್ನು ಆಹ್ವಾನಿಸೋಣ

## ಬೆಂಕಿ

ಪರಿಶುದ್ಧ ಗ್ರಂಥದಲ್ಲಿ ಅನೇಕ ಸ್ಥಳಗಳಲ್ಲಿ ದೇವರ ಪ್ರಸನ್ನತೆಯು ಬೆಂಕಿಗೆ ಹೋಲಿಕೆಯಾಗಿದೆ.

''**ಯಾಕೆಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ.**'' (ಇಬ್ರಿಯರಿಗೆ 12:29)

''**ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು.**'' (ವಿಮೋಚನ ಕಾಂಡ 24:17)

**ಪಂಚಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೇಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ**

**ಕೂತುಕೊಂಡವು. ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.** (ಅಪೊಸ್ತಲರ ಕೃತ್ಯಗಳು 2:1-4)

ಪವಿತ್ರಾತ್ಮನ ಪ್ರಸನ್ನತೆಯು ''ಉರಿಯಂತಿದ್ದ ನಾಲಿಗೆಗಳಂತೆ'' ಜನರ ಮೇಲೆ ಇಳಿಯುವ ಮೂಲಕವಾಗಿ ತೋರ್ಪಡಿಸಲ್ಪಟ್ಟಿತ್ತು.

## ಬೆಳಕು/ಪ್ರಕಾಶ/ತೇಜಸ್ಸು

**ಬೆಳಕನ್ನು ವಸ್ತ್ರದಂತೆ ಹೊದ್ದುಕೊಂಡಿದ್ದೀ: ಆಕಾಶವನ್ನು ಗುಡಾರದಂತೆ ಎತ್ತಿ ಹರಡಿದ್ದೀ.''** (ಕೀರ್ತನೆಗಳು 104:2)

**ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆ ಯಾವುದೆಂದರೆ ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬುದೇ** (1 ಯೋಹಾನ 1:5)

## ಮೇಘ

ಪರಿಶುದ್ಧ ಗ್ರಂಥದಲ್ಲಿ ಸುಮಾರು 80 ವ್ಯಾಖ್ಯಾನಗಳಲ್ಲಿ ದೇವರ ಪ್ರಸನ್ನತೆಯು ಮೇಘದಂತೆ ಬಂದಿರುವುದನ್ನು ನೋಡುತ್ತೇನೆ. ನಾವು ಇಲ್ಲಿ ಕೆಲವನ್ನು ಪಟ್ಟಿ ಮಾಡಿದ್ದೇವೆ.

**ಆರೋನನು ಇಸ್ರಾಯೇಲ್ಯರ ಸಮೂಹಕ್ಕೆಲ್ಲಾ ಈ ಮಾತುಗಳನ್ನು ತಿಳಿಸುತ್ತಿರುವಾಗ ಅವರು ಅರಣ್ಯದ ಕಡೆಗೆ ನೋಡಲಾಗಿ ಮೇಘದಲ್ಲಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು.** (ವಿಮೋಚನಕಾಂಡ 16:10)

**ಯೆಹೋವನು ಮೋಶೆಗೆ - ಇಗೋ ನಾನು ನಿನ್ನ ಸಂಗಡ ಮಾತಾಡುವಾಗ ಜನರು ಯಾವಾಗಲೂ ನಿನ್ನನ್ನು ನಂಬುವಂತೆ ನಾನು ಕಾರ್ಮುಗಿಲಲ್ಲಿ ನಿನ್ನ ಬಳಿಗೆ ಬರುವೆನು ಎಂದು ಹೇಳಿದನು** (ವಿಮೋಚನಕಾಂಡ 19:9)

**ಮೋಶೆ ಬೆಟ್ಟವನ್ನು ಹತ್ತಿದಾಗ ಮೇಘವು ಅದನ್ನು ಮುಚ್ಚಿಕೊಂಡಿತು. ಯೆಹೋವನ ತೇಜಸ್ಸು ಸಿನಾಯಿ ಬೆಟ್ಟದ ಮೇಲೆ ನಿಂತಿತು, ಮತ್ತು ಆ ಮೇಘವು ಆರು ದಿನಗಳವರೆಗೂ ಬೆಟ್ಟವನ್ನು ಮುಚ್ಚಿಕೊಂಡಿತ್ತು. ಏಳನೆಯ ದಿನದಲ್ಲಿ ಯೆಹೋವನು ಮೇಘದೊಳಗಿನಿಂದ ಕೂಗಿ ಮೋಶೆಯನ್ನು ಕರೆದನು. ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು. ಮೋಶೆ ಆ ಮೇಘದೊಳಗೆ ಪ್ರವೇಶಿಸಿ ಬೆಟ್ಟವನ್ನೇರಿದನು. ಅವನು ಆ ಬೆಟ್ಟದಲ್ಲಿ ಹಗಲಿರುಳು ನಾಲ್ವತ್ತು ದಿವಸ ಇದ್ದನು.** (ವಿಮೋಚನಕಾಂಡ 24:15-18)

**ಆಗ ಯೆಹೋವನು ಮೇಘದಿಂದ ಆವರಿಸಲ್ಪಟ್ಟವನಾಗಿ ಇಳಿದು ಬಂದು ಅಲ್ಲಿ ಅವನ ಹತ್ತಿರ ನಿಂತು ಯೆಹೋವನೆಂಬ ನಾಮವನ್ನು ಪ್ರಕಟಿಸಿದನು** (ವಿಮೋಚನಕಾಂಡ 34:5)

**(ಮಂಜೂಷವನ್ನು ಒಳಗಿಟ್ಟ) ಯಾಜಕರು ದೇವಾಲಯದಿಂದ ಹೊರಗೆ ಬಂದ ಕೂಡಲೇ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವುದಕ್ಕಾಗಿ ತುತ್ತೂರಿ ಊದುವವರೂ, ಗಾಯನ ಮಾಡುವವರೂ ಅಲ್ಲಿ ನಿಂತಿದ್ದರೂ ತುತ್ತೂರಿ ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವುದು ಎಂದು ಕೃತಜ್ಞತಾಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದ ಮೇಘವು ದೇವಾಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.** (2 ಪೂರ್ವಕಾಲ ವೃತ್ತಾಂತ 5:13,14).

## ಹೊಗೆ

**ದೇವರ ತೇಜಸ್ಸಾನ್ನಿಧ್ಯದಿಂದಲೂ ಆತನ ಶಕ್ತಿಯಿಂದಲೂ ಉಂಟಾದ ಹೊಗೆಯಿಂದ ಪವಿತ್ರಸ್ಥಾನವು ತುಂಬಿದ ಕಾರಣ ಆ ಏಳುಮಂದಿ ದೇವದೂತರ ಕೈಯಲ್ಲಿದ್ದ ಏಳು ಉಪದ್ರವಗಳು ತೀರುವ ತನಕ ಆ ಪವಿತ್ರಸ್ಥಾನದೊಳಗೆ ಪ್ರವೇಶಿಸುವದಕ್ಕೆ ಯಾರಿಂದಲೂ ಆಗಲಿಲ್ಲ** (ಪ್ರಕಟನೆ 15:8)

## ಮಳೆ

**ಹುಲ್ಲು ಕೊಯಿದ ಮೇಹುಗಾಡಿನ ಮೇಲೆ ಸುರಿಯುವ ವೃಷ್ಟಿಯಂತೆಯೂ ಭೂಮಿಯನ್ನು ನೆನಸುವ ಹದಮಳೆಯಂತೆಯೂ ಅವನು ಇರಲಿ** (ಕೀರ್ತನೆಗಳು 72:6)

**ಯೆಹೋವನನ್ನು ತಿಳಿದುಕೊಳ್ಳೋಣ, ಹುಡುಕಿ ಹುಡುಕಿ ತಿಳಿದುಕೊಳ್ಳೋಣ ಆತನ ಆಗಮನವು ಉದಯದಂತೆ ನಿಶ್ಚಯ: ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪುಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಅಂದುಕೊಂಡು ನನ್ನನ್ನು ಮರೆಹೋಗುವರು)** (ಹೋಶೇಯ 6:3)

## ಗಾಳಿ

**ಆಗ ಬಿರುಗಾಳಿ ಬಿಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು.** (ಅಪೊಸ್ತಲರ ಕೃತ್ಯಗಳು 2:2)

## ಕತ್ತಲು

**ಆತನು ಆಕಾಶವನ್ನು ತಗ್ಗಿಸಿ ಇಳಿದು ಬಂದನು: ಆತನ ಪಾದಗಳ ಕೆಳಗೆ ಕಾರ್ಗತ್ತಲಿತ್ತು ಕತ್ತಲನ್ನು ಜಲಮಯವಾಗಿರವ ನೀಲ ಮೇಘಗಳನ್ನೂ ತನ್ನ ಸುತ್ತಲು ಗುಡಾರದಂತೆ ಕವಿಸಿಕೊಂಡನು** (2 ಸಮುವೇಲನು 22:10,12 ಕೀರ್ತನೆಗಳು 18:11)

**ತರುವಾಯ ಸೊಲೋಮೋನನು ''ಯೆಹೋವನೇ, ಕಾರ್ಗತ್ತಲಲ್ಲಿ ವಾಸಿಸುತ್ತೇನೆಂದು ಹೇಳಿದ್ದೀ:...''** (1 ಅರಸುಗಳು 8:12; 2 ಪೂರ್ವಕಾಲವೃತ್ತಾಂತ 6:1)

ಅಲ್ಲದೆ ಅನೇಕ ವ್ಯಾಖ್ಯಾನಗಳು ಸಹ ಇವೆ. ಇಲ್ಲಿ ಪಟ್ಟಿ ಮಾಡಿರುವವುಗಳಿಗೆ ಮಾತ್ರ ದೇವರು ಸೀಮಿತವಾಗಿಲ್ಲ, ಇಲ್ಲವೆ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವವುಗಳಿಗೆ ಕೂಡ ಸೀಮಿತವಲ್ಲ ದೇವರು ಆತನ ಪ್ರಸನ್ನತೆಯನ್ನು ನೂತನವಾಗಿ ಹೊಸ ಮಾರ್ಗಗಳಲ್ಲಿ ತೋರ್ಪಡಿಸಬಹುದು.

## ಕರ್ತನ ಪ್ರಸನ್ನತೆಗೆ ಮನುಷ್ಯರ ಪ್ರತಿಕ್ರಿಯೆಗಳು

ದೇವರ ಪ್ರಸನ್ನತೆಯನ್ನು ಸಂಧಿಸುವಾಗ ಮಾನವನ ಪ್ರತಿಕ್ರಿಯೆಗಳೇನಾಗಿರಬಹುದು? ಇವುಗಳಲ್ಲಿ ಕೆಲವನ್ನು ಮೊದಲೇ ಚರ್ಚಿಸಿದ್ದೇವೆ, ಮತ್ತು ಇಲ್ಲಿ ಕೆಲವು ಸೇರ್ಪಡೆಗೊಂಡ ಪ್ರತಿಕ್ರಿಯೆಗಳನ್ನು ಒದಗಿಸುತ್ತಿದ್ದೇವೆ.

- ಆಳವಾದ ಮನವರಿಕೆ
- ವಿವರಿಸಲಾಗದ ಶಾಂತಿ
- ತುಂಬಿಹರಿಯುವ ಸಂತೋಷ
- ದೈವಿಕ (ಪ್ರಕೃತ್ಯಾತೀತ) ಸ್ವಸ್ಥತೆಗಳು ಮತ್ತು ಅದ್ಭುತಗಳು
- ದೇವರ ಮಹಿಮೆಯ ಅಧೀನ ಪಡಿಸಿಕೊಳ್ಳುವ ಭಾರ
- ಸತ್ತವರಂತೆ ಬೋರಲು ಬೀಳುವುದು ಇದಕ್ಕೆ ಅನೇಕ ಉದಾಹರಣೆಗಳು ವ್ಯಾಖ್ಯಾನಿಸಲ್ಪಟ್ಟಿವೆ. ದಾನಿಯೇಲನು, ಯೆಹೆಜ್ಕೇಲನು, ರೋಮಾಯ ಸೈನಿಕರು ಸೌಲನು ಮತ್ತು ಯೋಹಾನನು ದೇವರ ಪ್ರಸನ್ನತೆಯಲ್ಲಿ ಬಲವಿಲ್ಲದವರಂತೆ ಬೋರಲು ಬಿದ್ದಿದ್ದರು.
- ನಡುಗುವುದು: ಕರ್ತನ ಪ್ರಸನ್ನತೆಯಲ್ಲಿ ಪರ್ವತಗಳು ಮೇಣದಂತೆ ಕರಗಿಹೋಗುವಂತೆ, ಮತ್ತು ಭೂಮಿಯು ನಡುಗುವಂತೆ (ಕೀರ್ತನೆಗಳು 97:5:114:7) ಆತನ ಪ್ರಸನ್ನತೆಯಲ್ಲಿ ಜನರು ನಡುಗುವುದು, ಬೀಳುವುದು ಕರಗಿ ಹೋಗುವುದಿಲ್ಲವೋ (ಯೆರೆಮಿಾಯ 5:20-22)
- ದೈಹಿಕ ಭಾವೋದ್ರೇಕಗಳು - ತಾಪ, ಪುಲಕಿತಗೊಳ್ಳುವುದು, ಬಲದ ಹರಿವು.

- ಗಾಢವಾದ ನಿದ್ರೆ: ದೇವರು ತನ್ನ ಪ್ರಸನ್ನತೆಯಲ್ಲಿ ಜನರನ್ನು ಅವರಿಂದ ವಿಶೇಷವಾದ ಕೆಲಸಗಳನ್ನು ಮಾಡಿ ಪಡೆಯಲು, ಗಾಢವಾದ ನಿದ್ರೆಯಲ್ಲಿ ಇರಿಸಿದ್ದದ್ದನ್ನು ಅನೇಕ ಸಮಯಗಳಲ್ಲಿ ನೋಡುತ್ತೇವೆ. ಅಂತಹವರಲ್ಲಿ ಆದಾಮನು (ಆದಿಕಾಂಡ 2:21) ಮತ್ತು ಅಬ್ರಹಾಂನು (ಆದಿಕಾಂಡ 15:12) ಇದ್ದಾರೆ.
- ಅಮಲೇರಿರುವುದು : ಆತ್ಮನ ಅಧೀನಪಡಿಸಿಕೊಳ್ಳುವಿಕೆಯ ಕಾರ್ಯದಲ್ಲಿ ಆಗ್ಗಾಗ್ಗೆ ವರ್ತನೆಯಲ್ಲಿ ''ಮತ್ತರಾದವರಂತೆ'' ಭಾಗಿಗಳಾಗುತ್ತೇವೆ. (ಅಪೊಸ್ತಲರ ಕೃತ್ಯಗಳು 2: 13-15, ಎಫೆಸದವರಿಗೆ 5:18).
- ದರ್ಶನಗಳು, ಪರವಶವಾಗುವುದು, ಸಂಧಿಸುವಿಕೆ.

## ಐತಿಹಾಸಿಕ ದಾಖಲೆ: ಜಾನ್ ವೆಸ್ಲಿ

ಜಾನ್ ವೆಸ್ಲಿ (1703-1791) ಇಂಗ್ಲೆಂಡ್ ಸಭೆಯ ಪಾದ್ರಿಯಾಗಿದ್ದರು ಮತ್ತು ಅವರ ಪತ್ರಿಕೆಗಳಲ್ಲಿ ಅನೇಕ ತೋರ್ಪಡಿಸುವಿಕೆಗಳ ಕುರಿತು ಉಲ್ಲೇಖಿಸಿದ್ದಾರೆ.

1739 ರಲ್ಲಿ ಚಾರ್ಲ್ಸ್ ವೆಸ್ಲಿ ಮತ್ತು ಜಾರ್ಜ್ ವೈಟ್ ಫೀಲ್ಡ್ ರವರುಗಳೊಂದಿಗೆ ಲಂಡನ್ ನ ಕೂಟದಲ್ಲಿ; *''ಬೆಳಿಗ್ಗೆ ಸುಮಾರು 3 ಗಂಟೆಯಲ್ಲಿ ನಾವು ತಕ್ಷಣವೇ ಪ್ರಾರ್ಥನೆಯಲ್ಲಿ ಮುಂದುವರೆದೆವು ದೇವರ ಬಲವು ನಮ್ಮ ಮೇಲೆ ಪ್ರಬಲವಾಗಿ ಬಂತು, ಅದು ಅತ್ಯಧಿಕ, ಅನೇಕರು ಅತೀವ ಸಂತೋಷದಿಂದ ಕಣ್ಣೀರು ಬಿಟ್ಟರು ಮತ್ತು ಅನೇಕರು ನೆಲದ ಮೇಲೆ ಬಿದ್ದರು ಸುಧಾರಿಸಿಕೊಂಡ ಕೂಡಲೇ, ಆತನ ಪ್ರಸನ್ನತೆಯ ಸೌರ್ವಭೌಮತ್ವದಲ್ಲಿ ದಿಗಿಲಿನಿಂದಲೂ ಸ್ವಲ್ಪ ಭಯಭರಿತರಾಗಿಯೂ ನಾವು ಒಂದೇ ಸ್ವರದಿಂದ ''ದೇವರೇ, ನಾವು ನಿನ್ನನ್ನು ಸ್ತುತಿಸುತ್ತೇವೆ ನೀನೇ ನಮ್ಮ ಕರ್ತನೆಂದು ಒಪ್ಪಿಕೊಳ್ಳುತ್ತೇವೆ''* ಎಂಬುದಾಗಿ ಕೂಗಿಕೊಂಡೆವು.

ಪದೇ ಪದೇ ಜರುಗಿದ ಘಟನೆಯೆಂದರೆ ವೆಸ್ಲಿಯವರ ಕೇಳುಗರು ಗಟ್ಟಿಯಾಗಿ ಅಳುತ್ತಿದ್ದರು ಅಥವಾ ಸತ್ತವರಂತೆ ಬೋರಲು ಬಿದ್ದಿರುತ್ತಿದ್ದರು.

ಬ್ರಿಸ್ಟಲ್ ನ ವೀವರ್ಸ್ ಹಾಲ್ ನಲ್ಲಿ ಪ್ರಸಂಗಿಸುವಾಗ; ಒಬ್ಬ ಯೌವನಸ್ಥನ ದೇಹವೆಲ್ಲಾ ಕೂಡಲೇ ಉಗ್ರ ಮಡುಕದಿಂದ ವ್ಯಾಪಿಸಿತು. ಮತ್ತು ಕೆಲವೇ ನಿಮಿಷಗಳಲ್ಲಿ ಅವನ ಹೃದಯದ ದುಃಖ ಅಧಿಕಗೊಂಡಿತ್ತು ನೆಲದ ಮೇಲೆ ಬೋರಲು ಬಿದ್ದನು.

ಮತ್ತೊಂದು ಸಂದರ್ಭದಲ್ಲಿ (ಏಪ್ರಿಲ್ 25ರಂದು ) ಅವರು ಪ್ರಸಂಗಿಸುವಾಗ: ತಕ್ಷಣವೇ ಒಬ್ಬನು, ಮತ್ತು ಮತ್ತೊಬ್ಬನು, ಮತ್ತು ಇನ್ನೊಬ್ಬನೂ ಭೂಮಿಗೆ ಬಿದ್ದು ಹೋದರು: ಅವರೆಲ್ಲರೂ ದಿಗ್ಭ್ರಾಂತರಂತೆ ಪ್ರತಿಯೊಂದು ಕಡೆಯಲ್ಲೂ ಬಿದ್ದರು.

ಅವರ ಪತ್ರಿಕೆಗಳಲ್ಲಿ ವಿವಿಧ ಸಂದರ್ಭಗಳಲ್ಲಿ ವ್ಯಾಖ್ಯಾನಿಸಿರುವ ಇತರ ವ್ಯಾಖ್ಯಾನಗಳು ಕೆಳಗಿನಂತಿವೆ.

*"ಕೆಲವರು ರಕ್ಷಿಸಲು ಶಕ್ತನಾದಾತನಿಗೆ" ಗಟ್ಟಿಯಾಗಿ ಕೂಗುತ್ತಾ ಇತರರು ಕಣ್ಣೀರನ್ನು ಸುರಿಸುತ್ತಾ ಮತ್ತು ಅನೇಕರು ನರಳಾಡುತ್ತಾ ಇರುವಾಗ ಅವರ ಮಧ್ಯದಲ್ಲಿ ನನ್ನ ಸ್ವರವು ಸಹ ಅಪರೂಪವಾಗಿ ಕೇಳಲ್ಪಟ್ಟಿತ್ತು.*

ನಾವು ಕೃತಜ್ಞಾತಾ ಸ್ತೋತ್ರದಿಂದ ಮೇಲೆದ್ದಾಗ ಮತ್ತೊಬ್ಬ ವ್ಯಕ್ತಿಯು ನಾಲ್ಕು ಅಥವಾ ಐದು ಹೆಜ್ಜೆಗಳು ತತ್ತರಿಸಿ ಕೆಳಗೆ ಉರುಳಿದನು.

*ಇಪ್ಪತ್ತಾರು ಜನರು ಪಾಪದ ಮನವರಿಕೆಯುಂಟಾಗಿ ಕೆಳಗೆ ಬಿದ್ದರು. ಅನೇಕರು ಕೆಳಗೆ ಮುಳುಗಿದರು ಮತ್ತು ಅವರೆಲ್ಲ ಬಲವಿಲ್ಲದಂತಾದರೂ, ಇತರರು ಅತೀವವಾಗಿ ನಡುಗಿದರು ಮತ್ತು ತೂಗಾಡಿದರು, ಮತ್ತೆ ಕೆಲವರು ಅವರ ದೇಹಗಳ ಪ್ರತಿಯೊಂದು ಭಾಗದಲ್ಲಿ ನಿರ್ಬಂಧ ಪಡಿಸುವ ಮಿಸುಕಾಟದಿಂದ ಹರಿಯಲಾರಂಬಿಸಿದರು.*

*ಮೇ 1740 ರಲ್ಲಿ, ವೆಸ್ಲಿಯವರು, ಅವರು ಮತ್ತು ಅವನ ಸಹೋದರನು ಒಟ್ಟಾಗಿ ಹಾಡಬೇಕೆಂದು ಎದ್ದಾಗ ಅವನು ಗಟ್ಟಿಯಾಗಿ ನಗಲು ಆರಂಭಿಸಿದನು, ನೀನು ಬುದ್ದಿಭ್ರಮಣೆಗೆ ಒಳಗಾಗಿದ್ದಿಯೋ ಎಂಬುದಾಗಿ ಆತನನ್ನು ಕೇಳಿದೆನು, ಮತ್ತು ತುಂಬಾ ಕೋಪಗೊಳ್ಳಲು ಪ್ರಾರಂಭಿಸಿದೆನು ಮತ್ತು ಇಷ್ಟರಲ್ಲಿ ಅವನು ಸಾಧ್ಯವಾದಷ್ಟು ಮಟ್ಟಿಗೆ ಗಟ್ಟಿಯಾಗಿ ನಗಲು ಪ್ರಾರಂಭಿಸಿದನು ಅಲ್ಲದೆ ನಾವು ಅವನನ್ನು ತಡೆಯಲಾರದೆ ಹೋದೆವು. ಆದಾಗ್ಯೂ ನಮ್ಮನ್ನು ನಾವೇ ತುಂಡುತುಂಡಾಗಿ ಹರಿದುಕೊಳ್ಳಲು ಸಿದ್ಧವಾಗಿದ್ದೆವು. ಆದರೆ ಮತ್ತೊಂದು ಸಾಲನ್ನು ಹಾಡದೇ ಹಿಂತುರಿಗಿ ಮನೆಗೆ ಹೋಗಲು ಒತ್ತಾಯ ಮಾಡಲ್ಪಟ್ಟರು ಎಂದು ವರದಿಮಾಡಿದ್ದಾರೆ.*

## ಐತಿಹಾಸಿಕ ದಾಖಲೆ : ಜೋನತಾನ್ ಎಡ್ವರ್ಡ್ಸ್

ಜೋನತಾನ ಎಡ್ವರ್ಡ್ಸ್ ರವರು ಅಮೆರಿಕಾದ ಇತಿಹಾಸದಲ್ಲಿನ ಶ್ರೇಷ್ಟ ದೈವಶಾಸ್ತ್ರಜ್ಞರು. 1740-1745 ರಲ್ಲಿನ ''ಮಹಾ ಎಬ್ಬಿಸುವಿಕೆ'' ಎಂಬ ಪ್ರಬಲ ಉಜ್ಜೀವನದ ಸಮಯದಲ್ಲಿ ಅದ್ಭುತವಾಗಿ ಉಪಯೋಗಿಸಲ್ಪಟ್ಟರು.

*''1740-1742 ನಾರ್ತ್‌ಂಫ್‌ಟನ್‌ನಲ್ಲಿನ ಧಾರ್ಮಿಕ ಉಜ್ಜೀವನದ ದಾಖಲೆ''ಯಲ್ಲಿ ಅವರು ''ಕೂಗಾಟ, ಮೂರ್ಛೆ ಹೋಗುವಿಕೆ, ಒದ್ದಾಡಿಸುವುದು ಮುಂತಾದವುಗಳನ್ನು ಸಂತೋಷ, ಶ್ಲಾಘನೆ, ಮತ್ತು ಶ್ರಮಗಳ ಜೊತೆಗೆ ಪದೇ ಪದೇ ನೋಡುವುದು ಮುಖ್ಯ ವಿಷಯಗಳಾಗಿದ್ದವು'' ಎಂಬುದಾಗಿ ಅವರು ಬರೆದಿದ್ದಾರೆ.*

18ನೇ ಶತಮಾನದ ಪ್ರಸಿದ್ಧ ಉಜ್ಜೀವನಕಾರರಾದ ಜೋನತಾನ್ ಎಡ್ವರ್ಡ್ಸ್ (''ಕೋಪಗೊಂಡ ದೇವರ ಕೈಗಳಲ್ಲಿರುವ ಪಾಪಿಗಳು'' ಎಂಬ ಪ್ರಖ್ಯಾತ ಸಂದೇಶದ ಸಂದೇಶಕಾರರು). ಮಹಾ ಮನವರಿಕೆ ಮತ್ತು ಮಹಾ ಸೋತ್ರ ಮತ್ತು ಸಂತೋಷವೆಂಬ ಯಥಾರ್ಥವಾದ ಉಜ್ಜೀವನದ ಎರಡು ಪ್ರಮುಖ ಲಕ್ಷಣಗಳನ್ನು ಗುರುತಿಸಿದ್ದಾರೆ. ಎಡ್ವರ್ಡ್ಸ್ ರವರು ತಾವೇ ಸ್ವತಹಃ ಗಮನಿಸಿರುವ ಮುಂದಿನ ಗುಣಲಕ್ಷಣಗಳು ಹೀಗಿವೆ: (ಅ) ''ದೇವರ ಪವಿತ್ರತೆ, ಮಹತ್ವತೆ, ಮತ್ತು ಘೋರತೆ ಸಾರ್ವಭೌಮತ್ವ (ಘನತೆ)ಗಳ ಅಸಾಧಾರಣ ವಿವೇಚನೆಗಳು ಕೆಲವು ಸಮಯಗಳಲ್ಲಿ ಪ್ರಾಣ ಮತ್ತು ಶರೀರಕ್ಕಿಂತ ಮಿತಿ ಮೀರಿರುತ್ತವೆ. ಮಾರ್ಮಿಕ ಪ್ರಜ್ಞೆ ದೇವರ ಎಲ್ಲವನ್ನು ನೋಡುವ ಕಣ್ಣುಗಳು ಹಲವು ಬಾರಿ ದೈಹಿಕ ಬಲವನ್ನು ಹೊರ ತೆಗೆದುಬಿಡುತ್ತವೆ; ಮತ್ತು ದೇವರ ಕೋಪದ ಅಪರಿಮಿತ ರೌದ್ರತೆಯ ಅಸಾಧಾರಣ ದೃಷ್ಟಿ, ಇಂತಹ ಕೋಪಕ್ಕೆ ಬಹಿರಂಗಗೊಂಡ ಪಾಪಿಗಳ ವಾಚ್ಯಾತೀತ ಪರಿತಾಮದ ಸಮೇತವಾಗಿರುತ್ತದೆ. (ಆ) ವಿಶೇಷವಾಗಿ ದೀನತೆಯಲ್ಲಿ ಅಧಿಕವಾಗಿ ಪರಿಪೂರ್ಣವಾಗಿರುವುದೇ ಮತ್ತು ಆರಾಧನೆ ಎಂಬ ಎರಡು ವಿಷಯಗಳಿಗೆ ಬಯಕೆಯುಳ್ಳವರಾಗಿರುವುದು, ಯೇಸುಕ್ರಿಸ್ತನಿಗೂ ದೇವರಿಗೂ ಸ್ತುತಿ ಸ್ತೋತ್ರಗಳನ್ನು ಹಾಡುವುದರಲ್ಲಿ ಮತ್ತು ಪ್ರಸಕ್ತ ಜೀವಿತದ ಹಂಬಲವು ದೇವರನ್ನು ಸ್ತುತಿಸಲು ಮುಂದುವರೆದ ಹಾಡು ಆಗಿರಲೆಂದು ಅದೇ ಮಹಾ ಸಂತುಷ್ಟಿಕರವಾದುದೆಂದು ಒಬ್ಬ ವ್ಯಕ್ತಿಯು ಮನದಟ್ಟು ಮಾಡಿಕೊಳ್ಳುತ್ತಾನೆ.

**ನಾವು ದೇವರ ಸ್ಪಷ್ಟವಾದ ಪ್ರಸನ್ನತೆಗೆ ಒಳಪಡುವಾಗ ಮಾರ್ಗದರ್ಶಕಗಳು:**

- ನಮ್ಮ ಮನೋಭಾವನೆಗಳನ್ನು ಸೃಷ್ಟಿಸಿದ ದೇವರಿಗೆ ಅಸಾಮಾನ್ಯ ಮಾರ್ಗಗಳಲ್ಲಿ ನಮ್ಮ ಮನೋಭಾವಗಳನ್ನು ಮುಟ್ಟುವ ಅಧಿಕಾರ ಇದೆ. ಆತನು ಅದನ್ನು ಮಾಡುವಾಗ ನಾವು ಆತನಿಗೆ ಒಳಪಡಬೇಕು
- ನಮ್ಮ ಶಾರೀರಿಕ ಇಂದ್ರಿಯ ಜ್ಞಾನವನ್ನು ಸೃಷ್ಟಿಸಿದ ದೇವರು, ಅಸಾಮಾನ್ಯ ಮಾರ್ಗದಲ್ಲಿ ನಮ್ಮ ಶಾರೀರಿಕ ಇಂದ್ರಿಯ ಜ್ಞಾನವನ್ನು ಮುಟ್ಟುವ ಅಧಿಕಾರ ಹೊಂದಿದ್ದಾನೆ. ಆತನು ಅದನ್ನು ಮಾಡುವಾಗ, ನಾವು ಆತನಿಗೆ ಒಳಪಡಬೇಕು.
- ದೇವರು ಅಸಾಮಾನ್ಯ ಮಾರ್ಗಗಳಲ್ಲಿ ನಮ್ಮ ಮನೋಭಾವಗಳನ್ನು ಅಥವಾ ಶಾರೀರಿಕ ಇಂದ್ರಿಯ ಜ್ಞಾನವನ್ನು ಮುಟ್ಟುವಂತದ್ದು ಉದ್ದೇಶ ಪೂರ್ವಕವಾಗಿರುತ್ತದೆ. ಆತನು ಇದನ್ನು ಮನರಂಜನೆಗಾಗಿ ಮಾಡುವುದಿಲ್ಲ ಇದು ಸಾಮಾನ್ಯವಾಗಿ ತನ್ನನ್ನು ಪ್ರಕಟಪಡಿಸಲು, ಗುಣಪಡಿಸಲು, ನಮ್ಮ ಹೃದಯಗಳನ್ನು ಬದಲಾಯಿಸಲು ಮುಂತಾದವುಗಳಿಗಾಗಿ ಅದನ್ನು ಅನುಭವಿಸುವುದಕ್ಕಿಂತ ಅಂತಹ ಉದ್ದೇಶವನ್ನು ಸಾಧಿಸುವುದು ಅತೀ ಪ್ರಾಮುಖ್ಯವಾದದು.
- ನಮ್ಮ ಧ್ಯೇಯವು ಆತನನ್ನು ಹುಡುಕುವುದಾಗಿದೆ - ಕೆಲವು ಅಸಾಧಾರಣ ಅನುಭವ ಅಥವಾ ತೋರ್ಪಡಿಸುವಿಕೆಗಳಲ್ಲ. ಆದಾಗ್ಯೂ ದೇವರು ನಮ್ಮನ್ನು ಅಸಾಮಾನ್ಯ ಮಾರ್ಗಗಳ ಮೂಲಕ ಮುಟ್ಟುವುದಾದರೆ, ನಮ್ಮ ಗರ್ವವನ್ನು ಬಿಟ್ಟುಬಿಡಬೇಕು ಮತ್ತು ಆರಾಧನೆ ಸಾಮೀಪ್ಯ ಮತ್ತು ಆತನು ಮಾಡುತ್ತಿರುವವುಗಳಿಗೆ ಒಳಪಡುವುದರಲ್ಲಿ ''ಗಂಭೀರ''ವಾಗಿರಬೇಕು.
- ಪ್ರತಿಯೊಂದು ಸಹ ದೇವರಿಗೆ ಒಳಪಡುವುದರೊಂದಿಗೆ ಮಾಡಬೇಕು ವೈಯಕ್ತಿಯ ಗಣನೆ ಅಥವಾ ಗುರುತಿಸುವಿಕೆಗಾಗಿ ಅಲ್ಲ.
- ಪ್ರತಿಯೊಂದು ಸಹ ಪೂಜ್ಯತೆಯೊಡನೆ , (ಭಯಭಕ್ತಿಯೊಡನೆ) ಮತ್ತು ದೇವರು ಯಾರಾಗಿದ್ದಾನೆಂಬುದನ್ನು ಗುರುತಿಸುವುದರೊಂದಿಗೆ ಮಾಡಲ್ಪಡಬೇಕು.
- ಪ್ರತಿಯೊಂದು ಸಹ ದೇವರನ್ನು ಮಹಿಮೆಪಡಿಸಲು ಮಾಡಲ್ಪಡಬೇಕು
- ಆತ್ಮ-ಸಂಯಮವನ್ನು ಅಭ್ಯಸಿಸಿರಿ.

ಅತಿ ವಿಪರೀತವಾದದ್ದು, ಅತಿರೇಕಗಳು, ಶಾರೀರಿಕ ತೋರ್ಪಡಿಸುವಿಕೆಗಳು, ಸ್ವಯಂ ಉತ್ಪತ್ತಿಯಾದ ಮನೋಭಾವಗಳ ಉತ್ಪ್ರೇಕ್ಷೆಗಳು, ನಿಜವಾಗಿಯೂ ಇವೆ. ಆದಾಗ್ಯೂ ಯಥಾರ್ಥವಾದದ್ದನ್ನು ಅಲ್ಲಗಳೆಯಲಾಗುವುದಿಲ್ಲ.

ಅನೇಕ ದೈವಶಾಸ್ತ್ರಜ್ಞರು ಮತ್ತು ಇತರರು ಆತನ ಪ್ರಸನ್ನತೆಯ ಸ್ಪಷ್ಟವಾದ ತೋರ್ಪಡಿಸುವಿಕೆಯಲ್ಲಿ ಸಂಭವಿಸುವ ಮಾನವನ ಅಸಾಮಾನ್ಯ ಪ್ರತಿಕ್ರಿಯೆಗಳ ಬಗ್ಗೆ ಪ್ರಶ್ನಿಸಿದ್ದಾರೆ. ಅನೇಕರು ಅವರ ವಿರೋಧಗಳನ್ನು ಬಾಯಿಂದ ಹೇಳಿದವರಾಗಿದ್ದಾರೆ. ನಮ್ಮ ಅಪರಿಮಿತ ಪ್ರಜ್ಞೆ ಮತ್ತು ವಿವೇಚನಾ ಶಕ್ತಿಗಳಿಗೆ ಅಪರಿಮಿತವಾದ ದೇವರನ್ನು ಕೂಡಿಸುವುದು ಕಠಿಣಕರವಾದುದು, ಸ್ವಾಭಾವಿಕ ಮನುಷ್ಯನು ದೇವರಾತ್ಮನ ವಿಷಯಗಳನ್ನು ಗ್ರಹಿಸಲಾರನು. (2 ಕೊರಿಂಥದವರಿಗೆ 2:14)

**ದೇವರ ಪ್ರಸನ್ನತೆಯ ಸ್ಪಷ್ಟವಾದ ತೋರ್ಪಡಿಸುವಿಕೆಗಳು**

* ಬೆಂಕಿ
* ಬೆಳಕು/ತೇಜಸ್ಸು
* ಮೋಡ/ಮೇಘ
* ಹೊಗೆ
* ಮಳೆ
* ಗಾಳಿ
* ಕತ್ತಲು

# 4

# ಆತನ ಪ್ರಸನ್ನತೆಯ ಬೆಂಕಿ

ದೇವರ ಪ್ರಸನ್ನತೆಯು ಬೆಂಕಿಗೆ ಹೋಲಿಕೆಯಾಗಿದೆ. ಬೆಂಕಿಯು ಮಾಡುವುದೇನು.

**ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ** (ಇಬ್ರಿಯರಿಗೆ 12:29)

**ಅಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಅವನಿಗೆ ಕಾಣಿಸಿಕೊಂಡನು ಹೇಗೆಂದರೆ ಅವನು ಒಂದು ಮುಳ್ಳಿನ ಪೊದೆಯನ್ನು ಕಂಡನು. ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರೂ ಅದು ಸುಟ್ಟು ಹೋಗದೆ ಇತ್ತು. ಆಗ ಮೋಶೆ - ನಾನು ದಾರಿಬಿಟ್ಟು ಈ ಆಶ್ಚರ್ಯವನ್ನು ನೋಡಿ ಪೊದೆಯು ಸುಟ್ಟು ಹೋಗದೆ ಇರುವುದಕ್ಕೆ ಕಾರಣವನ್ನು ತಿಳುಕೊಳ್ಳುವೆನು ಅಂದುಕೊಂಡನು ನೋಡುವುದಕ್ಕೆ ಅವನು ದಾರಿಬಿಟ್ಟುದ್ದನ್ನು ಯೆಹೋವನು ಕಂಡನು. ದೇವರು ಆ ಪೊದೆಯೊಳಗಿಂದ - ಮೋಶೆಯೇ, ಮೋಶೆಯೇ ಎಂದು ಕರೆದನು ಅದಕ್ಕವನು ಇಗೋ ಇದ್ದೇನೆ ಅಂದನು.** (ವಿಮೋಚನಕಾಂಡ 3:2-4)

**ಯೆಹೋವನು ಹಗಲು ಹೊತ್ತಿನಲ್ಲಿ ದಾರಿತೋರಿಸುವದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿವೇಳೆಯಲ್ಲಿ ಬೆಳಕು ಕೊಡುವದಕ್ಕೆ ಅಗ್ನಿಸ್ತಂಭದಲ್ಲಿಯೂ ಇದ್ದು ಅವರ ಮುಂಭಾಗದಲ್ಲಿ ಹೋದನು. ಈ ರೀತಿಯಲ್ಲಿ ಅವರು ಹಗಲಿರುಳು ಪ್ರಯಾಣ ಮಾಡಿದರು ಹಗಲಲ್ಲಿ ಮೇಘಸ್ತಂಭವೂ ರಾತ್ರಿಯಲ್ಲಿ ಅಗ್ನಿಸ್ತಂಭವೂ ಜನರ ಮುಂದೆ ತಪ್ಪದೆ ಕಾಣಿಸಿದವು.** (ವಿಮೋಚನಾ ಕಾಂಡ 13:21,22)

**ಯೆಹೋವನು ಬೆಂಕಿಯೊಳಗೆ ಸೀನಾಯಿಬೆಟ್ಟದ ಮೇಲಕ್ಕೆ ಇಳಿದು ಬಂದದ್ದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು ಆ ಹೊಗೆ ಆವಿಗೆಯ ಹೊಗೆಯಂತೆ ಏರಿತು: ಅದಲ್ಲದೆ ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು.** (ವಿಮೋಚನಕಾಂಡ 19:18)

**ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು.** (ವಿಮೋಚನಕಾಂಡ 24:17)

**ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕ ಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು** (ಅಪೊಸ್ತಲರ ಕೃತ್ಯಗಳು 2:1-4).

ಆತನ ಪ್ರಸನ್ನತೆಯ ಬೆಂಕಿಯನ್ನು ಅನೇಕ ವಿಧವಾದ ರೀತಿಗಳಲ್ಲಿ ನಾವು ಗುರುತಿಸಬಹುದು. ಕೆಲವೊಮ್ಮೆ ಇದು ಒಂದು ಆತ್ಮಿಕ ತಿಳಿಯುವಿಕೆ. ಅಂದರೆ ದೇವರು ನಮ್ಮ ಮಧ್ಯದಲ್ಲಿ ದಹಿಸುವ ಅಗ್ನಿಯಾಗಿದ್ದಾನೆಂಬುದಾಗಿ ಆತನ ಪ್ರಸನ್ನತೆಯ ಬೆಂಕಿಯೊಡನೆ ನಮ್ಮ ಮೇಲೆ ಆತನು ಚಲಿಸುವುದನ್ನು, ಆತನ ಪ್ರಸನ್ನತೆಯ ಬೆಂಕಿಯು ತರುವುದನ್ನು ಮಾಡಲು ಹುಡುಕುವುದೆಂಬುದಾಗಿ ನಮಗೆ ಗೊತ್ತಿದೆ, ಪಂಚಶತ್ತಾಮ ದಿನದಲ್ಲಿ ಉರಿಗಳಂತಿದ್ದ ನಾಲಿಗೆಗಳ ರೂಪದಲ್ಲಿ ಅಥವಾ ಉರಿಯುವ ಪೊದೆಯಲ್ಲಿ ಮೋಶೆಯು ಕಂಡ ಧಗಧಗಿಸುವ ಜ್ವಾಲೆಗಳ ರೂಪದಲ್ಲಿ ಜನರು ಬೆಂಕಿಯನ್ನು ನೋಡಿದ ಸಮಯಗಳಿವೆ. ಇದು ದೇವರು ಆತನ ಪ್ರಸನ್ನತೆಯ ಸ್ಪರ್ಶದ ಬೆಂಕಿಯು ನಮ್ಮ ಕಣ್ಣಿಗೆ ಕಾಣುವಂತೆ ಮಾಡುವವನಾಗಿದ್ದಾನೆ. ನಾವು ಅನುಭವ ಪಡೆಯುವ ತಾಪ, ಉಷ್ಣ, ಕೆಲವು ಬಾರಿ ಮೃದುವಾದ, ಕೆಲವು ಬಾರಿ, ನಾವು ಯೋಚಿಸುವ ಸಹಿಸಲು ಸಾಧ್ಯವಾದ ಅತಿ ಉಗ್ರವಾದ ಸಮಯಗಳುಂಟು. ಇದು ನಮ್ಮ ಭಾವನೆಗಳಿಗೆ ಆತನ ಪ್ರಸನ್ನತೆಯ ಬೆಂಕಿಯ ಸ್ಪಷ್ಟತೆಯಾಗುವಂತೆ ದೇವರು ಮಾಡುವುದಾಗಿದೆ.

## ಆತನ ಪ್ರಸನ್ನತೆಯ ಬೆಂಕಿಯು ಶುದ್ಧೀಕರಿಸುತ್ತದೆ

**ಬೆಂಕಿದಾಟಿಸಿ ಶುದ್ಧಮಾಡಬೇಕು** (ಅರಣ್ಯಕಾಂಡ 31:23 ಅ)..

**ಅನೇಕರು ತಮ್ಮನ್ನು ಶುದ್ಧೀಕರಿಸಿ ಶುಭ್ರವಾಡಿಕೊಂಡು, ಶೋಧಿತರಾಗುವರು** (ದಾನಿಯೇಲನು 12:10 ಅ).

**ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ, ಒಳ್ಳೇ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು" ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು** (ಮತ್ತಾಯ 3:10-12)

**ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು ಕಂಡೆನು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು. ಆತನ ಸುತ್ತ ಸೆರಾಫಿಯರು ಇದ್ದರು ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡಿಯುತ್ತಾ ನೆಲಸೋಕದೆ ನಿಂತಿದ್ದನು. ಆಗ ಒಬ್ಬನು ಮತ್ತೊಬ್ಬನಿಗೆ ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು, ಪರಿಶುದ್ಧನು,**

**ಪರಿಶುದ್ಧನು; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು ಕೂಗುವವನ ಶಬ್ದಕ್ಕೆ ದ್ವಾರದ ಅಸ್ತಿವಾರವು ಕದಲಿತು. ಧೂಮವು ಮಂದಿರದಲ್ಲೆಲ್ಲಾ ತುಂಬಿತು. ಆಗ ನಾನು - ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು; ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಯೆಹೋವನನ್ನು ಕಂಡವು ಎಂದು ಕೂಗಿಕೊಳ್ಳಲು ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ತಾನು ತಂಡಸದಲ್ಲಿ ತೆಗೆದ ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು ನನ್ನ ಬಳಿಗೆ ಹಾರಿ ಬಂದು ನನ್ನ ಬಾಯಿಗೆ ಮುಟ್ಟಿಸಿ ಇಗೋ ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು ಅಂದನು. ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ ನಾನಿದ್ದೇನೆ, ನನ್ನನ್ನು ಕಳುಹಿಸು ಅಂದೆನು ಅದಕ್ಕೆ ಆತನು ನೀನು ಈ ಜನರ ಬಳಿಗೆ ಹೋಗಿ ನೀವು ಕಿವಿಯಾರೆ ಕೇಳಿದರೂ ತಿಳಿಯಬಾರದು ಕಣ್ಣಾರೆ ಕಂಡರೂ ಗ್ರಹಿಸಬಾರದು ಎಂದು ತಿಳಿಸಿ** (ಯೆಶಾಯ 6:1-9).

ಆತನ ಪ್ರಸನ್ನತೆಯ ಬೆಂಕಿಯು ತೊಳೆಯಲ್ಪಡುವಿಕೆ ಮತ್ತು ಶುದ್ಧೀಕರಣವನ್ನು ತರುತ್ತದೆ. ಆತನ ಪ್ರಸನ್ನತೆಯ ಬೆಂಕಿಯಿಂದ ನಮ್ಮ ದೈಹಿಕ ಕೆಲಸಗಳ ಹೊಟ್ಟನ್ನು ಸುಟ್ಟುಬಿಟ್ಟು ದೇವರು ನಮಗೆ ದೀಕ್ಷಸ್ನಾನ ನೀಡುತ್ತಾನೆ. ಒಂದು ಕ್ಷಣದಲ್ಲಿ ಆತನ ಪ್ರಸನ್ನತೆಯ ಬೆಂಕಿಯಲ್ಲಿ ದೇವರಿಗೆ ಸಂಬಂಧ ಪಡದೇ ನಮ್ಮಲ್ಲಿ ಇರುವವುಗಳೆಲ್ಲವೂ ಸುಟ್ಟು ಹೋಗುತ್ತವೆ. ನಮ್ಮ ಮೇಲೆ ಆತನ ಪ್ರಸನ್ನತೆಯ ಬೆಂಕಿಯು ಸುರಿಯುವಾಗ, ಅಶುದ್ಧ ಇಚ್ಛೆಗಳು, ದೈಹಿಕ ಜೀವನ ಶೈಲಿಯ ಕ್ರಮ ಬಂಧನಗಳು ಮತ್ತು ಚಟಗಳು ತತ್‌ಕ್ಷಣವೇ ಸುಟ್ಟುಹೋಗುತ್ತವೆ ಮತ್ತು ತೆಗೆದು ಹಾಕಲ್ಪಡುತ್ತವೆ. ಹಲವು ಬಾರಿ, ಯೆಶಾಯನು ಅನುಭವಿಸಿದಂತೆ, ಆಳವಾದ ಮನವರಿಕೆ ಮತ್ತು ಆತ್ಮಿಕ ವೈರಾಗ್ಯದಿಂದ ಇದು ಸಂಭವಿಸುತ್ತದೆ ಅಥವಾ ಸಹಚರಿಸುತ್ತದೆ. ''ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ!'' ಎಂಬ ಮಿತಿಮೀರಿದ ವಿವೇಚನಾ ಶಕ್ತಿಯಿದೆ ಮತ್ತು ಆತನ ಯಜ್ಞವೇದಿಯ ಕೆಂಡಗಳು ನಮ್ಮ ಜೀವಿತಗಳ ಮೇಲೆ ಬೀಳುತ್ತದೆ, ಆತನ ಪವಿತ್ರ ಬೆಂಕಿಯು ಅಶುದ್ಧವಾಗಿರುವವುಗಳೆಲ್ಲವನ್ನು ಸುಟ್ಟು ಹಾಕುತ್ತದೆ.

## ಆತನ ಪ್ರಸನ್ನತೆಯ ಬೆಂಕಿ ಪುನಃ ಹೊತ್ತಿಸುತ್ತದೆ

ದೇವರಿಗಾಗಿ ಮತ್ತು ಜನರಿಗಾಗಿ ನಮ್ಮ ಪ್ರೀತಿಯು ಪುನಃ ಹೊತ್ತಿಸಲ್ಪಡಬೇಕು.

**ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹುಜನರ ಪ್ರೀತಿಯು ತಣ್ಣಗಾಗಿಹೋಗುವುದು** (ಮತ್ತಾಯ 24:12)

**ಲವೊದಿಕೀಯದಲ್ಲಿರುವ ಸಭೆಯ ದೂತನಿಗೆ ಬರೆ ಆಮೆನ್ ಎಂಬಾತನು ಅಂದರೆ ನಂಬತಕ್ಕ ಸತ್ಯ ಸಾಕ್ಷಿಯೂ ದೇವರ ಸೃಷ್ಟಿಗೆ ಮೂಲನೂ ಆಗಿರುವಾತನು ಹೇಳುವುದೇನೆಂದರೆ ನಿನ್ನ ಕೃತ್ಯಗಳನ್ನು ಬಲ್ಲೆನು ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು** (ಪ್ರಕಟನೆ 3:14-16)

ಆತನಿಗಾಗಿರುವ ನಮ್ಮ ಪ್ರೀತಿಯಲ್ಲಿ ನಾವು ಕೆಂಪಾದ ಬಿಸಿಯಂತಿರಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ದೇವರ ಪ್ರಸನ್ನತೆಯು ನಮ್ಮ ಮೇಲೆ ಬರುವಾಗ ನಮ್ಮಲ್ಲಿ ಉಗುರುಬೆಚ್ಚಗಿರುವವರು ಪುನಃ ಹೊತ್ತಿಸಲ್ಪಡುತ್ತಾರೆ ದೇವರಿಗಾಗಿ ತಣ್ಣಗಾಗುತ್ತಿರುವ ನಮ್ಮ ಪ್ರೀತಿಯು ಉಜ್ಜೀವಿಸಲ್ಪಡುತ್ತದೆ ಮತ್ತು ಬಲಿಷ್ಟವಾಗಿ ಸುಡಲು ಪ್ರಾರಂಭಿಸುತ್ತದೆ. ನಮ್ಮನ್ನು ಮೇಲಕ್ಕೆ ಹುರಿದುಂಬಿಸಲು, ಪ್ರೇರಿಸಲು ಅಥವಾ ನಮ್ಮನ್ನು ಆಗ್ರಹಿಸಲು ಯಾರ ಅವಶ್ಯಕತೆಯೂ ಬೇಡವಾಗುತ್ತದೆ. ಆತನ ಪ್ರಸನ್ನತೆಯ ಬೆಂಕಿಯು ನಮ್ಮ ಮೊದಲ ಪ್ರೀತಿಯನ್ನು ಪುನಃ ಹೊತ್ತಿಸಿದೆ! ನಾವು ಆತನಿಗಾಗಿ ಬೆಂಕಿಯೋಪಾದಿಯಲ್ಲಿರುತ್ತೇವೆ !

ವರಗಳು, ಸೇವೆಗಳು, ಮೇಲಂಗಿಗಳು ಮತ್ತು ಅಭಿಷೇಕವು ಪುನಃ ಹೊತ್ತಿಸಲ್ಪಡುತ್ತದೆ.

**ಪವಿತ್ರಾತ್ಮನನ್ನು ನಂದಿಸಬೇಡಿರಿ** (1 ಥೆಸಲೋನಿಕದವರಿಗೆ 5:19).

**ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟದರ ಮೂಲಕ ನಿನಗೆ ದೊರಕಿದ ದೇವರ ಕೃಪಾವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕಕೊಡುತ್ತೇನೆ.** (2 ತಿಮೊಥೆಯನಿಗೆ 1:6)

ಕೆಲವು ಬಾರಿ, ದೇವರಿಂದ ಕರೆಯಲ್ಪಟ್ಟು ವರಗಳನ್ನು ಹೊಂದಿದವರು ಕಾರಣಗಳಿಗಾಗಿ ಅವರ ವರಗಳನ್ನು ಮತ್ತು ಕರೆಗಳನ್ನು ತಾತ್ಸಾರ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಇದು ಆತ್ಮದ ಚಿತ್ತಾನುಸಾರವಾದ ಅಡಗಿಸುವಿಕೆಯಾಗಿರುತ್ತದೆ, ಮತ್ತು ಇತರೆ ಸಂದರ್ಭಗಳಲ್ಲಿ ಪ್ರಪಂಚದ ಕಾಳಜಿಯ ನಿಮಿತ್ತ, ಚಿತ್ತಭ್ರಮಣೆ ಮುಂತಾದವುಗಳ ನಿಮಿತ್ತವಾಗಿರಬಹುದು. ಹೀಗಿದ್ದರೂ ದೇವರ ಪ್ರಸನ್ನತೆಯಲ್ಲಿ ಅವುಗಳು ಪುನಃ ಹೊತ್ತಿಸಲ್ಪಡುತ್ತವೆ: ಆತನ ಪ್ರಸನ್ನತೆಯ ಬೆಂಕಿಯು ಇವುಗಳು ಜೀವಂತವಾಗಿ ಕಂಡು ಬರಲು ಪರಿಣಾಮ ಬೀರುತ್ತವೆ ಮತ್ತು ಅವರು ಮತ್ತೊಮ್ಮೆ ತಮ್ಮ ವರಗಳಲ್ಲಿ ಕರೆಯಲ್ಲಿ ಮತ್ತು ಯಾವುದೋ ಒಂದು ಸಮಯದಲ್ಲಿ ಅವರ ಜೀವಿತಗಳಲ್ಲಿದ್ದ

ಅಭಿಷೇಕದಲ್ಲಿ ಪ್ರಹರಿಸಬಹುದು. ಇದು ಅನೇಕರಿಗೆ ಸಂತೋಷ ಮತ್ತು ಆಶೀರ್ವಾದಗಳನ್ನು ತರುತ್ತದೆ!

ಕರ್ತನಿಗಾಗಿ ಉತ್ಸಾಹವನ್ನು ಪುನಃ ಹೊತ್ತಿಸಲ್ಪಡುವುದು

**ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ.** (ರೋಮಾಪುರದವರಿಗೆ 12:11)

ನಿಯಮಿತ ಕಾಲವನ್ನು ಮೀರಿ ಕೆಲಸ ಮಾಡುವುದರಿಂದ ಕ್ರಿಸ್ತೀಯ ಕೆಲಸದಲ್ಲಿ ಸಲ್ಲಿಸಬೇಕಾದ ತೀಕ್ಷ್ಣತೆ ಕೆಲವು ಸಮಯದಲ್ಲಿ ಸೇವೆಯಲ್ಲಿ ಹೆಚ್ಚು ಕಾಲ ಕೆಲಸಮಾಡುವುದರಿಂದ ಕರ್ತನ ಮೇಲಿರುವ ನಮ್ಮ ಉತ್ಸಾಹವನ್ನು ಕಳೆದುಕೊಳ್ಳಲು ಕಾರಣವಾಗುತ್ತದೆ. ಆತನ ಪ್ರಸನ್ನತೆಯಲ್ಲಿ ಸಮಯ ಕಳೆಯುವಾಗ, ಕರ್ತನಿಗಾಗಿ ಇರುವ ನಮ್ಮ ಉತ್ಸಾಹವು ಪುನಃ ಹೊತ್ತಿಸಲ್ಪಡುತ್ತದೆ. ನಾವು ಆತ್ಮನಲ್ಲಿ ಕೆಂಪಾದ ಬಿಸಿವುಳ್ಳವರಾಗಿ ಉತ್ಸಾಹವುಳ್ಳವರಾಗಿ ಕಂಡು ಬರುತ್ತೇವೆ. ಅಲ್ಲಿ ಜಾಗ್ರತೆ ಬೇಕಾದಲ್ಲಿ ''ಆಲಸ್ಯ''ವಾಗಿರುವುದಿಲ್ಲ ನಾವು ಕರ್ತನಿಗಾಗಿ ಏನು ಮಾಡುತ್ತೇವೆ ಅನ್ನುವುದರಲ್ಲಿ ಹೊಸ ಉತ್ಸಾಹ ಮತ್ತು ನವೀನ ಅನುರಾಗವಿರುತ್ತದೆ (ದಾಹ).

## ಆತನ ಪ್ರಸನ್ನತೆಯ ಬೆಂಕಿಯು ಆತನ ಅಂಗೀಕಾರದ ಸೂಚನೆಯಾಗಿದೆ.

**ದಾವೀದನು ಅಲ್ಲಿ ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿ ಅದರ ಮೇಲೆ ಆತನಿಗೆ ಸರ್ವಾಂಗ ಹೋಮಗಳನ್ನು ಸಮಾಧಾನ ಯಜ್ಞಗಳನ್ನು ಅರ್ಪಿಸಿ ಯೆಹೋವನನ್ನು ಪ್ರಾರ್ಥಿಸಿದನು. ಯೆಹೋವನು ಅವನ ಮೊರೆಯನ್ನು ಲಾಲಿಸಿ ಆಕಾಶದಿಂದ ಯಜ್ಞವೇದಿಯ ಮೇಲೆ ಬೆಂಕಿಯನ್ನು ಸುರಿಸಿ** (1 ಪೂರ್ವಕಾಲ ವೃತ್ತಾಂತ 21:26).

**ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗ ಹೋಮ ದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಬಿಟ್ಟಿತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು** (2 ಪೂರ್ವಕಾಲ ವೃತ್ತಾಂತ 7:1).

ಆತನ ಪ್ರಸನ್ನತೆಯ ಬೆಂಕಿಯೊಡನೆ ದೇವರು ನಮ್ಮನ್ನು ಸಂದರ್ಶಿಸುವಾಗ, ಇದು ನಾವು ಸಮರ್ಪಿಸುವ ಆತ್ಮಿಕ ಯಜ್ಞಬಲಿಗಳನ್ನು ಆತನು ಅಂಗೀಕರಿಸುವ ಸೂಚನೆಯಾಗಿದೆ. ನಮ್ಮ ಪ್ರಾರ್ಥನೆಗಳು ಕೇಳಲ್ಪಟ್ಟಿವೆ ಮತ್ತು ನಮ್ಮ ಯಜ್ಞಸಮರ್ಪಣೆಗಳು ಆತನಿಗೆ ಮೆಚ್ಚಿಕೆಯಾಗಿವೆ ಎಂಬುದರ ಸ್ಪಷ್ಟವಾದ ಸೂಚನೆಗಳು

ಇವಾಗಿವೆ. ಆತನ ಪ್ರಸನ್ನತೆಯು ಸ್ಪಷ್ಟವಾದ ತೋರ್ಪಡಿಸುವಿಕೆಯ ಮೇಲೆ ಅವಲಂಬಿತವಾಗಿರದಿದ್ದರೂ ಕೆಲವು ವೇಳೆ ಇಂತಹ ಮಾರ್ಗದಲ್ಲಿ ಆತನು ತನ್ನನ್ನು ತೋರ್ಪಡಿಸಿಕೊಳ್ಳುವಾಗ ನಾವು ಇದನ್ನು ಸ್ವಾಗತಿಸುತ್ತೇವೆ.

## ಆತನ ಪ್ರಸನ್ನತೆಯ ಬೆಂಕಿಯು ದೈವಿಕ (ಪ್ರಕೃತ್ಯಾತೀತ) ಹಂಚಿಕೊಡುವಿಕೆಯನ್ನು ತರುತ್ತದೆ.

**ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಬಿಸಿದರು.** (ಅಪೊಸ್ತಲರ ಕೃತ್ಯಗಳು 2:1-4)

ನಾವು ಆತನ ಪ್ರಸನ್ನತೆಯಲ್ಲಿರುವಾಗ ಮತ್ತು ಆತನ ಪ್ರಸನ್ನತೆಯ ಬೆಂಕಿ ನಮ್ಮ ಮೇಲೆ ಸಂಚರಿಸುವಾಗ, ಅಲ್ಲಿ ಆತ್ಮಿಕ ಹಂಚುವಿಕೆ ಇರುತ್ತದೆ. ದೇವರ ಬಲ, ನಾವು ಹಿಂದೆ ಹೊಂದಿರದೆ ಇದ್ದಂತಹ ಆತ್ಮಿಕ ವರಗಳು ಮತ್ತು ಮೇಲಂಗಿ ಮತ್ತು ಹಿಂದೆ ಹೊಂದಿಲ್ಲದ ಅಭಿಷೇಕವು ನಮ್ಮ ಮೇಲೆ ಬಿಡುಗಡೆಗೊಳ್ಳುತ್ತವೆ. (2 ಅರಸುಗಳು 2:11-13) ಅಲ್ಲಿ ಪವಿತ್ರಾತ್ಮನ ಬಲದ ನವೀನ ದೀಕ್ಷಾಸ್ನಾನವಿರುತ್ತದೆ.

ಜನರ ಮಧ್ಯದಲ್ಲಿ ಸೇವೆ ಸಲ್ಲಿಸುವಾಗ, ಸೇವೆ ಮಾಡುತ್ತಿರುವಂತಹ ವ್ಯಕ್ತಿ ಅಥವಾ ಸೇವೆಯನ್ನು ಪಡೆದುಕೊಳ್ಳುತ್ತಿರುವವರು, ಆತನ ಪ್ರಸನ್ನತೆಯ ಬೆಂಕಿಯ ಸ್ಪಷ್ಟ ತೋರ್ಪಡಿಸುವಿಕೆಯಾದ ಬಿಸಿ ಅಥವಾ ಉತ್ಸಾಹವನ್ನು ಅನುಭವ ಪಡೆಯುತ್ತಾರೆ. ಉದಾಹರಣೆಗೆ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯು, ಅವನ ಅಥವಾ ಆಕೆಯ ಬಲಗೈಯಲ್ಲಿ ಬಿಸಿ ಅನುಭವ ತಿಳಿಯಬಹುದು. ಇದು ಒಂದು ದೇವರ ಪ್ರಸನ್ನತೆ ಮತ್ತು ಬಲದ ಸ್ಪಷ್ಟ ಸೂಚನೆಯಾಗಿರುತ್ತದೆ, ಮತ್ತು ಆ ವ್ಯಕ್ತಿಯು ದೇವರು ಏನನ್ನು ಮಾಡಬೇಕೆಂಬುದಾಗಿ ಅಪೇಕ್ಷಿಸುತ್ತಾನೆ ಅನ್ನುವುದನ್ನು ತಿಳಿಯಬೇಕು. ಇದು ಅನೇಕ ಬಾರಿ ಸೇವೆ ಮಾಡುವ ವ್ಯಕ್ತಿಯು ಜನರ ಮೇಲೆ ಕೈಗಳನ್ನು ಇಟ್ಟು, ಅವರ ಜೀವಿತಗಳೊಳಗೆ ಆತನ ಪ್ರಸನ್ನತೆಯ ಬೆಂಕಿಯ ಸೇವೆಯನ್ನು ನೀಡುವುದಾಗಿರಬಹುದು ಅದೇ ರೀತಿಯಾಗಿ ಸೇವೆಯನ್ನು ಪಡೆದುಕೊಳ್ಳುವ ಜನರು ಮೃದು ತಾಪ ಅಥವಾ ತೀಕ್ಷ್ಣ ಬಿಸಿಯ ಅನುಭವ ಪಡೆಯಬಹುದು. ದೇವರ ಪ್ರಸನ್ನತೆಯ ಇಂತಹ ಸ್ಪಷ್ಟ

ತೋರ್ಪಡಿಸುವಿಕೆಗಳು ದೇವರು ಸ್ವಸ್ಥತೆಯ ಕಾರ್ಯಗಳನ್ನು ಮಾಡುತ್ತಿರುವ ಸೂಚನೆಗಳಿದ್ದಿರಬಹುದು ಮತ್ತು ಆ ವ್ಯಕ್ತಿಯು ನಂಬಿಕೆಯಲ್ಲಿ ಹೆಜ್ಜೆಯನ್ನಿಡುವ ಅಗತ್ಯವಿರಬಹುದು ಮತ್ತು ಅದನ್ನು ಪಡೆದುಕೊಳ್ಳುವುದು ಅವರು ಹಿಂದೆ ಮಾಡಲಾಗದೇ ಇರುವವುಗಳನ್ನು ಮಾಡುವುದಕ್ಕೆ ಪ್ರಾರಂಭಿಸಬಹುದು. ಆ ವ್ಯಕ್ತಿಯ ಜೀವಿತಕ್ಕೆ ದೇವರು ಒಂದು ವಿಷಯದಲ್ಲಿ ಪಾಲುಕೊಡುವುದಾಗಿರಬಹುದು. ಕೆಲವು ಬಾರಿ, ಆ ಬಿಸಿಯು ಬಹಳ ತೀಕ್ಷ್ಣವಾಗಿದ್ದು ವ್ಯಕ್ತಿಯು ಬೆಂಕಿಯ ಮೇಲಿದ್ದ ಹಾಗೆ ಅಳುವಂತೆ ಅಥವಾ ಕಿರುಚುವಂತೆ ಮಾಡಲು ಕಾರಣವಾಗಬಹುದು. ದೇವರ ಪ್ರಸನ್ನತೆಯ ಬೆಂಕಿಯು ಆ ವ್ಯಕ್ತಿಯ ಮೇಲಿದ್ದು ಹೊಟ್ಟು ಮಾಂಸಕ್ಕೆ ಸಂಬಂಧಿಸಿದ ಅನಾವಶ್ಯಕ ವಿಷಯಗಳನ್ನು ಸುಟ್ಟು ಬಿಡುತ್ತದೆ.

## ಆತನ ಪ್ರಸನ್ನತೆಯ ಬೆಂಕಿಯ ಋತುಗಳು

**ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು. ಉಪ್ಪು ಒಳ್ಳೆಯ ಪದಾರ್ಥವೇ, ಉಪ್ಪು ಸಪ್ಪೆಯಾದರೆ ಅದನ್ನು ಇನ್ನಾತರಿಂದ ರುಚಿಗೊಳಿಸುವಿರಿ? ನಿಮ್ಮೊಳಗೆ ಉಪ್ಪು ಇರಲಿ, ಒಬ್ಬರಿಗೊಬ್ಬರು ಸಮಾಧಾನದಿಂದಿರಿ** (ಮಾರ್ಕನು 9:49,50).

ಆತನ ಪ್ರಸನ್ನತೆಯ ಬೆಂಕಿಯು ಹದಗೊಳಿಸುವಿಕೆ, ಪ್ರೌಢತೆ ಮತ್ತು ಪ್ರಗತಿಯನ್ನು ಉತ್ಪಾದಿಸುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಮಾಂಸಕ್ಕೆ ಸಂಬಂಧಿಸದವುಗಳೆಲ್ಲ ಸುಟ್ಟು ಹೋಗುತ್ತವೆ, ಆತ್ಮಿಕ ಹೊಂದಾಣಿಕೆ ಬರುತ್ತದೆ, ಗ್ರಹಿಕೆಯಲ್ಲಿ ಬದಲಾವಣೆ ಇರುತ್ತದೆ, ನಮ್ಮ ಹೃದಯಗಳ ದಿಕ್ಕುಗಳ ಮಾರ್ಪಾಟಾಗುತ್ತದೆ, ಕಣ್ಣುಗಳು ತೆರೆಯುತ್ತವೆ, ಆತನ ಚಿತ್ತ ಮತ್ತು ಉದ್ದೇಶಗಳಿಗೆ ಒಳಪಡಲು ಇಚ್ಛೆಯಿರುತ್ತದೆ. ಹದಗೊಳಿಸುವಿಕೆ ಸಂಭವಿಸುತ್ತದೆ! ಆತನ ಪ್ರಸನ್ನತೆಯ ಬೆಂಕಿಯಲ್ಲಿ ನಾವು ಪ್ರೌಢತೆಯ ಒಂದು ಹೊಸ ಸಾಮ್ರಾಜ್ಯಕ್ಕೆ ತರಲ್ಪಡುತ್ತೇವೆ.

## ಆತನ ಪ್ರಸನ್ನತೆಯ ಬೆಂಕಿಯು ದುಷ್ಟನನ್ನು ಅಧೀನಪಡಿಸಿಕೊಳ್ಳುತ್ತದೆ (ಪೂರ್ತಿ ಅಡಗಿಸುತ್ತದೆ)

**ಆ ಸಾವಿರ ವರುಷಗಳು ತೀರಿದ ಮೇಲೆ ಸೈತಾನನಿಗೆ ಸೆರೆಯಿಂದ ಬಿಡುಗಡೆಯಾಗುವದು ಅವನು ಹೊರಗೆ ಬಂದು ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ ಗೋಗ್ ಮಗೋಗ್ ಎಂಬ ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ ಕೂಡಿಸುವನು; ಅವರ ಸಂಖ್ಯೆಯು ಸಮುದ್ರದ ಮರಳಿನಷ್ಟಿರುವದು. ಅವರು ದೇಶದಲ್ಲೆಲ್ಲಾ ಹರಡಿಕೊಂಡು ದೇವ ಜನರ ದಂಡಿಗೂ ನಮ್ಮ ಪ್ರಿಯ ಪಟ್ಟಣಕ್ಕೂ ಮುತ್ತಿಗೆ ಹಾಕಿದರು ಆಗ ಪರಲೋಕದಿಂದ ಬೆಂಕಿ ಇಳಿದು ಬಂದು ಅವರನ್ನು ದಹಿಸಿಬಿಟ್ಟಿತು** (ಪ್ರಕಟನೆ 20:7-9).

ಆತನ ಪ್ರಸನ್ನತೆಯ ಬೆಂಕಿಯ ಮುಂದೆ ವೈರಿಯು ನಿಲ್ಲಲಾರನು! ದೆವ್ವಗಳ ಬಲಗಳು ಮತ್ತು ಕತ್ತಲೆಯ ಕಾರ್ಯಗಳು ದೇವರ ಬೆಂಕಿಯಿಂದ ಓಡಿಹೋಗುತ್ತವೆ. ಆತನ ಪ್ರಸನ್ನತೆಯ ಬೆಂಕಿಯು ನಮ್ಮ ಮೇಲಿರುವಾಗ ಎಲ್ಲಾ ದೆವ್ವಗಳ ಬಲಗಳ ಮೇಲೂ ಪ್ರಬಲ ಯಶಸ್ಸನ್ನು ಮತ್ತು ಮಹತ್ವದ ಬಿಡುಗಡೆಗಳನ್ನೂ ನಿರೀಕ್ಷಿಸಬಹುದು.

## ಆತನ ಪ್ರಸನ್ನತೆಯ ಬೆಂಕಿಯು ಸಂರಕ್ಷಿಸುತ್ತದೆ

**ನಾನೇ ಅದರ ಸುತ್ತಮುತ್ತಲು ಅಗ್ನಿ ಪ್ರಾಕಾರವೂ ಅದರೊಳಗೆ ವೈಭವವೂ ಆಗಿರುವೆನು ಎಂಬುದು ಯೆಹೋವನ ನುಡಿ** (ಜೆಕರ್ಯ 2:5).

ದೇವರ ಬೆಂಕಿಯು ಆತನ ಜನರ ಸುತ್ತಮುತ್ತಲು ದೈವಿಕ (ಪ್ರಕೃತ್ಯತೀತ) ಸಂರಕ್ಷಣೆಯೊಡನೆ ಸುತ್ತುವರೆದಿರುತ್ತದೆ. ಇದು ದೇವರು ಸ್ವತಹಃ ಆತನ ಜನರ ಸುತ್ತಲೂ ಪಾಳೆಯ ಹಾಕಿ ಕಾವಲಾಗಿರುವುದು ಆದರಿಂದ ಯಾವ ಬಾಧಕನೂ ಜನರ ಮುಂದೆ ಹಾದು ಹೋಗಲಾರನು. (ಜೆಕರ್ಯ 9:8)

### ದೇವರ ಪ್ರಸನ್ನತೆಯ ಬೆಂಕಿ

* ಶುದ್ಧೀಕರಿಸುತ್ತದೆ
* ಪುನಃ ಹೊತ್ತಿಸುತ್ತದೆ
    - ದೇವರು ಮತ್ತು ಜನರಿಗಾಗಿ ಪ್ರೀತಿ
    - ವರಗಳು, ವಸ್ತ್ರಗಳು ಮತ್ತು ಅಭಿಷೇಕ
    - ಕರ್ತನಿಗಾಗಿ ಉತ್ಸಾಹ
* ಇದು ಆತನ ಅಂಗೀಕಾರದ ಸೂಚನೆ
* ದೈವಿಕ (ಪ್ರಕೃತ್ಯಾತೀತ) ಹಂಚುವಿಕೆ ತರುತ್ತದೆ
* ಹದಗೊಳಿಸುವುದನ್ನು ಉತ್ಪಾದಿಸುತ್ತದೆ
* ಕೆಟ್ಟದ್ದನ್ನು ಸೋಲಿಸುತ್ತದೆ
* ಸಂರಕ್ಷಿಸುತ್ತದೆ

# 5

# ಆತನ ಪ್ರಸನ್ನತೆಯ ಬೆಳಕು

ದೇವರ ಪ್ರಸನ್ನತೆಯು ಬೆಳಕಿಗೆ ಹೋಲಿಕೆಯಾಗಿದೆ !

## ದೇವರು ಬೆಳಕಾಗಿದ್ದಾನೆ

**ನಾವು ಆತನಿಂದ ಕೇಳಿ ತಿಳಿಸುವ ವಾರ್ತೆ ಯಾವದೆಂದರೆ ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ** (1 ಯೋಹಾನ 1:5).

**ತಾನೊಬ್ಬನೇ ಅಮರತ್ವವುಳ್ಳವನೂ ಆಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ ಯಾರೂ ಕಾಣಲಾರರು; ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ. ಆಮೆನ್** (1 ತಿಮೊಥೆಯನಿಗೆ 6:16).

**ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತದೆ ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ** (ಯಾಕೋಬನು 1:17).

**ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ – ನಾನೇ ಲೋಕಕ್ಕೆ ಬೆಳಕು ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು** (ಯೋಹಾನ 8:12).

ನಮ್ಮ ಅಸ್ಥಿತ್ವಕ್ಕೆ ಆತನ ಪ್ರಸನ್ನತೆಯು ಪ್ರವಹಿಸಲು ನಾವು ಆಹ್ವಾನಿಸುವಾಗ, ಪ್ರವಾಹದಂತೆ ನಮ್ಮ ಮೇಲೆ ಬರುತ್ತದೆ!

## ಆತನ ಪ್ರಸನ್ನತೆಯ ಬೆಳಕು ಪಾಪವನ್ನು ಬಹಿರಂಗಗೊಳಿಸುತ್ತದೆ

**ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆಯಾವದೆಂದರೆ ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನ್ನುಸರಿಸುವವರಲ್ಲ** (1ಯೋಹಾನನು 1:5-6).

**ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವುದಿಲ್ಲ; ಹೊರಪಡದ ರಹಸ್ಯವೂ ಇಲ್ಲ** (ಮತ್ತಾಯ 10:26).

**ಕಗ್ಗತ್ತಲೆಯಲ್ಲಿ ಅಡಗಿರುವದೂ ಆತನಿಗೆ ಗೋಚರ** (ದಾನಿಯೇಲನು - 2:22 ಬಿ).

ಆತನ ಪ್ರಸನ್ನತೆಯ ಬೆಳಕಿನಲ್ಲಿ ನಾವು ಸಹ ಪ್ರಪಂಚವನ್ನು ಸೃಷ್ಟಿಸಿದ ದೇವರ ಮುಂದೆ ಬರಿದಾಗಿಯೂ ಬೆತ್ತಲೆಯಾಗಿಯೂ ನಿಂತು ಕೊಂಡಿದ್ದೇವೆ ಎಂಬ ಆಳವಾದ ಅರಿವು ಇದೆ. ನಾವು ಗುಪ್ತವಾಗಿ ಇಟ್ಟುಕೊಳ್ಳುವಂತದ್ದು ಯಾವುದೂ ಇಲ್ಲ. ನಮ್ಮ ರಹಸ್ಯ ಪಾಪಗಳು, ದೈವಿಕವಲ್ಲದ ನಮ್ಮ ಆಂತರಿಕ ಇಚ್ಛೆಗಳು ಮತ್ತು ನಮ್ಮ ಹೃದಯಗಳ ಧ್ಯಾನವೆಲ್ಲವೂ ಬಹಿರಂಗಗೊಳ್ಳುತ್ತವೆ. ನಾವು ಕಡೆಗಣಿಸಿದವುಗಳಿಗೆ, ತೋರಿಸಿಕೊಳ್ಳದೆ ಸುಳ್ಳಾಗಿ ನಟಿಸಿದ ವಿಷಯಗಳು (ವೇಷ ಕಟ್ಟಿದವು) ಸಾಂಕೇತಿಕವಾಗಿ ಮೇರೆ ಮೀರಿ ಆಗಲಿ ತೃಪ್ತಿಕರವಾಗಿವೆ ಎಂಬ ಹೊರಥಳಕು ತೋರಿಸುವವುಗಳೆಲ್ಲವುಗಳಿಗೆ ಲೆಕ್ಕ ಒಪ್ಪಿಸುವವರಾಗಿ ನಿಂತುಕೊಳ್ಳುತ್ತೇವೆ. ಆತನ ಪ್ರಸನ್ನತೆಯ ಶೋಧನ ದೀಪದ ಧಾರೆಯಲ್ಲಿ ಇವುಗಳು ಅಂಗೀಕಾರವಾಗುವುದಿಲ್ಲ ಎಂಬುದಾಗಿ ನಮಗೆ ದೇವರು ತಿಳಿಸಲು ಪ್ರಾರಂಭಿಸುತ್ತಾನೆ.

## ಆತನ ಪ್ರಸನ್ನತೆಯ ಬೆಳಕು ಜ್ಞಾನೋದಯವುಂಟು ಮಾಡುತ್ತದೆ.

### ಬೆಳಕು (ಪ್ರಕಾಶ)

**ಆತನಲ್ಲಿ ಜೀವವಿತ್ತು, ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು** (ಯೋಹಾನ 1:4).

ಆತನ ಪ್ರಸನ್ನತೆಯ ಬೆಳಕು ದೈವಿಕ (ಪ್ರಕೃತ್ಯಾತೀತ) ಜ್ಞಾನೋದಯವನ್ನು ತರುತ್ತದೆ. ನಾವು ಆತನ ಪ್ರಸನ್ನತೆಯ ಬೆಳಕಿನಲ್ಲಿರುವಾಗ ನಮ್ಮ ಹೃದಯಗಳಲ್ಲಿ ಇಂತಹ ಪ್ರಕಾಶವು ಸಂಭವಿಸುತ್ತದೆ, ನಮ್ಮ ಜೀವಿತಗಳಿಗೆ ತಿಳುವಳಿಕೆ ಬರುತ್ತದೆ. ವಿಷಯಗಳು ಸ್ಪಷ್ಟವಾಗಿ ಕಂಡುಬರುತ್ತದೆ. ಗೊಂದಲಗಳು ಮಾಯಾವಾಗುತ್ತವೆ. ತಕ್ಷಣವಾಗಿ, ದೇವರು ನಮ್ಮನ್ನು ನಡೆಸುತ್ತಿರುವ ಮಾರ್ಗ, ಆತನು ನಮ್ಮೊಟ್ಟಿಗೆ ಮಾತನಾಡುತ್ತಿರುವ ದಿಕ್ಕು ಇವೆಲ್ಲವೂ ''ವಿವೇಚನೆ'' (ತಿಳಿವು) ಮೂಡಿಸುವಂತೆ ಕಾಣುತ್ತದೆ.

### ಪ್ರಕಟನೆ: (ದೈವಪ್ರೇರಣೆ)

**ಆತನು ಅಗಾಧ ವಿಷಯಗಳನ್ನೂ ಗೂಢಾರ್ಥಗಳನ್ನೂ ಬೈಲಿಗೆ ತರುತ್ತಾನೆ; ಕಗ್ಗತ್ತಲೆಯಲ್ಲಿ ಅಡಗಿರುವದೂ ಆತನಿಗೆ ಗೋಚರ ತೇಜಸ್ಸು ಆತನಲ್ಲಿ ನೆಲೆಗೊಂಡಿದೆ** (ದಾನಿಯೇಲನು 2:22).

**ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ; ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ** (ಜ್ಞಾನೋಕ್ತಿಗಳು 20:27).

**ನೀನೇ ನನ್ನ ದೀಪವನ್ನು ಹೊತ್ತಿಸುವವನಲ್ಲವೇ, ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನು ಕೊಟ್ಟು ಕತ್ತಲೆಯನ್ನು ಪರಿಹರಿಸುವನು** (ಕೀರ್ತನೆಗಳು 18:28).

ಆತನ ಪ್ರಸನ್ನತೆಯ ಬೆಳಕಿನಲ್ಲಿ ಪ್ರಕಟನೆಯಿದೆ, ಗುಪ್ತ ವಿಷಯಗಳು, ದೇವರ ರಹಸ್ಯ ಉದ್ದೇಶಗಳು, ಕಾಣದಿರುವಂತಹ ಲೋಕದಲ್ಲಿ ದೇವರು ಮಾಡುತ್ತಿರುವ ಕಾರ್ಯಗಳು ಮುಂತಾದವುಗಳು ನಮ್ಮ ಹೃದಯಗಳಿಗೆ ಧಾರೆಯೆರೆಯಲ್ಪಡುತ್ತವೆ.

## ಮಾರ್ಗದರ್ಶನ (ದಿಕ್ಕು)

**ನಿಮಗೆ ಪ್ರಿಯವಾದದ್ದನು ಹಸಿದವರಿಗೆ ಒದಗಿಸಿ ಕುಗ್ಗಿದವರ ಆಶೆಯನ್ನು ನೆರವೇರಿಸಿದರೆ ಆಗ ನಿಮಗೆ ಕತ್ತಲಲ್ಲಿ ಬೆಳಕು ಉದಯಿಸುವುದು, ನಿಮ್ಮ ಅಂಧಕಾರವು ಪರಿಹಾರವಾಗಿ ಮಧ್ಯಾಹ್ನವಾಗುವುದು ಮತ್ತು ಯೆಹೋವನು ನಿಮ್ಮನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರಮಾಡುವನು; ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ (ಯೆಶಾಯ 58:10,11)**

ಆತನ ಪ್ರಸನ್ನತೆಯ ಬೆಳಕಿನಲ್ಲಿ, ನಮ್ಮ ಕತ್ತಲೆಯು ಮಧ್ಯಾಹ್ನದಂತಾಗುತ್ತದೆ. ನಾವು ಕಾಯುತ್ತಿರುವ ದೇವರ ಸಲಹೆಗಳು ಮತ್ತು ಮಾರ್ಗದರ್ಶನಗಳು ಭೇದಿಸಿಕೊಂಡು ನಮ್ಮ ಜೀವಿತಗಳಿಗೆ ಬರುತ್ತವೆ. ನಮ್ಮ ಜೀವಿತಗಳಿಗೆ ದೇವರಿಂದ ಸಲಹೆಗಳನ್ನು ಮತ್ತು ಮಾರ್ಗದರ್ಶನದ ಭೇದಿಸುವಿಕೆಗಾಗಿ ನಾವು ಆತನ ಸಲಹೆಗಳ ಬಿಗಿತ ತೆಗೆದುಕೊಳ್ಳುತ್ತೇವೆ. ನಾವು ಆತನ ಮಾರ್ಗದರ್ಶನವನ್ನು ಹಿಂಬಾಲಿಸುವಾಗ, ನಾವು ಉತ್ತಮವಾಗಿ ನೀರೆರೆಯಲ್ಪಟ್ಟ ತೋಟದ ರೀತಿಯಲ್ಲಿರುತ್ತೇವೆ!

## ಆತನ ಪ್ರಸನ್ನತೆಯ ಬೆಳಕು ಕತ್ತಲೆಯನ್ನು ಹೊರಹಾಕುತ್ತದೆ

**ಆತನಲ್ಲಿ ಜೀವವಿತ್ತು ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ** (ಯೋಹಾನ 1:4,5).

ಆತನ ಬೆಳಕು ಪ್ರಕಾಶಿಸುವಾಗ ಕತ್ತಲೆಯು ಓಡಿಹೋಗುತ್ತದೆ ಆತನ ಪ್ರಸನ್ನತೆಯ ಬೆಳಕಿನಲ್ಲಿ ಕತ್ತಲೆಗೆ ಸಂಬಂಧಿಸಿದ ಎಲ್ಲವೂ ಸಹ ಸೋಲಿಸಲ್ಪಡುತ್ತವೆ. ನಮ್ಮ ಜೀವಿತಗಳು ಸ್ವತಂತ್ರವಾಗಿರುತ್ತವೆ. ಯೇಸುವು ಮಹಿಮೆ ಹೊಂದುತ್ತಾನೆ!

## ಆತನ ಪ್ರಸನ್ನತೆಯ ಬೆಳಕು ದೈವಿಕ ಬಲವನ್ನು ಬಿಡುಗಡೆ ಮಾಡುತ್ತದೆ

**ಪ್ರವಾದಿಯಾದ ಹಬಕ್ಕೂಕನ ಪ್ರಾರ್ಥನೆ ರಾಗ ಶಿಗ್ಯೋನೋತ್ ಯೆಹೋವನೇ ನಾನು ನಿನ್ನ ಸುದ್ಧಿಯನ್ನು ಕೇಳಿ ಹೆದರಿದ್ದೇನೆ; ಯೆಹೋವನೇ ಯುಗದ ಮಧ್ಯದಲ್ಲಿ ನಿನ್ನ ರಕ್ಷಣಕಾರ್ಯವನ್ನು ಪುನಃ ಮಾಡು ಯುಗದ ಮಧ್ಯದಲ್ಲಿ ಅದನ್ನು ಪ್ರಸಿದ್ಧಿ ಪಡಿಸು; ನೀನು ರೋಷಗೊಂಡಿದ್ದರೂ ಕರುಣೆಯನ್ನು ಚಿತ್ತಕ್ಕೆ ತಂದುಕೋ ದೇವರು ತೇಮಾನಿನಿಂದ ಬರುತ್ತಾನೆ. ಸದಮಲಸ್ವಾಮಿಯು ಪಾರಾನ್ ಪರ್ವತದಿಂದ ಐತರುತ್ತಾನೆ; ಸೆಲಾ. ಆತನ ಪ್ರಭಾವವು ಆಕಾಶ ಮಂಡಲವನ್ನು ಆವರಿಸುತ್ತಿದೆ, ಆತನ ಮಹಿಮೆಯು ಭೂಮಂಡಲವನ್ನು ತುಂಬುತ್ತಿದೆ (ಆತನ) ತೇಜಸ್ಸು ಸೂರ್ಯನಂತಿದೆ ಅದರ ಪಕ್ಕಗಳಲ್ಲಿ ಕಿರಣಗಳು ಹೊರಡುತ್ತಿವೆ. ಅದೇ ಆತನ ಶಕ್ತಿನಿಧಿ** (ಹಬಕ್ಕೂಕ 3:1-4).

ಆತನ ಪ್ರಸನ್ನತೆಯ ಬೆಳಕಿನಲ್ಲಿ ಗುಪ್ತವಾಗಿರುವ ದೇವರ ಬಲವನ್ನು ಆತನು ನಮ್ಮ ಮಧ್ಯಕ್ಕೆ ಬಿಡುಗಡೆಗೊಳಿಸುತ್ತಾನೆ. ಆತನ ಪ್ರಸನ್ನತೆಯ ಬೆಳಕಿನಲ್ಲಿ ನೀವು ಇರುವಾಗ, ದೇವರ ಬಲವು ಒಮ್ಮೆ ಕತ್ತಲೆಯಿಂದ ಪ್ರಭಾವಿತಗೊಂಡಿದ್ದ ಕ್ಷೇತ್ರಗಳಲ್ಲಿ ಭೇದಿಸಿ ಬರುವುದುದನ್ನು ಎದುರುನೋಡಬಹುದಾಗಿದೆ!

### ರೂಪಾಂತರ ತರುತ್ತದೆ

**ಅವನು ಪ್ರಯಾಣ ಮಾಡುತ್ತಾ ದಮಸ್ಕದ ಹತ್ತಿರಕ್ಕೆ ಬರಲು ಫಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಅವನ ಹತ್ತಿರಕ್ಕೆ ಮಿಂಚಿತು ಅವನು ನೆಲಕ್ಕೆ ಬಿದ್ದು ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ ಎಂದು ಹೇಳುವ ವಾಣಿಯನ್ನು ಕೇಳಿದನು ಅವನು ಕರ್ತನೇ, ನಿನಾರು ಎಂದು ಕೇಳಿದ್ದಕ್ಕೆ ಕರ್ತನು - ನೀನು ಹಿಂಸೆಪಡಿಸುವ ಯೇಸುವೇ ನಾನು** (ಅಪೊಸ್ತಲರ ಕೃತ್ಯಗಳು 9: 3-5).

ಜನರು, ಆತನ ಪ್ರಸನ್ನತೆಯ ಬೆಳಕನ್ನು ಸಂಧಿಸುವಾಗ, ಅವರ ಜೀವಿತಗಳು ಪ್ರಬಲವಾಗಿ ರೂಪಾಂತರಗೊಳ್ಳುತ್ತವೆ. ಅನೇಕ ವೇಳೆ ತತ್‌ಕ್ಷಣದಲ್ಲಿ ಬದಲಾವಣೆ ಸಂಭವಿಸುತ್ತದೆ. ದೇವರ ಬಲವು, ಆತನ ಪ್ರಸನ್ನತೆಯ ಬೆಳಕಿನ ಜೊತೆಯಲ್ಲಿ ಸೇರಿ ಅವರನ್ನು ಸಂಪೂರ್ಣವಾಗಿ ಒಂದೇ ಕ್ಷಣದಲ್ಲಿ ರೂಪಾಂತರಿಸುತ್ತದೆ!

### ಸ್ವಸ್ಥತೆ ಮತ್ತು ಜಯವನ್ನು ತರುತ್ತದೆ

**ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೂ (ದೇವರ) ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ ಮೂಡುವನು; ಕೊಟ್ಟಿಗೆಯಿಂದ ಬಿಟ್ಟ ಕರುಗಳಂತೆ ನೀವು ಹೊರಟು ಬಂದು ಕುಣಿದಾಡುವಿರಿ; ದುಷ್ಟರನ್ನು ತುಳಿದುಬಿಡುವಿರಿ; ನಾನು ಕಾರ್ಯ ಸಾಧಿಸುವ ದಿನದಲ್ಲಿ ಅವರು ನಿಮ್ಮ ಅಂಗಾಲುಗಳ ಕೆಳಗೆ ಬೂದಿಯಾಗಿ ಬಿದ್ದಿರುವರು; ಇದು ಸೇನಾಧೀಶ್ವರ ಯೆಹೋವನ ನುಡಿ** (ಮಲಾಕಿಯ 4: 3-5).

ನೀತಿಯೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು! ನಮ್ಮ ಜೀವಿತಗಳಿಗೆ ದೇವರ ಪ್ರಸನ್ನತೆಯೇ ಬೆಳಕು ಪ್ರಕಾಶಿಸುವಾಗ, ನಮ್ಮ ಮಧ್ಯದಲ್ಲಿ ಸ್ವಸ್ಥತೆಯುಂಟಾಗುವುದನ್ನು ನಾವು ನಿರೀಕ್ಷಿಸಬಹುದು.

## ಆತನ ಪ್ರಸನ್ನತೆಯ ಬೆಳಕು ಆತನ ಮಹಿಮೆಯನ್ನು ಬಿಡುಗಡೆಮಾಡುತ್ತದೆ.

**ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವುದು ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು. ಕಣ್ಣೆತ್ತಿ ಸುತ್ತಲೂ ನೋಡು, ನಿನ್ನ ಮಕ್ಕಳೆಲ್ಲರೂ ಗುಂಪುಕೂಡಿ ನಿನ್ನ ಬಳಿಗೆ ಸೇರುತ್ತಿದ್ದಾರೆ; ಗಂಡು ಮಕ್ಕಳು ದೂರದಿಂದ ಸಮೀಪಿಸುತ್ತಾರೆ, ಹೆಣ್ಣುಮಕ್ಕಳು ಕಂಕುಳಿನಲ್ಲಿ ಕುಳಿತು ಬರುತ್ತಾರೆ ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದಯವು ಅದರುತ್ತಾ ಉಬ್ಬುವುದು; ಏಕೆಂದರೆ ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವದು, ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವುದು** (ಯೆಶಾಯ 60: 1-5).

ನಾವು ಆತನ ಪ್ರಸನ್ನತೆಯ ಬೆಳಕಿನೊಡನೆ ಪೂರ್ತಿಯಾಗಿ ತೊಯಿಸಿಕೊಂಡಾಗ (ನೆನೆಸಿಕೊಂಡಾಗ) ನಾವು ಆತನ ಮಹಿಮೆಯನ್ನು ಸಾಗಿಸುತ್ತೇವೆ. ಆತನ ಪ್ರಸನ್ನತೆಯ ಬೆಳಕು ನಾವು ಪ್ರಜ್ವಲಿಸುವವರಾಗಿ ಕಂಡು ಬರಲು ಕಾರಣವಾಗುತ್ತದೆ, ನಮ್ಮ ಮೇಲೆ ಆತನ ಮಹಿಮೆಯು ಕಾಣಿಸಲು ಕಾರಣವು ಸಹ ಆಗುತ್ತದೆ. ರಕ್ಷಿಸಲ್ಪಡದೆ ಇರುವವನು ನೋಡಿ ಮತ್ತು ಬೆಳಕಿನ ಬಳಿಗೆ ಬರುತ್ತಾನೆ. ಇದು ನಮ್ಮ ಜೀವಿತಗಳಿಗೆ ಐಶ್ವರ್ಯ (ಸಂಪತ್ತು) ಮತ್ತು ಅನೇಕ ಇತರ ವಿಷಯಗಳು ಬಿಡುಗಡೆಗೊಳ್ಳಲು ಕಾರಣವಾಗುತ್ತದೆ (ಯೆಶಾಯ 60ನೇ ಅಧ್ಯಾಯ ಓದಿರಿ)

**ಮೋಶೆ ಆ ಬೆಟ್ಟದಲ್ಲಿ ಯೆಹೋವನ ಸನ್ನಿಧಿಯಲ್ಲಿ ಹಗಲಿರುಳು ನಾಲ್ವತ್ತು ದಿನ ಇದ್ದನು. ಅವನು ಏನೂ ಊಟ ಮಾಡಲಿಲ್ಲ, ಏನೂ ಕುಡಿಯಲಿಲ್ಲ. ಆತನು ನಿಬಂಧನದ ವಾಕ್ಯಗಳನ್ನು ಅಂದರೆ ಹತ್ತು ಆಜ್ಞೆಗಳನ್ನು ಆ ಕಲ್ಲಿನ ಹಲಗೆಯ ಮೇಲೆ ಬರೆದನು. ಮೋಶೆ ಆಜ್ಞಾಶಾಸನಗಳಾದ ಆ ಎರಡು ಕಲ್ಲಿನ ಹಲಿಗೆಗಳನ್ನು ಕೈಯಲ್ಲಿ ಹಿಡಿದುಕೊಂಡು ಸೀನಾಯಿ ಬೆಟ್ಟದಿಂದ ಇಳಿದು ಬಂದಾಗ ಅವನು ಯೆಹೋವನ ಸಂಗಡ ಸಂಭಾಷಿಸಿದ್ದರಿಂದ ಅವನ ಮುಖವು ಪ್ರಕಾಶಮಾನವಾಗಿತ್ತು; ಆದರೆ ಆ ಸಂಗತಿ ಅವನಿಗೆ ತಿಳಿಯಲಿಲ್ಲ. ಮೋಶೆಯ ಮುಖವು ಪ್ರಕಾಶವಾಗಿರುವುದನ್ನು ಆರೋನನೂ ಇಸ್ರಾಯೇಲ್ಯರೆಲ್ಲರೂ ನೋಡಿ ಅವನ ಹತ್ತಿರಕ್ಕೆ ಬರುವದಕ್ಕೆ ಭಯಪಟ್ಟರು** (ವಿಮೋಚನ ಕಾಂಡ 34:28-30).

## ಆತನ ಪ್ರಸನ್ನತೆಯ ಬೆಳಕು

* ಪಾಪವನ್ನು ಬಹಿರಂಗಗೊಳಿಸುತ್ತದೆ
* ಜ್ಞಾನೋದಯವನ್ನುಂಟುಮಾಡುತ್ತದೆ
* ಕತ್ತಲೆಯನ್ನು ಹೊರಹಾಕುತ್ತದೆ
* ದೈವಿಕ ಬಲವನ್ನು ಬಿಡುಗಡೆ ಮಾಡುತ್ತದೆ
* ಆತನ ಮಹಿಮೆಯನ್ನು ಬಿಡುಗಡೆಗೊಳಿಸುತ್ತದೆ

# 6

# ಆತನ ಪ್ರಸನ್ನತೆಯ ಮಳೆ

ಸತ್ಯವೇದದಲ್ಲಿ ದೇವರು ನಮ್ಮ ಮೇಲೆ ಮಳೆಯ ರೂಪದಲ್ಲಿ ಇಳಿದು ಬರುವುದನ್ನು ಪ್ರಸ್ತಾಪಿಸಿರುವುದನ್ನು ನೋಡುವುದು ಅದ್ಭುತಕರವಾಗಿದೆ. ಭೂಮಿಯ ಮೇಲೆ ಬಿದ್ದು ಅದನ್ನು ತಂಪಾಗಿಸುವ ಮತ್ತು ಭೂಮಿಯು ಉತ್ಪಾದಿಸುವಂತೆ ಮಾಡುವ ಮಳೆಯ ರೂಪದಲ್ಲಿ ದೇವರ ಪ್ರಸನ್ನತೆಯು ನಮ್ಮ ಮೇಲೆ ಬಿಡುಗಡೆಗೊಳ್ಳುತ್ತದೆ.

**ಹುಲ್ಲು ಕೊಯಿದ ಮೇಹುಗಾಡಿನ ಮೇಲೆ ಸುರಿಯುವ ವೃಷ್ಟಿಯಂತೆಯೂ ಭೂಮಿಯನ್ನು ನೆನಸುವ ಹದಮಳೆಯಂತೆಯೂ ಅವನು ಇರಲಿ** (ಕೀರ್ತನೆಗಳು 72:6).

**ಯೆಹೋವನನ್ನು ತಿಳಿದುಕೊಳ್ಳೋಣ; ಹುಡುಕಿ ಹುಡುಕಿ ತಿಳಿದುಕೊಳ್ಳೋಣ. ಆತನ ಆಗಮನವು ಉದಯದಂತೆ ನಿಶ್ಚಯ; ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪುಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಅಂದುಕೊಂಡು ನನ್ನನ್ನು ಮರೆ ಹೋಗುವರು)** (ಹೋಶೇಯ 6:3).

ನಾವು ಆತನನ್ನು ಹಿಂಬಾಲಿಸಿದರೆ, ಆತನು ನಮ್ಮ ಬಳಿಗೆ ಮಳೆಯ ರೀತಿಯಲ್ಲಿ ಬರುವುದು ಖಚಿತವಾಗಿದೆ. ಇದರ ಬಗ್ಗೆ ಸಂದೇಶ ಬೈಬಲ್‌ನಲ್ಲಿ (ಮೆಸೇಜ್ ಬೈಬಲ್) ಕೆಳಗಿನಂತೆ ಭಾಷಾಂತರ ಇರುವುದನ್ನು ನೋಡುತ್ತೇವೆ. ಅದೇನೆಂದರೆ; ''ಉದಯಕಾಲವು (ಸೂರ್ಯೋದಯ) ಖಚಿತವಾಗಿರುವಂತೆ ಆತನು ದಿನ ನಿತ್ಯವು ಆಗಮಿಸುವುದು ಖಚಿತವಾಗಿದೆ. ಆತನು ಮಳೆಯು ಬರುವ ರೀತಿಯಲ್ಲಿ ಪುಟಿಯುವ ಮಳೆಯು ಭೂಮಿಯನ್ನು ತಂಪುಗೊಳಿಸುವ ಮಾದರಿಯಲ್ಲಿ ಬರುತ್ತಾನೆ.'' ನಾವು ಮಾಡುವಂತಹ ಕೆಲಸವು ನಿರರ್ಥಕವಾಗದಂತೆ ಸುರಕ್ಷಿತ ಮಾಡುವ ಬೀಜಕಾಲದ (ಬಿತ್ತನೆ ಕಾಲ) ಅವಧಿಯಲ್ಲಿ ಆತನು ಮಳೆಯಂತೆ ಬರುತ್ತಾನೆ. ನಮ್ಮ ಶ್ರಮಕ್ಕೆ ಉತ್ತಮ ಬಹುಮಾನವನ್ನು ನಾವು ಹೊಂದುವುದನ್ನು ನಿಶ್ಚಿತಮಾಡುವ ಮತ್ತು ಸುಗ್ಗಿಗೆ ಮೊದಲು ಫಲವು ಹಣ್ಣಾಗುವುದಕ್ಕೆ ಕಾರಣವಾಗುವ ಮಳೆಯ ರೂಪದಲ್ಲಿ ಆತನು ಬರುತ್ತಾನೆ.

**''ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ ಯೆಹೋವನೇ ಮಿಂಚುಗಳನ್ನು ಉಂಟುಮಾಡುತ್ತಾನೆ. ಮನುಷ್ಯರಿಗೆ ಸಮೃದ್ಧಿಯಾದ ಮಳೆಯನ್ನು ದಯಪಾಲಿಸುತ್ತಾನೆ. ಎಲ್ಲರಿಗೂ ಹೊಲದ ಪೈರನ್ನು ಅನುಗ್ರಹಿಸುತ್ತಾನೆ** (ಜೆಕರ್ಯ 10:1).

ಮಳೆಗಾಲದ ಋತುವಿನ ಅವಧಿಯಲ್ಲಿ ''ಮಳೆಗಾಗಿ ಕರ್ತನನ್ನು ಬೇಡಿಕೊಳ್ಳಿರಿ'' ಎಂಬುದಾಗಿ ದೇವರ ವಾಕ್ಯವು ನಮಗೆ ಹೇಳುತ್ತದೆ.ಮತ್ತೊಂದು ಕಡೆಯಲ್ಲಿ ಮಳೆಯಾಗುವಾಗ, ನಿಮ್ಮ ಪ್ರದೇಶದಲ್ಲಿ ಮತ್ತು ನಿಮ್ಮ ಜೀವಿತದಲ್ಲಿ ಮಳೆಗಾಗಿ ಆತನನ್ನು ಬೇಡಿಕೊಳ್ಳಿರಿ. ಆತ್ಮಿಕ ಸುರಿಸುವಿಕೆಯ ಋತುವಿನಲ್ಲಿ ನಾವಿದ್ದೇವೆ, ಯಾಕೆಂದರೆ ಕೊನೆ ದಿನಗಳಲ್ಲಿ ಆತನ ಆತ್ಮವನ್ನು ಸುರಿಸುವೆನು ಎಂಬದಾಗಿ ಆತನೇ ಹೇಳಿದ್ದಾನೆ. ಪ್ರಪಂಚದಾದ್ಯಂತ ಆತ್ಮಿಕ ಸುರಿಸುವಿಕೆಗಳು ಸಂಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದು ಹಿಂಗಾರು ಮಳೆಯ ಸಮಯವಾಗಿದೆ. ಇದು, ನಾವು ಕರ್ತನನ್ನು ನಮ್ಮ ಹಳ್ಳಿಗಳು ಮತ್ತು ನಗರಗಳು ನಮ್ಮ ಸ್ವಂತ ಪಟ್ಟಣಗಳು ಮತ್ತು ನಮ್ಮ ಸ್ವಂತ ಜೀವಿತಗಳ ಮೇಲೆ ಮಳೆಯನ್ನು ನಾವು ಕೇಳುವ ಸಮಯವಾಗಿದೆ. ಕರ್ತನು ಮೋಡಗಳನ್ನು ಉಂಟುಮಾಡುವನು ಮತ್ತು ಸಮೃದ್ಧಿಯಾದ ಮಳೆಯನ್ನು ಸುರಿಸುವನು ಎಂಬುದಾಗಿ ದೇವರ ವಾಕ್ಯವು ನಮಗೆ ಭರವಸೆಕೊಡುತ್ತದೆ. ಆತನ ಪ್ರಸನ್ನತೆಯನ್ನು ಮಳೆಯಂತೆ ನಮ್ಮ ಮೇಲೆ ಆತನು ಸುರಿಸುವನು!

## ಆತನ ಪ್ರಸನ್ನತೆಯ ಮಳೆಯು ತಂಪನ್ನು, ವಿಶ್ರಾಂತಿ ಕಾಲವನ್ನು ತರುತ್ತದೆ

**ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ...** (ಅಪೊಸ್ತಲರ ಕೃತ್ಯಗಳು 3:19).

ಆತನ ಪ್ರಸನ್ನತೆಯ ಮಳೆಯು ನಮ್ಮ ಜೀವಿತಗಳಿಗೆ ತಂಪನ್ನು (ವಿಶ್ರಾಂತಿ) ತರುತ್ತದೆ. ಆತ್ಮಿಕವಾಗಿ ಮತ್ತು ಮಾನಸಿಕವಾಗಿ ಕುಂದಿ ಹೋಗಿರುವವರು ಆತನ ಪ್ರಸನ್ನತೆಯಲ್ಲಿ ಚೈತನ್ಯಗೊಳ್ಳುತ್ತಾರೆ. ಅವರು ನವೀಕೃತಗೊಂಡಿರುವಂತೆ ಅನುಭವಪಡೆಯುತ್ತಾರೆ, ಬಲಹೊಂದುತ್ತಾರೆ ಮತ್ತು ಅವರ ಮುಂದಿರುವ ಓಟದಲ್ಲಿ ಮುಂದೊತ್ತಿಕೊಂಡು ಹೋಗಲು ಸಿದ್ಧರಾಗುತ್ತಾರೆ ದೇವರ ಪ್ರಸನ್ನತೆಯಲ್ಲಿ ಚೈತನ್ಯದಾಯಕವಾಗಿರುವುದು, ಎಲ್ಲಾದರ ಬಗ್ಗೆ ಉತ್ಸಾಹದಾಯಕ ವಿವೇಕಕ್ಕೆ ಕಾರಣವಾಗುತ್ತದೆ - ಎಲ್ಲವೂ ಹೊಸದು ಮತ್ತು ಉತ್ಸಾಹಕರವೆಂದು ಅನ್ನಿಸುತ್ತದೆ ದೇವರ ವಾಕ್ಯದಿಂದ ಪೋಷಿಸಲ್ಪಡುವುದು, ಪ್ರಾರ್ಥನೆ, ದೇವರನ್ನು ಹುಡುಕುವುದು, ಆರಾಧನೆ ಅನ್ಯೋನ್ಯತೆ, ಇತರರಿಗೆ ಅದನ್ನು ಸಾರಿ ಹೇಳುವುದು ಎಲ್ಲವೂ ಹೊಸದಾಗುತ್ತದೆ, ಉಲ್ಲಾಸಕರ ಮತ್ತು ಪ್ರತಿಯೊಂದು ಕಾರ್ಯ ಮಾಡಲು ಉತ್ತೇಜನಕಾರಿಯಾಗುತ್ತದೆ. ಇದು ಜೀವಂತವಾಗಿರಲು ಉತ್ತೇಜನಕಾರಿಯಾಗಿರುತ್ತದೆ!

## ಆತನ ಪ್ರಸನ್ನತೆಯ ಮಳೆಯು ಫಲದಾಯಕತೆ ಉಂಟುಮಾಡುತ್ತದೆ

ಆತನ ಪ್ರಸನ್ನತೆಯ ಮಳೆಯನ್ನು ದೇವರು ಬಿಡುಗಡೆಗೊಳಿಸುವಾಗ, ಫಲವತ್ತತೆಯು ಸಂಭವಿಸುವಂತೆ ಆತನು ಮಾಡುತ್ತಾನೆ. ದೇವರೊಬ್ಬನು ಮಾತ್ರ ಮರುಭೂಮಿಯು ಸಂತೋಷಿಸುವಂತೆ ಮತ್ತು ಗುಲಾಬಿ ಮೊಗ್ಗು ಅರಳುವಂತೆ ಮಾಡಲು ಕಾರಣಕರ್ತನಾಗಿದ್ದಾನೆ. ದೇವರೊಬ್ಬನು ಮಾತ್ರ ಒಣ ಮತ್ತು ಬಾಯಾರಿದ ಭೂಮಿಯನ್ನು ಒಂದು ಉತ್ತಮವಾಗಿ ನೀರೆರೆದ ತೋಟವನ್ನಾಗಿ ಮಾಡಲು ಕಾರಣ ಕರ್ತನಾಗಿದ್ದಾನೆ. ಒಂದು ಬಾರಿ ಬಂಜರು ಆಗಿದ್ದನ್ನು ಫಲಕಾರಿಯಾಗಿ ಮಾಡುತ್ತಾನೆ. ಇದು ಆತನ ಪ್ರಸನ್ನತೆಯ ಮಳೆಯು ನಮ್ಮ ಮಧ್ಯದಲ್ಲಿ ಮಾಡುವ ಕಾರ್ಯ. ಜನರು, ತಮ್ಮ ಆತ್ಮಿಕ ನೆಡೆಯಲ್ಲಿ, ಸಂಬಂಧಗಳಲ್ಲಿ, ಕೆಲಸದ ಸ್ಥಳದಲ್ಲಿ ಮತ್ತು ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿ ವೃದ್ಧಿಯಾದ ಫಲವತ್ತತೆಯನ್ನು ನೋಡಲು ಪ್ರಾರಂಭಿಸುತ್ತಾರೆ.

**ಆತನ ಪ್ರಸನ್ನತೆಯ ಮಳೆ**

* **ತಂಪನ್ನು ತರುತ್ತದೆ**
* **ಫಲದಾಯಕತೆ ಉಂಟು ಮಾಡುತ್ತದೆ**

# 7

# ಆತನ ಪ್ರಸನ್ನತೆಯ ಮಹಿಮೆ (ಪ್ರಭಾವ)

ದೇವರ ಮಹಿಮೆಯು ಆತನ ಪ್ರಸನ್ನತೆಯ ಪ್ರದರ್ಶನವಾಗಿದೆ ಆತನ ಪ್ರಸನ್ನತೆಯು ನಮಗಾಗಿ ಮುಟ್ಟಲಾಗುವಂತೆ ಮಾಡಲ್ಪಟ್ಟಿದೆ

## ಕಾಬೊಡ್ (Kabod)

ಆತನ ಪ್ರಸನ್ನತೆಯು ಬರುವಾಗಿನ ಗರಿಷ್ಟ ಮಹಿಮೆಯು, ಕಾಬೊಡ್ ಆಗಿ ಕಂಡು ಬರುತ್ತದೆ. ಕಾಬೊಡ್ ಅಂದರೆ ಪ್ರಭಾವ, (ತೇಜಸ್ಸು) ವಿಜೃಂಭಣೆ ಅಥವಾ ಬಹಳಷ್ಟು ಸಮೃದ್ಧಿ ಎಂಬುದಾಗಿ ಅರ್ಥ. ಇಂತಹ ಪ್ರಭಾವದ ಭಾರವಾದ, ದಪ್ಪದಾದ, ಗರಿಷ್ಟವಾದ ಕಾಬೊಡ್ ಬರುವಾಗ ಯಾರು ಅವರ ಕಾಲಿನ ಮೇಲೆ ಉಳಿದಿರಲು ಸಾಧ್ಯ?

**ಯಾಜಕರು ಪರಿಶುದ್ಧ ಸ್ಥಳದಿಂದ ಹೊರಗೆ ಬಂದ ಕೂಡಲೆ ಮೇಘವು ಯೆಹೋವನ ಆಲಯವನ್ನು ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದ ಮೇಘವು ಆಲಯವನ್ನು ತುಂಬಿಕೊಂಡದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದವರಾದರು.** (1 ಅರಸುಗಳು 8:10,11)

ಕಾಬೋಡ್ ನೀವು ಅನುಭವ ಪಡೆಯುವಂತಹ ದೇವರ ಪ್ರಸನ್ನತೆಯ ಮಹಿಮೆಯಾಗಿದೆ. ಆತನ ಮಹಿಮೆಯ ಗರಿಷ್ಟ ಪ್ರಭಾವವು - ಗರಿಷ್ಟ ಅಥವಾ ಭಾರವಾದ ದೇವರ ತೋರ್ಪಡಿಸುವಿಕೆಯ ಮಹಿಮೆಯು ಇದಾಗಿದೆ, ಗರಿಷ್ಟ, ಪ್ರಸನ್ನತೆ ಎಂಬುದಾಗಿ ಅನಿಸುತ್ತದೆ.

## ಶೆಕಿನಾ

ಈ ಪದವು ಸತ್ಯವೇದದಲ್ಲಿ ಕಾಣಿಸಿಕೊಳ್ಳದಿದ್ದಾಗ್ಯೂ ಸತ್ಯವೇದಕ್ಕನುಸಾರ ಇಬ್ರಿಯ ಭಾಷೆಯಲ್ಲಿ ವಾಸ್ತವವಾಗಿ ಸ್ಥಾಪಿಸು, ನೆಲೆಸು ಅಥವಾ ವಾಸಿಸು ಎಂಬ ಅರ್ಥ ಒಳಗೊಂಡಿದೆ.

ಮುಂದಿನ ಟಿಪ್ಪಣಿಯು ಫ್ರೇಡ್. ಪಿ. ಮಿಲ್ಲರ್ ರವರು ''ಜೆಕೆರ್ಯ ಮತ್ತು ಯೆಹೊದಿ ನವೀಕರಣ'' ದಿಂದ ಪರಿಷ್ಕರಿಸಲ್ಪಟ್ಟಿದೆ.

''ಶೆಕಿನಾ'' ಎಂಬ ಪದವು ಒಂದು ಪ್ರದೇಶದಲ್ಲಿನ ದೇವರ ''ಪ್ರಸನ್ನತೆ'' ಯನ್ನು ವ್ಯಾಖ್ಯಾನಿಸುವ ಸತ್ಯವೇದದಲ್ಲಿನ ಏಕಮೂಲದ ವಾಚಕ ಶಬ್ದ ರಚನೆಯಾಗಿದೆ. ''ಶಕಿನಾ'' ಅನ್ನುವ ಪದ ಸತ್ಯವೇಧದ ಮೂಲ ಗ್ರಂಥದಲ್ಲಿಲ್ಲ. ಆದರೆ ಕಲ್ಪನೆಯು ಸ್ಪಷ್ಟವಾಗಿದೆ. ಇದು ಇಬ್ರಿಯ ಪದವಾದ ''ಶೆಕಿನ್'' ಎಂಬುದರಿಂದ ಬಂದಿದೆ ಮತ್ತು ''ಶಕಿನಾ'' ಎಂಬ ಪದವು ವಿಮೋಚನಾಕಾಂಡ 24:16; 40:35 ಅರಣ್ಯಕಾಂಡ 9:16-18 ರಲ್ಲಿ ದೇವರ ಶಾರೀರಿಕ ತೋರ್ಪಡಿಸುವಿಕೆಯ ನೆಲೆಸುವಿಕೆ, ವಾಸಿಸು, ಅಥವಾ ವಾಸಸ್ಥಳ, ನಿವಾಸ ಎಂಬ ಶಾಬ್ದಿಕ ರೂಪದಿಂದ ನಾಮರೂಪವಾಗಿ ವ್ಯಾಖ್ಯಾಸಿಸಲ್ಪಟ್ಟಿದೆ. ಇನ್ನೂ ಹಲವು ಸ್ಥಳಗಳಲ್ಲಿ ''ಶೆಕಿನ'' ಪದವು ಉಪಯೋಗಿಸಲ್ಪಟ್ಟಿದೆ. ಈ ಪದವು ದೇವದರ್ಶನ ಗುಡಾರದಲ್ಲಿನ ರಹಸ್ಯಾರ್ಥವುಳ್ಳ ''ಶಕಿನಾ'' ಪ್ರಸನ್ನತೆಯನ್ನು ವಿವರಿಸಲು ಉಲ್ಲೇಖಿಸಲ್ಪಟ್ಟಿದೆ. ''ಶಕಿನ್'' ಪದದ ಉತ್ಪನ್ನವಾದ ''ಮಿಶಕನ್'' ಪದವು ಆಗಾಗ್ಗೆ ದೇವದರ್ಶನ ಗುಡಾರವೆಂದು ಭಾಷಾಂತರಿಸಲ್ಪಟ್ಟಿದೆ. ದೇವದರ್ಶನ ಗುಡಾರಕ್ಕೆ ಇಬ್ರಿಯ ಭಾಷೆಯಲ್ಲಿ ಸಾಮಾನ್ಯವಾಗಿ ಹೆಚ್ಚಾಗಿ ''ಓಹೇಲ್'', ಅಥವಾ ''ಗುಡಾರ, ಡೇರೆ'' ಎಂಬುದಾಗಿದೆ. ''ಮಿಶಕನ್'' ಅಂದರೆ ''ವಾಸಸ್ಥಳ''ವಾಗಿದೆ.

ಇದು ಒಂದು ''ವಾಸಿಸುವ ಆತನ'' ''ವಾಸಸ್ಥಳ'' ಅಥವಾ ''ಶೆಕಿನಾ'' ''ಕಾಬೋಡ್'' ಯಾಹ್ವೆ (kabod YHWH) (ಕರ್ತನ ಮಹಿಮಾ ಪ್ರಭಾವ) ಮತ್ತು ''ಶಕಿನಾ'' ಸೀನಾಯ್ ಬೆಟ್ಟದ ಮೇಲೆ ಬೆಂಕಿಯೋಪಾದಿಯ ಮೇಘವು ಮುಚ್ಚಿಕೊಂಡಿದ್ದು, ಸೋಲೋಮೋನನು ಕಟ್ಟಿದ ದೇವಾಲಯದ ಸಮರ್ಪಣೆ, ಮತ್ತು ಕರ್ತನ ಮಹಿಮೆಯ (ತೇಜಸ್ಸು) ಮರಳುವಿಕೆ ಮತ್ತು ಯೆಹೆಜ್ಕೇಲನ ನಿರ್ಗಮನದ ದರ್ಶನವು ಸಹ ಸೇರಿದ ಅನೇಕ ಸನ್ನಿವೇಶಗಳಲ್ಲಿ ತದ್ರೂಪವಾಗಿದೆ ಅಥವಾ ಒಂದೇ ವಿಧದಲ್ಲಿದೆ.

ಇಬ್ರಿಯಾ ಭಾಷೆಯ ಕ್ರಿಯಾಪದ ''ಶೆಕಿನ್'' ಅಂದರೆ ನೆರೆಹೊರೆಯಲ್ಲಿ ದೀರ್ಘವಾಗಿ ಎಡೆಬಿಡದಿರುವ ನಿವಾಸವನ್ನು ತೆಗೆದುಕೊಳ್ಳುವುದು ಎಂಬ ಸಾಮಾನ್ಯ ಅರ್ಥ ಹೊಂದಿದೆ ಈ ಪದ ಮತ್ತು ''ಯೆಶವ'' ಎಂಬ ಪದದ ನಡುವಿನ ವ್ಯತ್ಯಾಸವು ''ವಾಸಿಸು'' ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ನೀವು ''ಯಶವ'' (Yashow) ಎಂಬ ಪದವನ್ನು ಇತರರ ಸಂಬಂಧವಿಲ್ಲದೆ ಏಕ ವ್ಯಕ್ತಿಯಾಗಿ ವಾಸಸ್ಥಾನ ಮಾಡಿಕೊಳ್ಳುವುದು ಎಂದು ಉಪಯೋಗಿಸಬಹುದು, ''ಶೆಕನ'' ಎಂಬ ಪದದ ವೇಳೆಯ

*ಕಾಲಾವಧಿಯಲ್ಲಿ ಅರ್ಥವು, ನೆರೆಹೊರೆಯುವರ ಮಧ್ಯದಲ್ಲಿ ಸುರಕ್ಷಿತವಾಗಿ ವಾಸಿಸುವುದಾಗಿದೆ ಅಥವಾ ಒಂದು ಜನರ ಗುಂಪಿನಲ್ಲಿ ಅಥವಾ ಒಬ್ಬ ಮತ್ತು ಮತ್ತೊಬ್ಬ ವ್ಯಕ್ತಿಯ ಸೀಮಿತ ಇರಬಹುದು ಆದರೆ ಬಡಾವಣೆಯಿಂದ ಮಾತ್ರ ಪ್ರಾಥಮಿಕ ಅರ್ಥವು ಸ್ಥಾಯಿಯಾಗಿ ನೆಲೆಸು ಮತ್ತು ಸಮುದಾಯದ ಸದಸ್ಯನಂತೆ ಮುಂದುವರೆಯುವುದಾಗಿದೆ.*

*ಹೀಗೆ ಕರ್ತನ "ಶೆಕಿನಾ" ತೇಜಸ್ಸು (ಮಹಿಮೆಯು) ಆತನ ಜನರ ಸಮುದಾಯದ ಮಧ್ಯದಲ್ಲಿ ಪ್ರಸನ್ನತೆಯ ಮುಂದುವರಿಕೆ, ದೇವರ ನೆಲೆಸುವಿಕೆಯನ್ನು ತೋರಿಸುತ್ತದೆ. ಆದುದರಿಂದ "ಶೆಕಿನಾ" ಪದವು ಕಾಲ-ಅಂತರಿಕ್ಷ ಅಖಂಡ ಘಟನಾವಳಿಯಲ್ಲಿ ದೇವರ ಪ್ರಸನ್ನತೆಯ ಪ್ರಾಕೃತಿಕ ತೋರ್ಪಡಿಸುವಿಕೆಯನ್ನು ತೋರಿಸುತ್ತದೆ. ಇದು ಕಾಣುವಂತಹದ್ದು. ಪ್ರಸನ್ನತೆಯು ಮೂರು ಆಯಕಟ್ಟುಳ್ಳ ಪ್ರಪಂಚದಲ್ಲಿನ ದೇವರ ವಾಹನವಾಗಿದೆ.*

ವಿಮೋಚನಕಾಂಡ 40:35 ರಲ್ಲಿನ ಮೋಡವು ಶೆಕಿನಾವಾಗಿದೆ.

**ಗುಡಾರಕ್ಕೂ ಯಜ್ಞವೇದಿಗೂ ಸುತ್ತಲು ಅಂಗಳದ ಆವರಣವನ್ನು ಎತ್ತಿ ನಿಲ್ಲಿಸಿ ಅಂಗಳದ ಬಾಗಲಿಗೆ ಪರದೆಯನ್ನು ಹಾಕಿದನು ಹೀಗೆ ಮೋಶೆ ಆ ಕೆಲಸವನ್ನೆಲ್ಲಾ ಮುಗಿಸಿದನು. ಆಗ ಮೇಘವು ದೇವ ದರ್ಶನದ ಗುಡಾರವನ್ನು ಮುಚ್ಚಿತು. ಯೆಹೋವನ ತೇಜಸ್ಸು (ಕಾಬೋಡ್) ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವುದರಿಂದಲೂ (ಶೆಕನ್) ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವುದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು** (ವಿಮೋಚನ ಕಾಂಡ 40:33-35).

ಶೆಕಿನಾವು ನೀವು ನೋಡುವಂತಹ ದೇವರ ತೇಜಸ್ಸು (ಮಹಿಮೆ) ಆಗಿದೆ. ತೇಜಸ್ಸಿನ ಮೇಘವು ಇದು ದಟ್ಟದಾದ ಮೇಘದಂತೆ ದೇವರ ಮಹಿಮೆಯ ತೋರ್ಪಡಿಸುವಿಕೆಯಾಗಿದೆ. (ವಿಮೋಚನಕಾಂಡ 40:34 ; 2 ಪೂರ್ವಕಾಲ ವೃತ್ತಾಂತ 5:14) ದೇವರ ಮಹಿಮೆಯು (ತೇಜಸ್ಸು) ಮೇಘದಂತೆ ಕಾಣಿಸುತ್ತದೆ.

## ಐತಿಹಾಸಿಕ ದಾಖಲೆ :1906 ರ "ಅಜುಸಾ ಸ್ಟ್ರೀಟ್" ಉಜ್ಜೀವನ

*1906 ರ 'ಅಜುಸಾ ಸ್ಟ್ರೀಟ್' ಉಜ್ಜೀವನದ ಕೂಟದ ಅವಧಿಯಲ್ಲಿ ಫ್ರಾಂಕ್ ಬಾರ್ಟ್‌ಲ್ ರವರು ಮುಂದಿನಂತೆ ವಿಶ್ಲೇಷಣೆ ನೀಡಿದ್ದಾರೆ "ದೇವರು ಅತ್ಯದ್ಭುತವಾಗಿ ನಮ್ಮ ಅಷ್ಟು ಸಮೀಪಕ್ಕೆ ಬಂದನು. ಪರಲೋಕದ ವಾತಾವರಣವೇ ನಮ್ಮನ್ನು*

*ಸುತ್ತುವರೆದಂತೆ ಭಾಸವಾಗುತ್ತಿತ್ತು ದೈವಿಕ "ಭಾರವಾದ ಮಹಿಮೆ" ಯಂತೆ ನಮ್ಮ ಮೇಲಿದ್ದುದರಿಂದ ನಾವು ನಮ್ಮ ಮುಖಗಳಲ್ಲಿ ಒರಗಿಕೊಂಡಿದ್ದೆವು. ಬಹಳ ದೀರ್ಘಕಾಲ ನಾವು ಕುಳಿತ ಸ್ಥಳದಲ್ಲೇ ಪ್ರಯಾಸದಿಂದ ಉಳಿದುಕೊಂಡಿದ್ದೆವು. ಕೆಲವು ಬಾರಿ ಪೂರ್ಣ ಕೂಟದ ಅವಧಿಯಲ್ಲಿ ಪ್ರತಿಯೊಬ್ಬರ ಮುಖವು ನೆಲದ ಮೇಲೆ ಇತ್ತು ನಾನು ಸಂಪೂರ್ಣವಾಗಿ ನನ್ನ ಮುಖವು ನೆಲದ ಮೇಲೆ ಪೂರ್ಣ ಉದ್ದವಾಗಿ ಒರಗಿರುವಂತೆ ಇರಲು ಸಾಧ್ಯವಾಯಿತು* (ಅಜುಸಾ ಸ್ಟ್ರೀಟ್, 1980 ಫ್ರಾಂಕ್ ಬಾರ್ಟ್ಲೆಲ್ ಮನ)

## ಮಹಿಮೆ ಅಂದರೇನು?

**ಅದಕ್ಕೆ ಮೋಶೆ - ನಿನ್ನ ಮಹಿಮೆಯನ್ನು (ಕಾಬೋಡ್) ದಯಮಾಡಿ ನನಗೆ ತೋರಿಸು ಎಂದು ಕೇಳಲಾಗಿ ಆತನು - ನನ್ನ ಸರ್ವೋತ್ತಮತ್ವವನ್ನು ನಿನ್ನೆದುರಾಗಿ ದಾಟಿ ಹೋಗುವಂತೆ ಮಾಡುವೆನು ಯೆಹೋವನ ನಾಮದ ಮಹತ್ವವನ್ನು ನಿನ್ನೆದುರಾಗಿ ಪ್ರಕಟಿಸುವೆನು. ಯಾವನ ಮೇಲೆ ದಯೆಯಿಡುವೆನೋ ಅವನ ಮೇಲೆ ದಯೆಯಿಡುವೆನು ಯಾರನ್ನು ಕರುಣಿಸುವೆನೋ ಅವರನ್ನು ಕರುಣಿಸುವೆನು ಅಂದನು** (ವಿಮೋಚನ ಕಾಂಡ 33:18-19)

ದೇವರ ಮಹಿಮೆಯು ಒಳ್ಳೇತನ, ದಯೆ, ಕರುಣೆ - ದೇವರ ವಾಸ್ತವಿಕ ಗುಣ ಮತ್ತು ಸ್ವಭಾವವಾಗಿದೆ. ಇದು ದೇವರ ಆಂತರಿಕ ವ್ಯಕ್ತಿಯಾಗಿದೆ. ಇದು ಆತನು ಏನು ಎಂಬುದಾಗಿದೆ.

ಯೇಸು ಕ್ರಿಸ್ತನಲ್ಲಿ ದೇವರ ಮಹಿಮೆಯನ್ನು ನಾವು ಕಾಣುತ್ತೇವೆ. (2 ಕೊರಿಂಥದವರಿಗೆ 4:6)

**ಯೇಸು ಈ ಮೊದಲನೆಯ ಸೂಚಕ ಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು; ಮತ್ತು ಆತನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು** (ಯೋಹಾನ 2:11)

ಯೇಸುವು ಸೂಚಕ ಕಾರ್ಯಗಳು, ಮಹತ್ಕಾರ್ಯಗಳು ಮತ್ತು ಅದ್ಭುತ ಕಾರ್ಯಗಳ ಮೂಲಕವಾಗಿ ದೇವರ ಮಹಿಮೆಯನ್ನು ತೋರ್ಪಡಿಸಿದನು.

ದೇವರ ಪ್ರಸನ್ನತೆಯ ಮಹಿಮೆಯು, ದೇವರು ಏನಾಗಿದ್ದಾನೆ ಆತನ ಪ್ರಸನ್ನತೆಯ ಪ್ರಭಾವ (ಭಾರ), ಆತನ ಒಳ್ಳೇತನ, ದಯೆ ಶ್ರೇಷ್ಟತೆ ಮುಂತಾದವುಗಳು

ಸೂಚಕಕಾರ್ಯ, ಮಹತ್ಕಾರ್ಯಗಳು ಮತ್ತು ಅದ್ಭುತಕಾರ್ಯಗಳ ಮೂಲಕ ನಮ್ಮ ಮಧ್ಯದಲ್ಲಿ ಬಿಡುಗಡೆಗೊಳ್ಳುವ ಸ್ಪಷ್ಟಸ್ಪರ್ಶಿಕ ತೋರ್ಪಡಿಸುವಿಕೆಯಾಗಿದೆ.

ಸತ್ಯವೇದದ ದೇವರು ಒಡಂಬಡಿಕೆಗಳನ್ನು ದಾಟಿಕೊಂಡು ಬರುವಾಗ ಮಾರ್ಪಟ್ಟಿಲ್ಲ (ಮಲಾಕಿಯ 3:6) ಹಳೇ ಒಡಂಬಡಿಕೆಯಲ್ಲಿ ಮಹಿಮೆ ಪ್ರಸನ್ನತೆಯಂತೆ ಆತನ ಪ್ರಸನ್ನತೆಯು ತೋರ್ಪಡಿಸಲ್ಪಟ್ಟಿದ್ದರೆ, ಈ ದಿನದಲ್ಲಿ ಆತನ ಮಹಿಮೆಯನ್ನು ನಾನು ಮತ್ತು ನೀವು ಅನುಭವಿಸದೆ ಇರುವುದಕ್ಕೆ ಯಾವುದೇ ಕಾರಣವಿಲ್ಲ!

''ನಿನ್ನ ಮಹಿಮೆಯನ್ನು ತೋರಿಸು'' ಎಂಬುದಾಗಿ ದೇವರು ಅಧಿಕವಾಗಿ ಬೇಕೆಂಬ ಹಂಬಲದಿಂದ ಮೋಶೆಯು ಕಣ್ಣೀರಿಟ್ಟಂತೆ ನಾವು ಸಹ ಆತನ ಆಂತರಿಕ ವ್ಯಕ್ತಿ, ಆತನು ಏನಾಗಿದ್ದಾನೆಂಬುದರಲ್ಲಿ ಅಧಿಕತೆ, ಆತನ ಮಹಿಮೆಯ ಪ್ರಸನ್ನತೆಯು ಅಧಿಕವಾಗಿ ಬೇಕೆಂಬ ಹಂಬಲ ಮತ್ತು ಹಸಿವು ಹೊಂದಿರಬೇಕು. ನಾವು ಆತನ ಬಲವನ್ನು ಮತ್ತು ಆತನ ಮಹಿಮೆಯನ್ನು ನೋಡಲು ಅಪೇಕ್ಷೆ ಹೊಂದಿರಬೇಕು. ಕೀರ್ತನೆಗಾರನಾದ ದಾವೀದನು ಯೆಹೂದ ಸೀಮೆಯ ಅರಣ್ಯದಲ್ಲಿದ್ದಾಗ ರಚಿಸಿದ ಕೀರ್ತನೆ:

**ದೇವರೇ ನೀನೇ ನನ್ನ ದೇವರು ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರು ನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ, ಶರೀರವು ಕಂದಿಹೋಗುತ್ತದೆ. ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ ಪ್ರಭಾವವನ್ನು ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ.** (ಕೀರ್ತನೆಗಳು 63:1-2)

ದೇವರ ಮಹಿಮೆಯ ಪ್ರಸನ್ನತೆಗಾಗಿ ಬಯಕೆ ಹೊಂದಿರಿ!

## ನಮ್ಮ ಸಾಮ್ರಾಜ್ಯದಲ್ಲಿ ಆತನ ಮಹಿಮೆಯು ಸ್ಪಷ್ಟವಾಗಿ ತೋರಿಸಲು ಏನು ಕಾರಣವಾಗಬಹುದು?

### ಸ್ತೋತ್ರ ಮತ್ತು ಆರಾಧನೆ ದೇವರ ಮಹಿಮೆಯನ್ನು ನಮ್ಮ ಮಧ್ಯಕ್ಕೆ ತರುತ್ತದೆ

**ಯಾಜಕರು ದೇವಾಲಯದಿಂದ ಹೊರಗೆ ಬಂದ ಕೂಡಲೆ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತೂರಿ ಊದುವವರೂ ಗಾಯನ ಮಾಡುವವರೂ ಅಲ್ಲಿ ನಿಂತಿದ್ದರು. ತುತೂರಿ ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಾಜ್ಞತಾಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು**

**ದೇವಾಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.** (2 ಪೂರ್ವಕಾಲ ವೃತ್ತಾಂತ 5:13,14)

## ಸಮರ್ಪಣೆಯ ಜೀವಿತ

ಸಮರ್ಪಣೆಯ ಜೀವಿತವು ದೇವರ ಮಹಿಮೆಯ ತೋರ್ಪಡಿಸುವಿಕೆಯನ್ನು ಸೆಳೆಯುತ್ತದೆ

**ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು.** (ಯೋಹಾನ 14:21)

## ನೀನು ನೋಡಲು ನಂಬುವುದು ಅಗತ್ಯ

**ಜೀವಲೋಕದಲ್ಲಿಯೇ ಯೆಹೋವನ ದಯೆಯನ್ನು ಅನುಭವಿಸುವೆನೆಂದು ದೃಢವಾಗಿ ನಂಬಿದ್ದೇನೆ.** (ಕೀರ್ತನೆಗಳು 27:13)

ವಿಮೋಚನೆ ಕಾಂಡ 33:19 ರಲ್ಲಿ ನಾವು ನೋಡಿದಂತೆ ದೇವರ ಮಹಿಮೆಯು ದೇವರ ಒಳ್ಳೇತನದ ಭಾವವಾಗಿದೆ ''ಇಂದಿನ ಪ್ರಸಕ್ತ ಜೀವಿತದಲ್ಲಿ'' ಆತನ ಒಳ್ಳೆಯತನದ ತೋರ್ಪಡಿಸುವಿಕೆಯಿಂದ ತೋರುವ ದೇವರ ಮಹಿಮೆಯನ್ನು ನಾವು ನೋಡುತ್ತೇವೆ ಎಂಬುದಾಗಿ ನಾವು ನಂಬಬೇಕು.

**''ಯೇಸು ಆಕೆಗೆ ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಎಂದು ನಾನು ನಿನಗೆ ಹೇಳಲಿಲ್ಲವೇ ಎಂದು ಉತ್ತರ ಕೊಟ್ಟನು''** (ಯೋಹಾನ 11:40)

ದೇವರು ಯಾರಾಗಿದ್ದಾನೆ ಮತ್ತು ಆತನು ಏನು ಮಾಡುತ್ತಾನೆಂಬುದರ ತೋರ್ಪಡಿಸುವಿಕೆಯನ್ನು ವ್ಯಾಖ್ಯಾನಿಸುವ ಸನ್ನಿವೇಶದಲ್ಲಿ ಮಹಿಮೆಗೆ ''ಡೋಕ್ಸಾ'' ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿದೆ.

## ನಮ್ಮ ಮಧ್ಯದಲ್ಲಿ ದೇವರ ಮಹಿಮೆಯನ್ನು ಬಿಡುಗಡೆಗೊಳಿಸುವುದು ಯಾವುದು?

ದೇವರ ಪ್ರಸನ್ನತೆಯ ಮಹಿಮೆಯು ದೇವರನ್ನೇ ಆತನು ಏನಾಗಿದ್ದಾನೋ ಅವೆಲ್ಲವುಗಳನ್ನು ಆತನ ಒಳ್ಳೇಯತನ, ಕೃಪೆ ಮತ್ತು ಕರುಣೆಗಳನ್ನು ನಮ್ಮ ಮಧ್ಯದಲ್ಲಿ ಬಿಡುಗಡೆಗೊಳಿಸುತ್ತದೆ. ಇದು ಆತನ ಒಳ್ಳೇತನ, ಕೃಪೆ ಮತ್ತು ಕರುಣೆಗಳಿಂದ ದೇವರು

ಧಾರಾಳವಾಗಿ ಕೊಡುವಂತಹವುಗಳು ಮತ್ತು ಪ್ರಕೃತ್ಯಾತೀತ ಸೂಚಕ ಕಾರ್ಯಗಳು, ಸ್ವಸ್ಥತೆಗಳು, ಅದ್ಭುತ ಕಾರ್ಯಗಳ ಮೂಲಕವಾಗಿ ತೋರ್ಪಡಿಸುತ್ತದೆ!

ದೇವರ ಪ್ರಸನ್ನತೆಯ ಮಹಿಮೆಯು ದೇವರ ಗುಡುಗನ್ನು (ಧ್ವನಿ) ಬಿಡುಗಡೆಗೊಳಿಸುತ್ತದೆ. (ಕೀರ್ತನೆಗಳು 18:13,14 ಕೀರ್ತನೆಗಳು 29:3)

ನಾವೆಲ್ಲರೂ ಒಟ್ಟಾಗಿ ಸೇರಿ ಬಂದು ಆತನ ಪ್ರಸನ್ನತೆಯು ಅತ್ಯಧಿಕವಾಗಿ ಬೇಕೆಂದು ಇಚ್ಛೆಪಡುವಾಗ ದೇವರು ನಮ್ಮ ಮಧ್ಯಕ್ಕೆ ಆತನ ಮಹಿಮೆಯನ್ನು ಬಿಡುಗಡೆಗೊಳಿಸುತ್ತಾನೆ. ನಾವು ಆತನ ಮಹಿಮೆಯ ಭಾರವನ್ನು ಅನುಭವಿಸುತ್ತೇವೆ. ಆತನ ಒಳ್ಳೇಯತನ, ದಯೆ ಮತ್ತು ಕರುಣೆಯನ್ನು ಪ್ರಕಟಮಾಡುವ ದೇವರ ಪ್ರಸನ್ನತೆ ಮಹಿಮೆಯು ಭಿನ್ನ ಸ್ಪಷ್ಟ ತೋರ್ಪಡಿಸುವಿಕೆಗಳಿರುತ್ತದೆ ಮತ್ತು ಇನ್ನೂ ಅನೇಕವಾದವುಗಳಿರುತ್ತವೆ.

ಕೆಲವು ಬಾರಿ ದೇವರು ಆತನ ಪ್ರಸನ್ನತೆಯ ಮಹಿಮೆಯನ್ನು ಆತನ ಮಹಿಮೆಯಿಂದ ತೋರುವ ವಿಷಯಗಳನ್ನು ಮಾಡುವುದರಿಂದ ಪ್ರಕಟಪಡಿಸುತ್ತಾನೆ. ಯಾವಾಗ ಚಿನ್ನದ ಧೂಳು ಬೀಳುತ್ತದೋ, ಯಾವಾಗ ಜನರ ಕೈಗಳಲ್ಲಿ ಎಣ್ಣೆಯು ಕಾಣಿಸಿಕೊಳ್ಳುತ್ತದೊ, ಯಾವಾಗ ದೇವರು ಹಲ್ಲುಗಳನ್ನು ಚಿನ್ನದೊಡನೆ ತುಂಬುತ್ತಾನೊ, ಯಾವಾಗ ಜನರು ಕಳೆದು ಹೋದ ಅಂಗಗಳ ಬದಲು ಹೊಸದನ್ನು ಹೊಂದುತ್ತಾರೊ, ಯಾವಾಗ ಕಳೆದುಹೋದ ಕೈಕಾಲುಗಳು ತಕ್ಷಣವಾಗಿ ಕಾಣಿಸಿಕೊಳ್ಳುತ್ತವೋ, ಯಾವಾಗ ವಿಕಾರಗೊಂಡಿದ್ದ ದೇಹದ ಭಾಗಗಳು ನೇರಗೊಂಡು ಕಾರ್ಯನಿರ್ವಹಿಸಲು ಪ್ರಾರಂಭಗೊಳ್ಳುತ್ತವೋ, ಯಾವಾಗ ಲೋಹದಿಂದ ಒಳಸೇರಿದವುಗಳು ತಕ್ಷಣವಾಗಿ ಮೂಳೆ ಮತ್ತು ನಿಜ ಮಾಂಸದೊಡನೆ ಮುಂಚಿನ ಸ್ಥಳದಲ್ಲಿಡಲ್ಪಡುತ್ತವೋ ಇವೆಲ್ಲವೂ ಮತ್ತು ಇನ್ನೂ ಅಧಿಕವಾದವುಗಳು ದೇವರ ಪ್ರಸನ್ನತೆಯ ತೋರ್ಪಡಿಸುವಿಕೆಗಳಾಗಿರುತ್ತವೆ.

## ದೇವರು ಸಂದರ್ಶನ ಮಾಡುವುದು ಆತನ ಪ್ರಸನ್ನತೆಯ ವಾಸಸ್ಥಳ ಆಗುತ್ತದೆ

ದೇವರು ಭೂಮಿಯ ಮೇಲೆ ಆತನ ಮಹಿಮೆಯ ಪ್ರಸನ್ನತೆಯನ್ನು ಬಿಡುಗಡೆ ಮಾಡಲು ಇಚ್ಛೆ ಹೊಂದಿದವನಾಗಿ ಕಾಣಿಸಿಕೊಳ್ಳುತ್ತಾನೆ.

**ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯು (ಕಾಬೊಡ್) ಜ್ಞಾನವು ತುಂಬಿಕೊಂಡಿರುವುದು.** (ಹಬಕ್ಕೂಕ 2:14)

ದೇವರು, ಮೋಶೆಯು ಮರುಭೂಮಿಯಲ್ಲಿ ನಿರ್ಮಿಸಿದ ದೇವ ದರ್ಶನ ಗುಡಾರವನ್ನು ತುಂಬಿಸಲು ಆತನ ಮಹಿಮೆಯು ಪ್ರಸನ್ನತೆಯುನ್ನು ಬಿಡುಗಡೆಗೊಳಿಸಿದನು. (ವಿಮೋಚನ ಕಾಂಡ 40:33-35) ಅದೇ ರೀತಿಯ ದೇವರ ಪ್ರಸನ್ನತೆಯ ಮೇಘವು ಸೊಲೋಮೋನನ ದೇವಾಲಯವನ್ನು ತುಂಬಿಕೊಂಡಿತ್ತು (2ಪೂರ್ವಕಾಲ ವೃತ್ತಾಂತ 5: 11-14) ದೇವಾಲಯವು ಪುನಃ ಕಟ್ಟಲ್ಪಟ್ಟಾಗ, ದೇವರು ಈ ಆಲಯದ ಮಹಿಮೆಯು ಹಿಂದಿನ ವೈಭವಕ್ಕಿಂತ ವಿಶೇಷವಾಗಿರುವುದೇಂಬುದಾಗಿ ವಾಗ್ದಾನ ಮಾಡಿದ್ದಾನೆ. (ಹಗ್ಗಾಯ 2:9)

ಈ ದಿನದಲ್ಲಿ, ಸಭೆಗಳಾದ ನಾವು ದೇವರ ಆಲಯುವಾಗಿದ್ದೇವೆ. (1 ಕೊರಿಂಥದವರಿಗೆ 3:16;6:19; 2 ಕೊರಿಂಥದವರಿಗೆ 6:16) ಇಲ್ಲಿ ಆತನ ಮಹಿಮೆಯು ನೆಲೆಸಬೇಕಾಗಿದೆ.

‘‘**ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವುದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ.** (ಎಫೆಸದವರಿಗೆ 2:21,22)

ದೇವರು ನಮ್ಮಲ್ಲಿ ಆತನ ಆತ್ಮನ ಮೂಲಕವಾಗಿ ವಾಸಿಸುತ್ತಾನೆ. ಇದು ಆತನ ಅಗೋಚರತೆ ಮತ್ತು ಆತನ ಜನರಾದ ನಮ್ಮ ಮಧ್ಯದಲ್ಲಿ ನೆಲೆಗೊಂಡಿರುವ ಆತನ ಪ್ರಸನ್ನತೆಯಾಗಿದೆ ಹಾಗಿದ್ದರೂ ಆತನ ಪ್ರಸನ್ನತೆಯು ಗೊತ್ತಾಗಬೇಕೆಂಬುದು ದೇವರ ಅಪೇಕ್ಷೆಯಾಗಿದೆ. ಆತನು ಭೂಮಿಯ ಮೇಲೆ ಆತನ ಮಹಿಮೆಯ ಪ್ರಸನ್ನತೆಯನ್ನು ಪ್ರಕಟಿಸಲು ಇಚ್ಛೆ ಹೊಂದಿದ್ದಾನೆ.

ಪರಲೋಕದ ಮಾದರಿಯ ರೀತಿಯಲ್ಲೇ ದೇವದರ್ಶನದ ಗುಡಾರವನ್ನು ನಿರ್ಮಿಸಬೇಕೆಂಬುದಾಗಿ ಮೋಶೆಯು ಹೇಳಲ್ಪಟ್ಟಿದ್ದನು. ದೇವರಿಗೆ ಪರಲೋಕದ ಪ್ರತಿಯು ಭೂಲೋಕದಲ್ಲಿ ಬೇಕಾಗಿದೆ. ಆತನು ನೆಲೆಸಲು ಮೆಚ್ಚುವ ಸ್ಥಳವನ್ನು ನಾವು ಮಾಡಬೇಕು. ಯಾವಾಗ ಮೋಶೆಯು ಪರಲೋಕದ ಮಾದರಿಯ ಪ್ರಕಾರವಾಗಿ ಇದನ್ನು ನಿರ್ಮಿಸಿದನೋ ಆಗ ದೇವರ ಮಹಿಮೆಯು ಕೆಳಗೆ ಬಂದು ಗುಡಾರವನ್ನು

ತುಂಬಿಕೊಂಡಿತು. ಯಾವಾಗ ಭೂಮಿಯ ಮೇಲಿರುವ ದೇವ ದರ್ಶನದ ಗುಡಾರವು ಪರಲೋಕದಲ್ಲಿರುವ ರೀತಿಯಲ್ಲಿ ಸ್ತೋತ್ರ ಮತ್ತು ಆರಾಧನೆಯೊಡನೆ ತುಂಬಿಕೊಳ್ಳುತ್ತದೋ, ಆಗ ಪವಿತ್ರಗೊಳಿಸುವ, ಪವಿತ್ರ ದೇವರು ಇದನ್ನು ಆತನ ಮಹಿಮೆಯ ಪ್ರಸನ್ನತೆಯಿಂದ ತುಂಬಿಸುತ್ತಾನೆ. ಭೂಮಿಯ ಮೇಲೆ ನಾವು ಆತನ ಮಹಿಮೆ ಪ್ರಸನ್ನತೆಯ ವಾಸಸ್ಥಾನವಾಗಿ ಕಂಡು ಬರುತ್ತೇವೆ.

ನಾವು ದೇವರ ಸಂದರ್ಶನದ ಸಮಯಕ್ಕೆ ಹಸಿವು ಮತ್ತು ಬಯಕೆ ಹೊಂದಿರುವಾಗ, ನಾವು ಅದರಲ್ಲೇ ಒತ್ತು ಹಿಡಿದು ಮುಂದುವರೆಯಬೇಕು ಮತ್ತು ಇದನ್ನು ನಡೆಸಿಕೊಂಡು ಬರಬೇಕು. ಆದುದರಿಂದ ಆತನ ಸಂದರ್ಶನವು ನಮ್ಮ ಪಟ್ಟಣಗಳಲ್ಲಿ - ಭೂಮಿಯ ಮೇಲೆ ಆತನ ಮಹಿಮೆಯ ಪ್ರಸನ್ನತೆಯ ವಾಸಸ್ಥಳಗಳಾಗಿ ಕಂಡು ಬರುತ್ತವೆ.

**ಆತನ ಪ್ರಸನ್ನತೆಯ ಮಹಿಮೆ**

* ದೇವರ ಪ್ರಸನ್ನತೆಯ ಮಹಿಮೆಯು ದೇವರು ಏನಾಗಿದ್ದಾನೆ ಯಾರಾಗಿದ್ದಾನೆ ಎಂಬುದರ ಸ್ಪಷ್ಟ ತೋರ್ಪಡಿಸುವಿಕೆಯಾಗಿದೆ ಒಂದೋ ಭಾರವಾದ ಪ್ರಸನ್ನತೆ ಇಲ್ಲವೆ ಆತನ ಒಳ್ಳೆಯತನ, ಕರುಣೆ, ದಯೆಗಳಿಗೆ ಕಾರಣವಾದ ಗೋಚರ ಮಹಿಮೆಯ ಮೇಘ ಮುಂತಾದವುಗಳು ಸೂಚಕ ಕಾರ್ಯ ಮಹತ್ಕಾರ್ಯ ಮತ್ತು ಅದ್ಭುತ ಕಾರ್ಯಗಳ ಮೂಲಕವಾಗಿ ನಮ್ಮ ಮಧ್ಯದಲ್ಲಿ ಬಿಡುಗಡೆಗೊಳ್ಳುತ್ತವೆ.
* ಸ್ತೋತ್ರ ಮತ್ತು ಆರಾಧನೆ, ಸಮರ್ಪಣೆಯ ಜೀವಿತ ಮತ್ತು ನಂಬಿಕೆಯು ನಮ್ಮ ಸಾಮ್ರಾಜ್ಯದಲ್ಲಿ ಆತನ ಮಹಿಮೆಯ ತೋರ್ಪಡಿಸುವಿಕೆಗೆ ಕಾರಣವಾದ ದೇವರ ಮಹಿಮೆಯನ್ನು ನಾವು ನೋಡುವಂತೆ ಮಾಡುತ್ತದೆ
* ಆತನ ಪ್ರಸನ್ನತೆಯು ಗೊತ್ತಾಗುವಂತೆ ಮಾಡಬೇಕೆಂಬುದು ದೇವರ ಅಪೇಕ್ಷೆಯಾಗಿದೆ. ಭೂಮಿಯು ಮೇಲೆ ಆತನ ಮಹಿಮೆಯ ಪ್ರಸನ್ನತೆಯನ್ನು ಪ್ರಕಟಪಡಿಸಬೇಕೆಂಬುದಾಗಿ ದೇವರು ಇಚ್ಛಿಸುತ್ತಾನೆ.

# 8
# ಆತನ ಪ್ರಸನ್ನತೆಯ ಬಲ

**ದೇವರೇ ನೀನೇ ನನ್ನ ದೇವರು ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರು ನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ. ಶರೀರವು ಕಂದಿಹೋಗುತ್ತದೆ. ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ** (ಕೀರ್ತನೆಗಳು 63:1,2).

ದೇವರಿಗಾಗಿ ನಮ್ಮ ಹಾತೊರೆಯುವಿಕೆಯು ಕೂತೂಹಲವು ಆತನ ಮಹಿಮೆ ಮತ್ತು ಬಲವನ್ನು ಕಾಣಬೇಕೆಂಬ ಅಪೇಕ್ಷೆಯ ತೋರುವಿಕೆಯಾಗಿದೆ. ದೇವರ ಬಲ ಮತ್ತು ಮಹಿಮೆಯ ತೋರ್ಪಡಿಸುವಿಕೆಯನ್ನು ಕಾಣುವ ಭಾವೋದ್ದೀಪ್ತ ಇಚ್ಛೆಯನ್ನು ಹೊಂದಿರುವುದರಲ್ಲಿ ಪರಿಪೂರ್ಣವಾಗಿ ಯಾವುದೇ ತಪ್ಪಿಲ್ಲ.

## ದೇವರ ಪ್ರಸನ್ನತೆಯು ಆತನ ಬಲದ ಸ್ಥಳವಾಗಿದೆ

**ಆತನು ನಿಮ್ಮ ಪಿತೃಗಳನ್ನು ಪ್ರೀತಿಸಿ ಅವರ ತರುವಾಯ ಅವರ ಸಂತತಿಯವರಾದ ನಿಮ್ಮನ್ನೂ ಆದುಕೊಂಡು ತಾನೇ ನಿಮ್ಮೊಂದಿಗಿದ್ದು ತನ್ನ ಅಪಾರ ಸಾಮರ್ಥ್ಯದಿಂದ ನಿಮ್ಮನ್ನು ಐಗುಪ್ತದೇಶದೊಳಗಿಂದ ಬರಮಾಡಿದನಲ್ಲಾ** (ಧರ್ಮೋಪದೇಶಕಾಂಡ 4:37).

**ದೇವರು ತೇಮಾನಿನಿಂದ ಬರುತ್ತಾನೆ, ಸದಮಲಸ್ವಾಮಿಯು ಪಾರಾನ್ ಪರ್ವತದಿಂದ ಐತರುತ್ತಾನೆ; ಸೆಲಾ. ಆತನ ಪ್ರಭಾವವು ಆಕಾಶಮಂಡಲವನ್ನು ಆವರಿಸುತ್ತಿದೆ ಆತನ ಮಹಿಮೆಯು ಭೂಮಂಡಲವನ್ನು ತುಂಬುತ್ತಿದೆ; ಆತನ ತೇಜಸ್ಸು ಸೂರ್ಯನಂತಿದೆ ಅದರ ಪಕ್ಕಗಳಲ್ಲಿ ಕಿರಣಗಳು ಹೊರಡುತ್ತಿವೆ; ಅದೇ ಆತನ ಶಕ್ತಿನಿಧಿ (ಹಬಕ್ಕೂಕ 3:3,4)**

**ನೀವೂ ನನ್ನಾತ್ಮನೂ ಕರ್ತನಾದ ಯೇಸುವಿನ ಸಾಮರ್ಥ್ಯ ಸಹಿತ ಒಟ್ಟುಗೂಡಿ ಬಂದಿರಲಾಗಿ** (1 ಕೊರಿಂಥದವರಿಗೆ 5:4).

**ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು** (2 ಥೆಸಲೋನಿಕದವರಿಗೆ 1:9).

ದೇವರ ಪ್ರಸನ್ನತೆಯು ಆತನ ಬಲದ ಸ್ಥಳವಾಗಿದೆ. ದೇವರ ಪ್ರಸನ್ನತೆಯು ಎಲ್ಲಿ ಬಿಡುಗಡೆಗೊಳ್ಳುತ್ತದೋ ಅಲ್ಲಿ ನಾವು ಆತನ ಬಲದ ತೋರ್ಪಡಿಸುವಿಕೆಗಳನ್ನು ನಿರೀಕ್ಷಿಸಬಹುದು.

## ದೇವರ ಬಲವು, ದೇವರ ಮಹತ್ಕಾರ್ಯಗಳನ್ನು ಬಿಡುಗಡೆಗೊಳಿಸುತ್ತದೆ

**ಒಂದಾನೊಂದು ದಿನದಲ್ಲಿ ಆತನು ಉಪದೇಶ ಮಾಡುತ್ತಿರಲು ಗಲಿಲಾಯ ಯೂದಾಯಗಳ ಎಲ್ಲಾ ಗ್ರಾಮಗಳಿಂದಲೂ ಯೆರೂಸಲೇಮಿನಿಂದಲೂ ಬಂದಿದ್ದ ಫರಿಸಾಯರೂ ನ್ಯಾಯಶಾಸ್ತ್ರಿಗಳೂ ಆತನ ಹತ್ತಿರ ಕೂತುಕೊಂಡಿದ್ದರು ಗುಣಮಾಡುವದಕ್ಕೆ ಕರ್ತನ ಶಕ್ತಿಯು ಆತನಲ್ಲಿತ್ತು** (ಲೂಕ 5:17)

**ಆಮೇಲೆ ಆತನು ಅವರ ಸಂಗಡ ಬೆಟ್ಟದಿಂದ ಇಳಿದು ಸಮಭೂಮಿಯಲ್ಲಿ ನಿಂತನು. ಆತನ ಶಿಷ್ಯರ ದೊಡ್ಡ ಗುಂಪು ಮತ್ತು ಎಲ್ಲಾ ಯೂದಾಯದಿಂದಲೂ ಯೆರೂಸಲೇಮಿನಿಂದಲೂ ತೂರ್ ಸೀದೋನ್ ಪಟ್ಟಣಗಳಿರುವ ಸಮುದ್ರತೀರದಿಂದಲೂ ಬಂದಿದ್ದ ಜನರ ಮಹಾ ಸಮೂಹವು ಆತನ ಸಂಗಡ ಇದ್ದವು. ಆ ಜನರು ಆತನ ಉಪದೇಶವನ್ನು ಕೇಳುವದಕ್ಕೂ ಬಂದಿದ್ದರು ಅವರಲ್ಲಿ ದೆವ್ವಗಳ ಕಾಟವಿದ್ದವರು ಸ್ವಸ್ಥವಾದರು ಮತ್ತು ಆತನಿಂದ ಶಕ್ತಿ ಹೊರಟು ಎಲ್ಲರನ್ನು ವಾಸಿಮಾಡುತ್ತಿದ್ದದರಿಂದ ಆ ಗುಂಪಿನ ಜನರೆಲ್ಲಾ ಆತನನ್ನು ಮುಟ್ಟುವದಕ್ಕೆ ಪ್ರಯತ್ನ ಮಾಡಿದರು** (ಲೂಕ 6:17-19).

**ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹುಬಲವಾಗಿ ಸಾಕ್ಷಿ ಹೇಳುತ್ತಿದ್ದರು. ಬಹಳ ದಯವು ಅವರೆಲ್ಲರ ಮೇಲೆ ಇತ್ತು** (ಅಪೊಸ್ತಲರ ಕೃತ್ಯಗಳು 4:33).

**ಇದಲ್ಲದೆ ಅಪೊಸ್ತಲರ ಕೈಯಿಂದ ಅನೇಕ ಸೂಚಕಕಾರ್ಯಗಳೂ ಅದ್ಭುತ ಕಾರ್ಯಗಳು ಜನರಲ್ಲಿ ನಡೆಯುತ್ತಾ ಇದ್ದವು ಮತ್ತು ಎಲ್ಲರು ಒಗ್ಗಟ್ಟಾಗಿ ಸೊಲೊಮೋನನ ಮಂಟಪದಲ್ಲಿ ಇರುತ್ತಿದ್ದರು ಅವರ ಜೊತೆಯಲ್ಲಿರುವದಕ್ಕೆ ಮಿಕ್ಕಾದವರೊಳಗೆ ಒಬ್ಬರಿಗೂ ಧೈರ್ಯವಿರಲಿಲ್ಲ. ಆದರೂ ಜನರು ಅವರನ್ನು ಬಹಳವಾಗಿ ಕೊಂಡಾಡುತ್ತಿದ್ದರು; ಮತ್ತು ಇನ್ನು ಎಷ್ಟೋ ಮಂದಿ ಗಂಡಸರೂ ಹೆಂಗಸರೂ ಕರ್ತನಲ್ಲಿ ನಂಬಿಕೆಯಿಡುವವರಾಗಿ ಅವರ ಮಂಡಲಿಯಲ್ಲಿ ಸೇರಿಕೊಳ್ಳುತ್ತಿದ್ದರು. ಹೀಗಿರುವುದರಿಂದ ಜನರು ರೋಗಿಗಳನ್ನು ದೋಲಿಗಳ ಮೇಲೆಯೂ ಹಾಸಿಗೆಗಳ ಮೇಲೆಯೂ ಇಟ್ಟು ಪೇತ್ರನು ಬರುವಾಗ್ಗೆ ಅವನ ನೆರಳು ಇವರಲ್ಲಿ ಯಾವಾನ ಮೇಲಾದರೂ ಬೀಳಲಿ ಎಂದು ಅವರನ್ನು ಬೀದಿಗೆ ತೆಗೆದುಕೊಂಡು ಬರುತ್ತಿದ್ದರು. ಯೆರೂಸಲೇಮಿನ ಸುತ್ತಲಿರುವ ಊರುಗಳ ಜನರು ಸಹ ರೋಗಿಗಳನ್ನು ದೆವ್ವಗಳ ಕಾಟವಿದ್ದವರನ್ನೂ ಹೊತ್ತುಕೊಂಡು ಗುಂಪು ಗುಂಪಾಗಿ ಬರುತ್ತಿದ್ದರು; ಅವರೆಲ್ಲರಿಗೂ ವಾಸಿಯಾಗುವದು** (ಅಪೊಸ್ತಲರ ಕೃತ್ಯಗಳು 5:12-16).

ದೇವರ ಬಲವು ಪ್ರಬಲವಾದ ಅದ್ಭುತಕಾರ್ಯಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳು ನಮ್ಮ ಮಧ್ಯದಲ್ಲಿ ಸಂಭವಿಸಲು ಕಾರಣವಾಗುತ್ತದೆ.

ನಾವು ದೇವರ ಪ್ರಸನ್ನತೆಯಲ್ಲಿರುವ ಪ್ರತಿಯೊಂದು ಬಾರಿಯೂ ನಾವು ಅಂತಹ ವಿಷಯಗಳು ಜರುಗುವುದನ್ನು ನಿರೀಕ್ಷಿಸಬೇಕು.

## ನಂಬಿಕೆಯು ದೇವರ ಬಲವನ್ನು ಸೆಳೆಯುತ್ತದೆ.

ದೇವರ ಪ್ರಸನ್ನತೆಯು ಬಿಡುಗಡೆಗೊಳ್ಳುವ ಪರಿಸರದಲ್ಲಿ ನಾವು ಇರುವಾಗ, ದೇವರ ಬಲವು ನಮ್ಮ ಮಧ್ಯದಲ್ಲಿಯೇ ಇರುತ್ತದೆಂಬುದಾಗಿ ನಾವು ತಿಳಿಯುವುದು ಅಗತ್ಯ.

ನಮ್ಮ ಜೀವಿತಗಳಿಗೆ, ನಮ್ಮ ದೇಹಗಳಿಗೆ, ನಮ್ಮ ಕಷ್ಟದ ಪರಿಸ್ಥಿತಿಗಳಿಗೆ ದೇವರ ಬಲವು ಬಿಡುಗಡೆಗೊಳ್ಳಲು, ಮತ್ತು ಸ್ವಸ್ಥತೆ ತರಲು, ಅದ್ಭುತ ಕಾರ್ಯಗಳಿಗೆ ಕಾರಣವಾಗಲು ಇನ್ನೂ ಅಧಿಕವಾದವುಗಳಾಗಲು ನಾವು ನಂಬಿಕೆಯಿಂದ ದೇವರ ಬಲದೊಳಕ್ಕೆ ಹೋಗಿ ಅದನ್ನು ಹೊಂದಿಕೊಳ್ಳುವುದೇ ಆಗಿದೆ

**ಆಗ ಹನ್ನೆರಡು ವರುಷದಿಂದ ರಕ್ತ ಕುಸುಮರೋಗವಿದ್ದ ಒಬ್ಬ ಹೆಂಗಸು ಬಂದಳು ಆಕೆಯು ಒಬ್ಬರಿಂದಲೂ ಗುಣಹೊಂದಲಾರದೆ ಇದ್ದಳು. ಆಕೆಯು ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು; ಮುಟ್ಟುತ್ತಲೇ ಆಕೆಗೆ ರಕ್ತಹರಿಯುವುದು ನಿಂತಿತು. ಆಗ ಯೇಸು ನನ್ನನು ಮುಟ್ಟಿದವರು ಯಾರು ಎಂದು ಕೇಳಿದನು. ಎಲ್ಲರು ನಾನಲ್ಲ ನಾನಲ್ಲ ಅನ್ನಲು ಪೇತ್ರನು ಗುರುವೇ ಎಷ್ಟೋ ಜನರು ನಿನ್ನನ್ನು ಒತ್ತೊತ್ತಿ ಮೈಮೇಲೆ ಬೀಳುತ್ತಿದ್ದಾರಲ್ಲಾ ಅಂದನು. ಆದರೆ ಯೇಸು ಯಾರೋ ಒಬ್ಬರು ನನ್ನನ್ನು ಮುಟ್ಟಿದರು; ನನ್ನಿಂದ ಶಕ್ತಿಯು ಹೊರಟಿತೆಂಬದು ನನಗೆ ಗೊತ್ತಾಯಿತು ಅಂದಾಗ ಆ ಹೆಂಗಸು ತಾನು ಮರೆಯಾಗಿಲ್ಲವೆಂತ ತಿಳಿದು ನಡುಗುತ್ತಾ ಬಂದು ಆತನಿಗೆ ಅಡ್ಡಬಿದ್ದು ತಾನು ಇಂಥ ಕಾರಣದಿಂದ ಈತನನ್ನು ಮುಟ್ಟಿದೆನೆಂತಲೂ ಮುಟ್ಟಿದ ಕೂಡಲೇ ತನಗೆ ವಾಸಿಯಾಯಿತೆಂತಲೂ ಎಲ್ಲಾ ಜನರ ಮುಂದೆ ತಿಳಿಸಿದಳು. ಆತನು ಆಕೆಗೆ - ಮಗಳೇ ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು ಸಮಾಧಾನದಿಂದ ಹೋಗು ಎಂದು ಹೇಳಿದನು** (ಲೂಕ 8:43-48).

**ಆ ದಿನವನ್ನು ನಾವು ಎದುರು ನೋಡುತ್ತಾ ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆ ಮಾಡಿ ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯರೆಂದು ಎಣಿಸಬೇಕೆಂತಲೂ ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿ ಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಬೇಡಿಕೊಳ್ಳುತ್ತೇವೆ** (2 ಥೆಸಲೋನಿಕದವರಿಗೆ 1:11).

ದೇವರು ನಮ್ಮ ನಂಬಿಕೆಯ ಕೆಲಸಗಳನ್ನು ಆತನ ಬಲದೊಡನೆ ಪೂರ್ಣಗೊಳಿಸುತ್ತಾನೆ. ನಮ್ಮ ನಂಬಿಕೆಯನ್ನು ನಾವು ಅಭ್ಯಾಸಿಸುವಾಗ ದೇವರ ಬಲವು ಪ್ರಕೃತ್ಯಾತೀತ ತೋರ್ಪಡಿಸುವಿಕೆಗಳ ಕಡೆಗೆ ಕಾರ್ಯನಿರತವಾಗಿರುತ್ತದೆ.

## ಆತನ ಪ್ರಸನ್ನತೆಯ ಬಲ

* ದೇವರ ಪ್ರಸನ್ನತೆಯು ಆತನ ಬಲದ ಸ್ಥಳವಾಗಿದೆ
* ದೇವರ ಬಲವು ದೇವರ ಪ್ರಬಲ ಕಾರ್ಯಗಳನ್ನು ಬಿಡುಗಡೆಗೊಳಿಸುತ್ತದೆ.
* ನಂಬಿಕೆಯು ದೇವರ ಬಲದೊಳಗಿನಿಂದ ಹೊಂದಿಕೊಳ್ಳುತ್ತದೆ.

# 9

# ಸಾಂಘಿಕವಾಗಿ ದೇವರ ಪ್ರಸನ್ನತೆಯನ್ನು ಸ್ವಾಗತಿಸುವುದು

ದೇವರ ಪ್ರಸನ್ನತೆಯ ಮೇಲಿನ ಈ ಅಧ್ಯಯನವು ಆತನ ಪ್ರಸನ್ನತೆಗಾಗಿ ನಮ್ಮ ಹಸಿವನ್ನು ಹೆಚ್ಚಿಸಿ ಆತನ ತೋರ್ಪಡಿಸುವಿಕೆಯನ್ನು ಎದುರುನೋಡಲು ನಮಗೆ ಪ್ರೋತ್ಸಾಹ ನೀಡುವಂತೆ ಮಾಡುವುದಾಗಿದೆ.

ನಿಮ್ಮ ದೇವರೊಂದಿಗಿನ ವೈಯಕ್ತಿಕ ಸಮಯದಲ್ಲಿ, ಆತನನ್ನು ಹಿಂಬಾಲಿಸಿರಿ ಮತ್ತು ಆತನ ಪ್ರಸನ್ನತೆಯು ಅಧಿಕವಾಗಿ ಬೇಕೆಂಬುದಾಗಿ ತವಕಿಸುವ ಅಪೇಕ್ಷೆಯುಳ್ಳವರಾಗಿರಿ. ನಿಮ್ಮ ದೇವರೊಂದಿಗಿನ ನಿಮ್ಮ ವೈಯಕ್ತಿಕ ಸಮಯವು ಒಣಗಿದ ಧಾರ್ಮಿಕ ಕಾರ್ಯದ ಏಕ ಪ್ರಕಾರವಾದ ಆಚರಣೆ, ಧಾರ್ಮಿಕ ವಿಧ್ಯುಕ್ತ ಕ್ರಿಯೆಗಳಿಗೆ ಸಂಬಂಧಿಸಿದವುಗಳಾಗಿ ಕಂಡು ಬರಲು ಅವಕಾಶ ನೀಡಬೇಡಿರಿ. ಆತನ ಪ್ರಸನ್ನತೆಯ ಹೊಸತನವು ಪ್ರತಿದಿನವೂ ನಿಮ್ಮ ಜೀವಿತಕ್ಕೆ ಕೃಪೆ ನೀಡಲು ಅಪೇಕ್ಷಿಸಿರಿ.

ಅದೇ ಪ್ರಕಾರವಾಗಿ, ನಾವು ಒಟ್ಟಾಗಿ ಜೊತೆಯಾಗಿ ಸೇರಿಬಂದಾಗ, ಅವುಗಳನ್ನು ಮಾಡಬೇಕೆಂಬುದರ ನಿಮಿತ್ತವಾಗಿ ಸುಮ್ಮನೆ ವಿಷಯಗಳನ್ನು ಮಾಡದೆ ಇರೋಣ. ನಾವು ಆರಾಧಿಸುವಾಗ, ನಾವು ದೇವರ ವಾಕ್ಯವನ್ನು ಕೇಳುವಾಗ, ನಾವು ಪ್ರಾರ್ಥಿಸುವಾಗ, ನಮ್ಮ ಮಧ್ಯದಲ್ಲಿ ಆತನ ಪ್ರಸನ್ನತೆಯು ಮುಟ್ಟುವ ರೀತಿಯ ಮಾರ್ಗಗಳಲ್ಲಿ ತೋರ್ಪಡಿಸಲ್ಪಡಲಿ ಎಂಬುದಾಗಿ ನಾವು ಅಪೇಕ್ಷಿಸೋಣ.

ನಾವು ಸಾಂಘಿಕವಾಗಿ ಪ್ರತಿಯೊಂದು ಸಮಯದಲ್ಲೂ ಪ್ರಬಲ ಅದ್ಭುತಕಾರ್ಯಗಳು, ಬದಲಾದ ಜೀವಿತಗಳು, ಗಮನಾರ್ಹ ಸ್ವಸ್ಥತೆಗಳು, ಮತ್ತು ಅತ್ಯಧಿಕ ವಾದವುಗಳಲ್ಲಿ ಅಧಿಕವಾದ ದೇವರ ಪ್ರಸನ್ನತೆಯ ತೋರ್ಪಡಿಸುವಿಕೆಯೊಡನೆ ನಮ್ಮ ಸಂಯುಕ್ತ ಸೇರುವಿಕೆಯು ತುಂಬಲ್ಪಡಲಿ.

ಕರ್ತನೇ ನಿನ್ನ ಪ್ರಸನ್ನತೆಯ ಬೆಂಕಿಯು ನಮ್ಮ ಮೇಲೆ ಸುರಿಯಲಿ!
ಕರ್ತನೇ, ನಿನ್ನ ಪ್ರಸನ್ನತೆಯ ಬೆಳಕು ನಮ್ಮ ಜೀವಿತಗಳಲ್ಲಿ ಪ್ರವಹಿಸಲಿ!
ಕರ್ತನೇ, ನಿನ್ನ ಪ್ರಸನ್ನತೆಯ ಮಳೆಯು ನಮ್ಮ ಮೇಲೆ ಸುರಿಯಲಿ!
ಕರ್ತನೇ, ನಿನ್ನ ಪ್ರಸನ್ನತೆಯ ಮಹಿಮೆಯು ನಮ್ಮ ಮೇಲೆ ವಿಶ್ರಮಿಸಲಿ!
ಕರ್ತನೇ, ನಿನ್ನ ಪ್ರಸನ್ನತೆಯ ಬಲವು ನಮ್ಮ ಮಧ್ಯದಲ್ಲಿ ಅದ್ಭುತಗಳಿಗೆ ಕಾರಣವಾಗಲಿ!

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ  ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಈ ಪುಸ್ತಕವು ಸತ್ವತಃ ದೇವರ ವಾಕ್ಯದಿಂದ ಆಯ್ದ ದೇವರ ದಿವ್ಯ ಪ್ರಸನ್ನತೆಯ ಕುರಿತ ಒಂದು ಅಧ್ಯಯನವಾಗಿದೆ. ಪರಿಶುದ್ಧ ಗ್ರಂಥಗಳು ದೇವರ ಪ್ರಸನ್ನತೆಯ ಕುರಿತು ಪ್ರಕಟಿಸುವುದೇನು ಎಂಬುದನ್ನು ತೋರಿಸುವುದು ಧ್ಯೇಯವಾಗಿದೆ, ಇದರಿಂದ ವಿಶ್ವಾಸಿಗಳು ಪ್ರೇರಣೆ ಹೊಂದಬೇಕು ಮತ್ತು ದೇವರನ್ನು ಹುಡುಕಲು ಪ್ರಚೋದನೆಗೊಳ್ಳಬೇಕು ಮತ್ತು ಆತನ ಪ್ರಸನ್ನತೆಯು ಅತ್ಯಧಿಕವಾಗಿ ಬೇಕೆಂಬ ಹೆಬ್ಬಯಕೆ ಅಥವಾ ಹಸಿವೆ ಹೊಂದಿರಬೇಕು.

ದೇವರ ವಾಕ್ಯದಲ್ಲಿ ನೆನೆಯಿರಿ ಮತ್ತು ನಿಮ್ಮ ಜೀವಿತಗಳಿಗೆ ಆತನ ಪ್ರಸನ್ನತೆಯನ್ನು ಆಹ್ವಾನಿಸಿ. ನೀವು ಆತನನ್ನು ಹಿಂಬಾಲಿಸುವಾಗ, ಆತನ ಪ್ರಸನ್ನತೆಯ ಅನುಭವವನ್ನು ನಿರೀಕ್ಷಿಸಿರಿ. ಆತನ ಅಧಿಕ ಪ್ರಸನ್ನತೆಗಾಗಿ ಹಸಿವು ಮತ್ತು ದಾಹ ಉಳ್ಳವರಾಗಿರಿ. ಆತನ ಪ್ರಸನ್ನತೆಯಲ್ಲಿರುವುದೆಂದರೆ ಸಾಮಾನ್ಯವಾಗಿ ನೀವು ಆತನ ಮುಖವನ್ನು ಹುಡುಕುವ ಸ್ಥಳದಲ್ಲಿ ದೇವರೊಂದಿಗೆ ನೀವು ಮುಖಾಮುಖಿಯಾಗುವುದಾಗಿದೆ.

ಇತರ ವಿಶ್ವಾಸಿಗಳೊಡನೆ ಜೊತೆಗೂಡಿ ಕರ್ತನನ್ನು ಮತ್ತು ಆತನ ಪ್ರಸನ್ನತೆಯನ್ನು ಸಾಂಘಿಕವಾಗಿ ಹುಡುಕಿರಿ. ಆತನೊಡನಿರುವುದು ಮತ್ತು ಆತನ ಪ್ರಸನ್ನತೆಯನ್ನು ಅನುಭವಿಸುವುದಕ್ಕೆ ಭೂಮಿಯ ಮೇಲಿರುವ ಯಾವುದೂ ಹೋಲಿಕೆಯಾಗಲಾರದು

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org